ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಮಾರ್ಚ್ 15, 2021

ಸಂಪುಟ : 47 ಸಂಚಿಕೆ : 315 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com



# ಅಜ್ಜಯ್ಯನ ತೇರು; ಹರಿದು ಬಂದ ಭಕ್ತ ಸಾಗರ

**ರಥೋತ್ಸವಕ್ಕೆ ಮೆರಗು ತಂದ ಜಾನಪದ ಕಲಾ-ಮೇಳಗಳು**

**ಕಟ್ಟಡ, ಮರಗಳ ಮೇಲೇರಿ ರಥೋತ್ಸವ ವೀಕ್ಷಿಸಿದ ಜನತೆ**

ಮಲೇಬೆನ್ನೂರು, ಮಾ. 14 – ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಮಹಾ ರಥೋತ್ಸವವು ಭಾನುವಾರ ಬೆಳಿಗ್ಗೆ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ನಂದಿಗುಡಿ ಬೃಹನ್ಮಠದ ಶ್ರಿ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ರಥಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿ ಸರಳ ಜಾತ್ರಾ ಮಹೋತ್ಸವಕ್ಕೆ ಗದ್ದುಗೆ ಟ್ರಸ್ಟ್ ಕಮಿಟಿಯವರು ನಿರ್ಧರಿಸಿ, ಸಾರ್ವಜನಿಕವಾಗಿ ಪ್ರಕಟಿಸಿದ್ದರೂ ರಥೋತ್ಸವಕ್ಕೆ ಜನ ಎಂದಿನಂತೆ ನಾಡಿನ ನಾನಾ ಭಾಗಗಳಿಂದ ಆಗಮಿಸಿದ್ದರು.

ಹೊರ ರಾಜ್ಯಗಳಿಂದ ಆಗಮಿಸುವ ಭಕ್ತರ ಸಂಖ್ಯೆ ಕಡಿಮೆ ಇತ್ತು. ಡೊಳ್ಳು, ಕೀಲು ಕುಣಿತ, ಗೊಂಬೆ ಕುಣಿತ, ಭಜನೆ, ಸಮಾಳ, ಹಲಗೆ ಸೇರಿದಂತೆ ವಿವಿಧ ಕಲಾ-ಮೇಳಗಳು ರಥೋತ್ಸವಕ್ಕೆ ಮೆರಗು ತಂದಿದ್ದವು. ಭಕ್ತರು ರಥದ ಮೇಲೆ ಮಂಡಕ್ಕಿ, ಮೆಣಸಿನಕಾಳು, ಬಾಳೆ ಹಣ್ಣು ಎಸೆದು ಭಕ್ತಿ ಸಮರ್ಪಿಸಿದರು.


ರಥೋತ್ಸವ ನಡೆಯುವ ಜಾಗದಲ್ಲಿ ವಿಶಾಲವಾದ ಸ್ಥಳ ಕೊರತೆ ಇರುವ ಕಾರಣ ಜನರು ಕಟ್ಟಡ, ಮರಗಳ ಮೇಲೆ ಕುಳಿತು ರಥೋತ್ಸವವನ್ನು ಕಣ್ತುಂಬಿ ಕೊಂಡರು.

ಗ್ರಾಮಾಂತರ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ್, ಸಿಪಿಐ ಸತೀಶ್, ಪಿಎಸ್‌ಐ ವೀರಬಸಪ್ಪ ಕುಸಲಾಪುರ ಅವರ ನೇತೃತ್ವ ದಲ್ಲಿ ಈ ಬಾರಿ ಭಾರೀ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಎಲ್ಲೆಡೆ ಸಿಸಿ ಟಿ.ವಿ ಕ್ಯಾಮರಾಗಳ ಕಣ್ಗಾವಲು ಇದ್ದ ಕಾರಣ ಪಿಕ್ ಪ್ಯಾಕೆಟ್ ಕಳ್ಳತನ ಸಂಖ್ಯೆ ಕಡಿಮೆ (2ನೇ ಪುಟಕ್ಕೆ)

# ಕೊರೊನಾ ಉಲ್ಬಣಕ್ಕೆ 'ಮಹಾ' ಕಾರಣ

## ದೇಶದ ಶೇ.60ರಷ್ಟು ಸೋಂಕುಗಳು ಮಹಾರಾಷ್ಟ್ರದಲ್ಲಿ ಪತ್ತೆ



ನವದೆಹಲಿ, ಮಾ. 14 – ದೇಶದಲ್ಲಿ ಕೊರೊನಾ ವೈರಸ್ ಸೋಂಕು ಹರಡುವಿಕೆ ಹೆಚ್ಚಾಗುತ್ತಿರುವುದಕ್ಕೆ ಮಹಾರಾಷ್ಟ್ರ ಪ್ರಮುಖ ಕಾರಣವಾಗಿದೆ. ಭಾನುವಾರ ಒಂದೇ ದಿನ ಮಹಾರಾಷ್ಟ್ರದಲ್ಲಿ 16,620 ಸೋಂಕುಗಳು ಕಂಡು ಬಂದಿವೆ. ರಾಜ್ಯದಲ್ಲಿ ಸತತ ಮೂರು ದಿನಗಳಿಂದ ಕೊರೊನಾ ಸೋಂಕುಗಳ ಸಂಖ್ಯೆ 15 ಸಾವಿರಕ್ಕಿಂತ ಹೆಚ್ಚಾಗಿಯೇ ಇದೆ.

ದೇಶದಲ್ಲಿ ಭಾನುವಾರ ಒಂದೇ ದಿನ ಒಟ್ಟು 25,959 ಸೋಂಕುಗಳು ಕಾಣಿಸಿಕೊಂಡಿವೆ. ದೇಶದ ಒಟ್ಟು ಸೋಂಕಿನಲ್ಲಿ ಶೇ.63ರಷ್ಟು ಪಾಲು ಮಹಾರಾಷ್ಟ್ರ ಒಂದರದ್ದೇ ಆಗಿದೆ. ಒಂದೇ ದಿನ 50 ಜನರು ಸಾವನ್ನಪ್ಪಿದ್ದು, ರಾಜ್ಯದಲ್ಲಿ 52,861 ಜನ ಇದುವರೆಗೂ ಕೊರೊನಾದಿಂದ ಸಾವನ್ನಪ್ಪಿದ್ದಾರೆ. ಇದುವರೆಗೂ ರಾಜ್ಯ ದಲ್ಲಿ 23.14 ಲಕ್ಷ ಸೋಂಕುಗಳು ಕಾಣಿಸಿಕೊಂಡಿವೆ.

ದೇಶದಲ್ಲಿ ಕೊರೊನಾ ಹೆಚ್ಚಾಗುತ್ತಿರುವುದಕ್ಕೆ ಮಹಾರಾಷ್ಟ್ರವೇ ಪ್ರಮುಖ ಕಾರಣ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಮಾಹಿತಿ ತಿಳಿಸಿದೆ. ಭಾನುವಾರ ಮಹಾರಾಷ್ಟ್ರ ಒಂದರಲ್ಲಿ 16,620 ಸೋಂಕುಗಳು ಕಂಡು ಬಂದಿದ್ದರೆ, ದೇಶದ ಉಳಿದ ಭಾಗದಲ್ಲಿ ಒಟ್ಟು 9,339 ಸೋಂಕುಗಳು ಕಂಡು ಬಂದಿವೆ.

ಮಹಾರಾಷ್ಟ್ರದಲ್ಲೂ ಸಹ ಕೆಲವೇ ಜಿಲ್ಲೆಗಳಲ್ಲಿ ಸೋಂಕಿನ ತೀವ್ರತೆ ಹೆಚ್ಚಾಗಿದೆ. ಮುಂಬೈ, ನಾಗಪುರ, ಪುಣೆ ಹಾಗೂ ನಾಸಿಕ್‌ಗಳಲ್ಲಿ ಅತಿ ಹೆಚ್ಚಿನ ಸೋಂಕಿತರು ಕಂಡು ಬರುತ್ತಿದ್ದಾರೆ. ಭಾನುವಾರ ಮುಂಬೈ ಒಂದರಲ್ಲೇ 1,963 ಜನ ಸೋಂಕಿತರು ಕಂಡು ಬಂದಿದ್ದಾರೆ. ಇದು ಕರ್ನಾಟಕದಲ್ಲಿ ಭಾನುವಾರ ಕಂಡು ಬಂದ ಸೋಂಕಿಗಿಂತ ಎರಡು ಪಟ್ಟು ಹೆಚ್ಚಾಗಿದೆ. ಕರ್ನಾಟಕದಲ್ಲಿ ಇದೇ ದಿನ 934 ಸೋಂಕುಗಳು ಕಂಡು ಬಂದಿವೆ. ಪುಣೆಯಲ್ಲಿ 1,780 ಹಾಗೂ ನಾಗಪುರದಲ್ಲಿ 1,976 ಸೋಂಕಿತರು ಕಂಡು ಬಂದಿದ್ದಾರೆ.

ಆದರೆ, ಸಮಾಧಾನಕರ ಅಂಶವೆಂದರೆ ಸೋಂಕು ಹೆಚ್ಚಾಗಿದ್ದರೂ, ಸಾವಿನ ಪ್ರಮಾಣ ಕಡಿಮೆ ಇದೆ. ಮಾರ್ಚ್ 1ರ ನಂತರ ಸೋಂಕಿನ ಪ್ರಮಾಣ ಶೇ.40ರಷ್ಟು ಹೆಚ್ಚಾಗಿದೆ. ಆದರೆ, ಸಾವುಗಳ ಪ್ರಮಾಣ ಕಡಿಮೆಯೇ ಇದೆ.

ಕಳೆದ ವರ್ಷ ಮೇ - ಜೂನ್ ಹಾಗೂ ಸೆಪ್ಟೆಂಬರ್ - ಅಕ್ಟೋಬರ್ ಅವಧಿಯಲ್ಲಿ ಹರಡಿದ ಸೋಂಕಿಗಿಂತ ಈ ಬಾರಿ ಹರಡಿದ ಕೊರೊನಾ ರೂಪಾಂತರಿಯಾಗಿದೆ. ಇದೂ ಸಹ ಸಾವು ಕಡಿಮೆಯಾಗಲು ಒಂದು ಕಾರಣ ಎಂದು ಹೇಳಲಾಗುತ್ತಿದೆ.

ಕಳೆದ ವಾರ ಸೋಂಕಿಗೆ ಹೋಲಿಸಿದರೆ ಸಾವಿನ ಪ್ರಮಾಣ ಶೇ.0.55ರಷ್ಟಿದೆ ಎಂದು ರಾಜ್ಯ ಆರೋಗ್ಯ ಇಲಾಖೆಯ ಉನ್ನತ ಅಧಿಕಾರಿ ಡಾ. ಪ್ರದೀಪ್ ಅವಟೆ ಹೇಳಿದ್ದಾರೆ. ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಮಹಾರಾಷ್ಟ್ರದಲ್ಲಿ ಸೋಂಕಿಗೆ ಹೋಲಿಸಿದರೆ ಸಾವಿನ ಪ್ರಮಾಣ ಶೇ.2.3ರಷ್ಟಿತ್ತು.

ಸೋಂಕು ಹೆಚ್ಚಾಗುತ್ತಿರುವಂತೆಯೇ ಹಲವು ಜಿಲ್ಲೆಗಳಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಲಾತೂರ್‌ನಲ್ಲಿ ಮಾರ್ಚ್ 31ರವರೆಗೆ ರಾತ್ರಿ ಕರ್ಫ್ಯೂ ವಿಧಿಸಲಾಗಿದೆ. ಹೋಟೆಲ್ ವಲಯದವರು ಕೊರೊನಾಗೆ ಸಂಬಂಧಿಸಿದಂತೆ ಕಠಿಣವಾಗಿ ನಿಯಮ ಪಾಲಿಸುವಂತೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಎಚ್ಚರಿಕೆಯನ್ನೂ ನೀಡಿದ್ದಾರೆ.

# 'ಸ್ವಚ್ಛ ದಾವಣಗೆರೆ'ಗೆ ಆದ್ಯತೆ

## ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಭರವಸೆ

**'ಚಿರಂತನ' ದಿಂದ 'ಕರ್ನಾಟಕ ಮಹಿಳಾ ಶ್ರೇಷ್ಠ ಪ್ರಶಸ್ತಿ ಪ್ರದಾನ' ಕಾರ್ಯಕ್ರಮ**

ದಾವಣಗೆರೆ, ಮಾ. 14 – ಸ್ವಚ್ಛತೆಯ ಸಮೀಕ್ಷೆಯಲ್ಲಿ ದಾವಣಗೆರೆ ಕೊನೆ ಸ್ಥಾನದಲ್ಲಿದ್ದು, ಇದನ್ನು ಮೊದಲ ಹತ್ತು ಸ್ಥಾನಗಳಲ್ಲಿ ತರಲು ಮುಂದಿನ ದಿನಗಳಲ್ಲಿ 'ಸ್ವಚ್ಛ ದಾವಣಗೆರೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಮೇಯರ್ ಎಸ್.ಟಿ. ವೀರೇಶ್ ತಿಳಿಸಿದ್ದಾರೆ.

ಚಿರಂತನ ಸಂಸ್ಥೆ ವತಿಯಿಂದ ನಗರದ ಶಿವಯೋಗಿ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ ಕರ್ನಾಟಕ ಮಹಿಳಾ ಶ್ರೇಷ್ಠ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ಸುಲಲಿತ ಜೀವನದ ಶ್ರೇಯಾಂಕದಲ್ಲಿ ದಾವಣಗೆರೆ ದೇಶದಲ್ಲೇ 9ನೇ ಸ್ಥಾನದಲ್ಲಿ ಮತ್ತು ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದೆ. ಆದರೆ, ಇದೇ ವೇಳೆ ಸ್ವಚ್ಛತೆಯಲ್ಲಿ ಹಿಂದೆ ಬಿದ್ದಿದೆ. ಹೀಗಾಗಿ ನಾಗರಿಕರ ಜೊತೆಗೂಡಿ ಸ್ವಚ್ಛ ದಾವಣಗೆರೆ ಕಾರ್ಯಕ್ರಮ ಜಾರಿಗೆ ತರಲಾಗುವುದು ಎಂದವರು ಹೇಳಿದ್ದಾರೆ.

ಪ್ರತಿ ಭಾನುವಾರ ಸಾರ್ವಜನಿಕರ ಜೊತೆ ಒಂದು ಗಂಟೆ ಸಭೆ ನಡೆಸುವ ಮೂಲಕ ಸ್ವಚ್ಛತೆಗೆ ಅಗತ್ಯ ಸಲಹೆಗಳನ್ನು ಪಡೆದು ಕ್ರಮ ವಹಿಸಲಾಗುವುದು. ಈ ಯೋಜನೆಗೆ ಸಾರ್ವಜನಿಕರ ಸಲಹೆ ಹಾಗೂ ಸಹಕಾರ ನೀಡಬೇಕೆಂದು ವೀರೇಶ್ ಕರೆ ನೀಡಿದರು.

ದಾವಣಗೆರೆಗೆ ರಾಷ್ಟ್ರ ಮಟ್ಟದ ಹೆಸರಾಂತ ಕಲಾವಿದರನ್ನು ಕರೆಸಿ ಕಾರ್ಯಕ್ರಮ ಆಯೋಜಿಸಲು ಯೋಜನೆ ರೂಪಿಸಲಾಗುವುದು ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಮಾತನಾಡಿದ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಬೆಳೆಯುವವರನ್ನು ನೋಡಿದಾಗ ಜನರಲ್ಲಿ ಹೊಟ್ಟೆ ಉರಿ ಸಹಜ. ಅವರು ಬೆಳೆಯುವವರಿಗೆ ನಿಂದನೆ ಹಾಗೂ ಅವಮಾನ ಮಾಡುತ್ತಾರೆ. ಈ ಅವಮಾನಗಳನ್ನು ಗೆಲ್ಲುತ್ತಾ ಹೋದರೆ ಸಾಧನೆ ಸಾಧ್ಯ ಎಂದು ಹೇಳಿದರು.

ಮಹಿಳಾ ಸಾಧಕಿಯರನ್ನು ಗುರುತಿಸಿ, ಸನ್ಮಾನಿಸಲು ಆದ್ಯತೆ ನೀಡಬೇಕಿದೆ. ಮಹಿಳಾ ಸಾಧಕಿಯರನ್ನು ಗುರುತಿಸಿ ನಮನ ಸಲ್ಲಿಸುವುದು ಸಮಕಾಲೀನ ಶ್ರೇಷ್ಠ ಕಾರ್ಯ ಎಂದು ಶ್ರೀಗಳು ತಿಳಿಸಿದರು.

ಚಿರಂತನ ಸಂಸ್ಥಾಪಕ ಅಧ್ಯಕ್ಷೆ ದೀಪ ಎನ್. ರಾವ್ ಪ್ರಾಸ್ತಾವಿಕವಾಗಿ ಮಾತನಾಡಿ, ಕಳೆದ 19 ವರ್ಷಗಳಿಂದ ತಮ್ಮ ಸಂಸ್ಥೆ 15 ಸಾವಿರಕ್ಕೂ ಹೆಚ್ಚು ಜನರಿಗೆ ನೃತ್ಯ, ಸಂಗೀತ ಹಾಗೂ ವಾದ್ಯ ವಾದನದಂತಹ ಕಲೆಗಳನ್ನು ಕಲಿಸುತ್ತಾ ಬಂದಿದೆ ಎಂದರು.

ಈ ಸಂದರ್ಭದಲ್ಲಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಕೆ. ತುಳಸಿ ಮಾಲಾ, ಮೈಸೂರು ವಿ.ವಿ.ಯ ಪ್ರದರ್ಶಕ ಕಲೆಗಳ ವಿಭಾಗದ ಸಹಾಯಕ ಡೀನ್ ಡಾ. ಶೀಲಾ ಶ್ರೀಧರ್, ಕನ್ನಡಿಗರು ಸಂಸ್ಥೆಯ ಅಧ್ಯಕ್ಷೆ ಉಮಾ ವಿದ್ಯಾಧರ್ ಮತ್ತಿತರರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕಿಯರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಚಿರಂತನದ ಮಾಧವ ಪದಕಿ ಸ್ವಾಗತಿಸಿದರೆ, ಇಂಚರ ನಿರೂಪಿಸಿದರು.



ದಾವಣಗೆರೆ ಶಿವಯೋಗ ಮಂದಿರದಲ್ಲಿ 'ಚಿರಂತನ' ದಿಂದ ನಡೆದ ಕಾರ್ಯಕ್ರಮದಲ್ಲಿನ ನೃತ್ಯ ಪ್ರದರ್ಶನ

# ದಾವಣಗೆರೆ ಎಸ್‌ಪಿ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ

ದಾವಣಗೆರೆ, ಮಾ.14- ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ ಸೃಷ್ಟಿಸಿ, ಹಣಕ್ಕೆ ಬೇಡಿಕೆ ಇಡುತ್ತಿರುವುದು ಬೆಳಕಿಗೆ ಬಂದಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರ ಹೆಸರಿನಲ್ಲಿ ಹನುಮಂತರಾಯ ಹೊಸ್ಪೇಟ್ ಎನ್ನುವ ನಕಲಿ ಖಾತೆ ತೆರೆದು ವಂಚಕರು ಸಾರ್ವಜನಿಕರಿಗೆ ನಕಲಿ ಖಾತೆಯಿಂದ ಹಣದ ಬೇಡಿಕೆ ಇಡುತ್ತಿರುವ ಬಗ್ಗೆ ಸ್ವತಃ ಎಸ್ಪಿ ಹನುಮಂತರಾಯ ಸ್ಪಷ್ಟನೆ ನೀಡಿದ್ದು, ನಕಲಿ ಸಂದೇಶಕ್ಕೆ ಯಾರೂ ಕಿವಿ ಕೊಡಬೇಡಿ ಎಂದು ಮನವಿ ಮಾಡಿಕೊಂಡಿದ್ದಾರೆ.




ನನ್ನ ಹೆಸರಿನಲ್ಲಿ 'ಹನುಮಂತರಾಯ ಹೊಸಪೇಟೆ' ಎಂದು ಅಸಲಿ ಖಾತೆಗೆ ಹೋಲುವ ರೀತಿಯಲ್ಲೇ ನಕಲಿ ಖಾತೆ ಸೃಷ್ಠಿಸಿ ಹಣದ ಬೇಡಿಕೆ ಇಡುತ್ತಿದ್ದಾರೆ. ಸಾರ್ವಜನಿಕರು ಹಣ ಹಾಕಿ ಮೋಸ ಹೋಗಬಾರದು ಎಂದು ಎಸ್ಪಿ ಹನುಮಂತರಾಯ ತಿಳಿಸಿದ್ದಾರೆ. ನನ್ನ ನಕಲಿ ಫೇಸ್‌ಬುಕ್ ಖಾತೆ ಹ್ಯಾಕ್ ಮಾಡಿರುವ ವಿಚಾರ ನನ್ನ ಹೆಂಡತಿ (2ನೇ ಪುಟಕ್ಕೆ)

# ಉಲ್ಬಣಿಸಿದ ಕೊರೊನಾ

## ಯಡಿಯೂರಪ್ಪ ನೇತೃತ್ವದಲ್ಲಿಂದು ಸಭೆ

ಬೆಂಗಳೂರು, ಮಾ. 14 – ರಾಜ್ಯದಲ್ಲಿ ಕೊರೊನಾ ಸೋಂಕು ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನಾಳೆ ಸೋಮವಾರ ಅಧಿಕಾರಿಗಳು ಹಾಗೂ ಆರೋಗ್ಯ ಪರಿಣಿತರ ಸಭೆ ಕರೆದಿದ್ದಾರೆ. ಸಂಜೆ 5 ಗಂಟೆಗೆ ವಿಧಾನಸೌಧದಲ್ಲಿ ಸಭೆ ನಡೆಯಲಿದೆ ಎಂದು ಮುಖ್ಯಮಂತ್ರಿ ಕಚೇರಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜನವರಿ 22ರ ನಂತರ ರಾಜ್ಯ ದಲ್ಲಿ ಮೊದಲ ಬಾರಿಗೆ ಕೊರೊನಾ ಸೋಂಕಿತರ ಸಂಖ್ಯೆ ಒಂದೇ ದಿನದಲ್ಲಿ 900ರ ಗಡಿ ದಾಟಿದೆ. ಭಾನುವಾರ 921 ಸೋಂಕಿತರು (2ನೇ ಪುಟಕ್ಕೆ)

# ಪ್ರಚಾರದಿಂದ ಪಕ್ಷ ಬಲವರ್ಧನೆ

## ಬಿಜೆಪಿ ಯುವ ಸಮಾವೇಶದಲ್ಲಿ ಸಂಸದ ಸಿದ್ದೇಶ್ವರ




ದಾವಣಗೆರೆ, ಮಾ.14- ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾರ್ಯರೂಪಕ್ಕೆ ತಂದಿರುವ ಯೋಜನೆಗಳ ಬಗ್ಗೆ ಹೆಚ್ಚಾಗಿ ಪಕ್ಷದ ಕಾರ್ಯಕರ್ತರು ಪ್ರಚಾರ ನಡೆಸಿದಾಗ ಮಾತ್ರ ಪಕ್ಷವನ್ನು ಮತ್ತಷ್ಟು ಬಲಗೊಳಿಸಲು ಸಾಧ್ಯ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಬಿಜೆಪಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಯುವ ಮೋರ್ಚಾ ವತಿಯಿಂದ ನಗರದ ನಿಮಿಷಾಂಭ ಕಲ್ಯಾಣ ಮಂಟಪದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಯುವ ಸಮಾವೇಶ ಹಾಗೂ ವಿಶೇಷ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕೇವಲ ಮಾಧ್ಯಮಗಳ ಮೂಲಕ ಯೋಜನೆಗಳ ಪ್ರಚಾರ ಮಾಡಿ ಅಧಿಕಾರಕ್ಕೆ ಬರುವುದು ಸಾಧ್ಯವಿಲ್ಲ ಎಂದರು.

ಮುಂದಿನ ದಿನಗಳಲ್ಲಿ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಚುನಾವಣೆಗಳು ಬರಲಿವೆ. ಈ ನಿಟ್ಟಿನಲ್ಲಿ ಪಕ್ಷದ ಕಾರ್ಯಕರ್ತರು ಸದಾ ನಮ್ಮ ಸರ್ಕಾರಗಳ ಯೋಜನೆಗಳ ಬಗ್ಗೆಯೇ ಮಾತನಾಡುತ್ತಿರಬೇಕು. ಜನರಿಗೆ ಯೋಜನೆಗಳ ಅನುಕೂಲತೆಗಳನ್ನು ಮನವರಿಕೆ ಮಾಡಿಕೊಡಬೇಕು ಎಂದು ಸಲಹೆ ನೀಡಿದರು.

ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ನಿರೀಕ್ಷಿತ (2ನೇ ಪುಟಕ್ಕೆ)

### ಕೈ ಮುಗಿದು ಬೇಡಿಕೊಳ್ತೇನೆ ಪಕ್ಷ ದ್ರೋಹ ಮಾಡಬೇಡಿ

**ಕೈ ಮುಗಿದು ಬೇಡಿಕೊಳ್ಳುತ್ತೇನೆ ಪಕ್ಷಕ್ಕೆ ದ್ರೋಹ ಬಗೆಯುವ ಕೆಲಸವನ್ನು ಯಾರೂ ಮಾಡಬೇಡಿ ಎಂದು ಸಂಸದ ಸಿದ್ದೇಶ್ವರ ಮನವಿ ಮಾಡಿದರು.**

**ಮಹಾನಗರ ಪಾಲಿಕೆಯ 20 ಹಾಗೂ 22ನೇ ವಾರ್ಡ್ ಗಳಲ್ಲಿ ಉಪ ಚುನಾವಣೆ ನಡೆಯಲಿದ್ದು, ಬಿಜೆಪಿಗೆ ಇದು ಮಹತ್ವದ ಚುನಾವಣೆಯಾಗಿದೆ. ಎರಡೂ ವಾರ್ಡು ಗಳಲ್ಲಿ ಗೆಲ್ಲದೇ ಬೇರೆ ಮಾರ್ಗವಿಲ್ಲ. ಆದ್ದರಿಂದ ಯಾರಿಗೆ ಪಕ್ಷ ಟಿಕೆಟ್ ನೀಡುತ್ತದೋ ಅವರನ್ನು ಬೆಂಬಲಿಸಬೇಕು. ಟಿಕೆಟ್ ಸಿಗ ಲಿಲ್ಲ ಎಂದು ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಕೆಲಸ ಮಾಡಬೇಡಿ ಎಂದರು.**

### ಭಾನುವಾರ 25 ಸಾವಿರ ದಾಟಿದ ಸೋಂಕಿತರು

ನವದೆಹಲಿ, ಮಾ. 14 – ದೇಶದಲ್ಲಿ ಭಾನುವಾರ ಒಂದೇ ದಿನ 25,320 ಕೊರೊನಾ ಸೋಂಕುಗಳು ಕಾಣಿಸಿಕೊಂಡಿವೆ. ಇದು 84 ದಿನಗಳಲ್ಲೇ ಅತಿ ಹೆಚ್ಚಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಈ ಹಿಂದೆ ಡಿಸೆಂಬರ್ 20ರಂದು 26,624 ಸೋಂಕು ಪ್ರಕರಣಗಳು ಕಾಣಿಸಿಕೊಂಡಿದ್ದವು.

**ಸಾಲ ಸೌಲಭ್ಯ**

ಮಾರ್ಕ್ಸ್ ಕಾರ್ಡ್, ಪ್ರಾಪರ್ಟಿ, ಪರ್ಸನೆಲ್ ಪ್ರಾಜೆಕ್ಟ್ ಮೇಲೆ ವಾರ್ಷಿಕ ಶೇ. 2ರ ಬಡ್ಡಿ ದರದಲ್ಲಿ ಸಬ್ಸಿಡಿ ಸಾಲವನ್ನು ಕೊಡಲಾಗುತ್ತದೆ. ಏಜೆಂಟರಿಗೆ ಅವಕಾಶವಿದೆ. ಆಸಕ್ತರು ಇದರ ಸದಾವಕಾಶವನ್ನು ಪಡೆದುಕೊಳ್ಳಲು ಕೂಡಲೇ ಸಂಪರ್ಕಿಸಿ

**63604 56791**




**ಗುರು-ಲಿಂಗ-ಜಂಗಮಾರಾಧನೆ**



**ಶ್ರೀಮತಿ ಕಾಶೀಪುರ ಮಠದ ಪಾರ್ವತಮ್ಮ**

(ದಿ|| ಕಾಶೀಪುರ ಮಠದ ಜಯದೇವಯ್ಯನವರ ಧರ್ಮಪತ್ನಿ)

ಇವರು ದಿನಾಂಕ : 11-03-2021ನೇ ಗುರುವಾರ ರಾತ್ರಿ 9-00 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತನ್ನಿಮಿತ್ತ ಇವರ 'ಗುರು-ಲಿಂಗ-ಜಂಗಮಾರಾಧನೆ'ಯನ್ನು ದಿನಾಂಕ: 15-03-2021ನೇ ಸೋಮವಾರ ಬೆಳಿಗ್ಗೆ 10-30 ಗಂಟೆಗೆ ಶ್ರೀ ಶಾರದ ಮಂದಿರ, ಶಂಕರ ಮಠ, ಜಯದೇವ ಸರ್ಕಲ್, ದಾವಣಗೆರೆಯಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು : ಶ್ರೀ ಶಿವಾನಂದ ಮತ್ತು ಸಹೋದರರು ಸಹೋದರಿಯರು, ಮಕ್ಕಳು, ಅಳಿಯಂದಿರು, ಕಾಶಿಪುರ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.

# ದೇಶಕ್ಕೆ ಮಿಲಿಟರಿಗಿಂತ ಸಾಮರಸ್ಯದ ಬಲ ಬಹಳ ಮುಖ್ಯ

## ದೊಡ್ಡಘಟ್ಟ : ಸಾಮರಸ್ಯಕ್ಕಾಗಿ ಸಂಕಲ್ಪ ಕಾರ್ಯಕ್ರಮದಲ್ಲಿ ತೇಜಸ್ವಿ ಪಟೇಲ್ ಅಭಿಮತ

**ಜಿಗಳಿ ಪ್ರಕಾಶ್**



ತ್ಯಾವಣಿಗಿ, ಮಾ.14- ನಮ್ಮ ದೇಶಕ್ಕೆ ಮಿಲಿಟರಿಗಿಂತ ಸಾಮರಸ್ಯದ ಬಲ ಬಹಳ ಮುಖ್ಯವಾಗಿದೆ ಎಂದು ಜಿ.ಪಂ. ಸದಸ್ಯ ತೇಜಸ್ವಿ ಪಟೇಲ್ ಹೇಳಿದರು.

ಅವರು ಭಾನುವಾರ ದೊಡ್ಡಘಟ್ಟ ಗ್ರಾಮದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ತಂದಿರುವ ಸಾಮರಸ್ಯ ಸಂಭ್ರಮ ವೇದಿಕೆ ವತಿಯಿಂದ 'ಸಾಮರಸ್ಯಕ್ಕಾಗಿ ಸಂಕಲ್ಪ' ಎಂಬ ಕಾರ್ಯಕ್ರಮದಡಿ ಹಮ್ಮಿಕೊಂಡಿದ್ದ ನವಿಲೇಹಾಳ್ ಗ್ರಾ.ಪಂ. ಸರ್ವ ಸದಸ್ಯರಿಗೆ ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಭಾರತೀಯರ ನಿಜವಾದ ಶತ್ರು ಜಾತಿ ಆಗಿದ್ದು, ಜಾತಿ, ಕೋಮುವಾದ ಹೋಗದ ಹೊರತು ದೇಶದಲ್ಲಿ ಶಾಂತಿ, ಸಾಮರಸ್ಯ ನಿರ್ಮಾಣ ಕಷ್ಟಸಾಧ್ಯ ಎಂದ ಅವರು, ಮಾರಿಹಬ್ಬ ಮಾಡುವಾಗ ಒಂದಾಗುವ ನಾವು, ಚುನಾವಣೆ ಬಂದಾಗ ದೂರವಾಗುತ್ತೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಜಾತಿ ಕಾರಣಕ್ಕಾಗಿ ಒಬ್ಬ ವ್ಯಕ್ತಿಯನ್ನು ದೂರವಿಡುವುದು ಮಾನವೀಯತೆಯೇ? ಎಂದು ಪ್ರಶ್ನಿಸಿದ ತೇಜಸ್ವಿ ಪಟೇಲ್ ಅವರು, ಗ್ರಾಮದಲ್ಲಿ ಸಣ್ಣ ಸಮಾಜದವರು ಮುಂದೆ ಬರುವ ಹೆಜ್ಜೆ ಇಟ್ಟರೆ ಅಲ್ಲಿ ಸಾಮರಸ್ಯ ಇದೆ ಎಂದು ಗೊತ್ತಾಗುತ್ತದೆ.

ಮೊದಲಿನಿಂದಲೂ ಶಾಂತಿಯುತವಾಗಿ ನಡೆದು ಕೊಂಡು ಬಂದಿರುವ ದೊಡ್ಡಘಟ್ಟದಲ್ಲಿ ಸಾಮರಸ್ಯದ ಸಂಕಲ್ಪ ಸಾಧ್ಯವಾಗಿದೆ. ಗ್ರಾಮದಲ್ಲಿ ಶಿಕ್ಷಣ, ಸಾಮರಸ್ಯ ಇದ್ದರೆ ಎಲ್ಲರ ಬದುಕು ಬಂಗಾರವಾಗುತ್ತದೆ. ಈ ನಿಟ್ಟಿನಲ್ಲಿ ಸಂಭ್ರಮ ವೇದಿಕೆಯವರು, ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಸೇರಿಸಲು ಶ್ರಮಿಸಬೇಕು. 18 ವರ್ಷದೊಳಗಿನ ಹೆಣ್ಣು ಮಗುವಿನ ಮದುವೆ ಆಗದಂತೆ ನೋಡಿಕೊಳ್ಳ ಬೇಕೆಂದು ತೇಜಸ್ವಿ ಪಟೇಲ್ ತಿಳಿಸಿ, ಸಾಮರಸ್ಯ ಸಂಕಲ್ಪ ಎಂಬ ನಿಮ್ಮ ಚಿಂತನೆ ಬಹಳ ದೊಡ್ಡ ಮಹತ್ವ ಪಡೆದುಕೊಂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮಸ್ಥರಿಗೆ ಸಾಮರಸ್ಯದ ಬಗ್ಗೆ ಪ್ರತಿಜ್ಞೆ ಬೋಧಿಸಿದ ಹರಿಹರ ಎಸ್‌ಜೆವಿಪಿ ಕಾಲೇಜಿನ ಪ್ರಾಧ್ಯಾಪಕರೂ, ಚಿಂತಕರೂ ಆದ ಡಾ. ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಹಳ್ಳಿಗಳಲ್ಲಿ ಜಾತಿ ದೌರ್ಜನ್ಯ ನಿಲ್ಲಬೇಕು. ಜಾತಿಯಿಂದ ಯಾರೂ ಕನಿಷ್ಠರಲ್ಲ, ಗರಿಷ್ಠರೂ ಅಲ್ಲ. ಈ ಕಾರಣಕ್ಕಾಗಿಯೇ ಗಾಂಧೀಜಿ ಕಂಡ ರಾಮರಾಜ್ಯದ ಕನಸು ಇನ್ನೂ ಸಾಕಾರಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದಾರ್ಶನಿಕರ್‍ಯಾರು ಒಂದು ಜಾತಿಗೆ ಸೀಮಿತರಾದವರಲ್ಲ. ನಾವೇ ಅವರನ್ನು ಒಂದೊಂದು ಜಾತಿಗೆ ಸೀಮಿತಗೊಳಿಸಿದ್ದೇವೆ. ಅಂಬೇಡ್ಕರ್ ಅವರು ಸಮಗ್ರ ಭಾರತಕ್ಕಾಗಿ ಚಿಂತನೆ ನಡೆಸಿದವರು, ಅವರು ಎಲ್ಲಾ ವರ್ಗದ ಜನರಿಗೆ ಸಂವಿಧಾನದ ಮೂಲಕ ಬಲವಾದ ಹಕ್ಕುಗಳನ್ನು ಕೊಟ್ಟಿದ್ದಾರೆ.

ಅಂತಹ ಶ್ರೇಷ್ಠ ವ್ಯಕ್ತಿಗಳನ್ನು ಎಲ್ಲರೂ ಪೂಜಿಸುವಂತಾದಾಗ ಮಾತ್ರ ಸಮಸಮಾಜ ಹಾಗೂ ಸಾಮರಸ್ಯದ ಸಮಾಜ ನಿರ್ಮಾಣ ಆಗಲು ಸಾಧ್ಯ ಎಂದ ರಾಮಚಂದ್ರಪ್ಪ ಅವರು, ಹಿಂದೆ ಊರಿಗೊಂದು ಗಣಪತಿಯನ್ನು ಇಟ್ಟು ಸಂಭ್ರಮಿಸುತ್ತಿದ್ದೆವು. ಆದರೀಗ ಓಣಿಗೊಂದು, ಜಾತಿಗೊಂದು ಗಣಪತಿ ಇಡಿಸುವ ಮೂಲಕ ಸಾಮರಸ್ಯ ಕದಡುವ ಪ್ರಯತ್ನ ಬಹಳ ವ್ಯವಸ್ಥಿತವಾಗಿ ನಡೆಯುತ್ತಿದೆ. ಈ ಬಗ್ಗೆ ಎಚ್ಚರವಾಗಿರಿ ಎಂದು ಗ್ರಾಮಸ್ಥರನ್ನು ಎಚ್ಚರಿಸಿದರು.

ಅಮ್ಮನ ಹಬ್ಬಕ್ಕಾಗಿ ಖರ್ಚು ಮಾಡುವ ದುಡ್ಡನ್ನು ಮಕ್ಕಳ ಶಿಕ್ಷಣಕ್ಕೆ ಮೀಸಲಿಡಿ. ಪ್ರತಿ ವರ್ಷ ಮಾರಿಹಬ್ಬ ಮಾಡುವುದನ್ನು ನಿಲ್ಲಿಸಿ, ಎಷ್ಟೋ ಹಳ್ಳಿಗಳಲ್ಲಿ ಮಾರಿಹಬ್ಬವನ್ನು ನಿಷೇಧಿಸಿದ್ದಾರೆ. ಈ ನಿಟ್ಟಿನಲ್ಲಿ ದೊಡ್ಡಘಟ್ಟ ಗ್ರಾಮಸ್ಥರು ಹೆಜ್ಜೆ ಇಡಲಿ ಎಂದು ಆಶಿಸಿದರು.

ಊರಿನಲ್ಲಿ ಹಿರಿಯರ ಮಾತನ್ನು ಗೌರವಿಸಿ ಪ್ರೀತಿ, ಸಹನೆಯಿಂದ ಊರಿನ ಸಮಸ್ಯೆಗಳನ್ನು ನೀವೇ ಕುಳಿತು ಬಗೆಹರಿಸಿಕೊಳ್ಳಿ. ಕೋಮುವಾದ, ಹಿಂಸೆಯನ್ನು ಸಂಭ್ರಮಿಸುವ ಜನರ ಮಧ್ಯೆ ಸಾಮರಸ್ಯಕ್ಕಾಗಿ ಸಂಕಲ್ಪ ಎಂಬ ಸಂಭ್ರಮವನ್ನು ನಿರ್ಮಾಣ ಮಾಡಿರುವ ದೊಡ್ಡಘಟ್ಟ ಗ್ರಾಮಸ್ಥರು ದೇಶಕ್ಕೇ ಮಾದರಿಯಾಗಿದ್ದಾರೆ ಎಂದು ಎ.ಬಿ. ರಾಮಚಂದ್ರಪ್ಪ ಶ್ಲಾಘಿಸಿದರು.

ನವಿಲೇಹಾಳ್ ಗ್ರಾಮದ ಶಕೀಬ್ ಎಸ್. ಕಣದ್ಮನೆ ಇವರ 'ಮೋಹದ ಮೋಡಗಳು' ಕವನ ಸಂಕಲನವನ್ನು ಬಿಡುಗಡೆ ಮಾಡಿದ ಸಂತೆಬೆನ್ನೂರಿನ ಸಾಹಿತಿ ಫೈಜ್ನಟ್ರಾಜ್ ಅವರು ಮಾತನಾಡಿ, ಸಂತೆಬೆನ್ನೂರಿನಲ್ಲಿ ಈ ಹಿಂದೆ ಎಲ್ಲರೂ ಸೇರಿ ಭ್ರಾತೃತ್ವ ಎಂಬ ವೇದಿಕೆಯನ್ನು ಹುಟ್ಟುಹಾಕಿದ ಒಂದೇ ವರ್ಷದಲ್ಲಿ ಮುಚ್ಚಿಹೋಯಿತು. ಆ ರೀತಿ ಈ ಗ್ರಾಮದಲ್ಲಿ ಆಗಬಾರದು, ಸಾಮರಸ್ಯಕ್ಕಾಗಿ ನೀವು ಮಾಡಿರುವ ಸಂಕಲ್ಪ ಸದಾಕಾಲ ಜೀವಂತವಾಗಿ ಉಳಿಯಬೇಕು.

ನವಿಲೇಹಾಳ್ ಗ್ರಾಮದ ಶಕೀಬ್ ಅವರು ಬರೆದ ಕವನ ಸಂಕಲನವನ್ನು ದೊಡ್ಡಘಟ್ಟದಲ್ಲಿ ಬಿಡುಗಡೆ ಮಾಡಿರುವುದು ಸಾಮರಸ್ಯಕ್ಕೆ ಸಾಕ್ಷಿಯಾಗಿದೆ ಎಂದರು.

ಈ ಅಪರೂಪದ ಕಾರ್ಯಕ್ರಮದ ಬಗ್ಗೆ ನಮ್ಮೆಲ್ಲರ ಮಾತುಗಳು ಕರುಳಿನಿಂದ ಬಂದಿವೆ, ಹೃದಯತುಂಬಿ ಹಾರೈಸಿದ್ದೇವೆ. ಒಗ್ಗಟ್ಟು, ಸೌಹಾರ್ದತೆ ಬಗ್ಗೆ ಭಾಷಣ ಮಾಡಿದರೆ ಸಾಲದು ಅವುಗಳನ್ನು ನಾವು ಗ್ರಾಮದಲ್ಲಿ ಕಟ್ಟಿಹಾಕಿ ಬೆಳೆಸಬೇಕೆಂದು ಫೈಜ್ನಟ್ರಾಜ್ ಹೇಳಿದರು.

ಗ್ರಾಮಸ್ಥರ ಪರವಾಗಿ ಹಿರಿಯರಾದ ಡಿ.ಆರ್. ಶಿವಮೂರ್ತಿ ಮಾತನಾಡಿ, ಗ್ರಾಮದ ಯುವಕರು ಇಂತಹ ಕಾರ್ಯಕ್ರಮ ಮಾಡಿ, ನಮ್ಮೆಲ್ಲರ ಹೃದಯವನ್ನು ತೆರೆಸಿದ್ದಾರೆ. ಅವರ ಬುದ್ಧಿವಂತಿಕೆ ಹಾಗೂ ವಿಶಾಲತೆಯನ್ನು ಗ್ರಾಮದಲ್ಲಿ ಪಸರಿಸುವಂತೆ ಮಾಡುತ್ತೇವೆಂದು ಸಂಕಲ್ಪ ಮಾಡಿದರು.

> ಕೋಮುವಾದ, ಹಿಂಸೆಯನ್ನು ಸಂಭ್ರಮಿಸುವ ಜನರ ಮಧ್ಯೆ ಸಾಮರಸ್ಯಕ್ಕಾಗಿ ದೊಡ್ಡಘಟ್ಟ ಗ್ರಾಮಸ್ಥರ ಸಂಕಲ್ಪ ದೇಶಕ್ಕೇ ಮಾದರಿ
>
> - ಡಾ. ಎ.ಬಿ. ರಾಮಚಂದ್ರಪ್ಪ

> ಒಗ್ಗಟ್ಟು, ಸೌಹಾರ್ದತೆಯ ಬಗ್ಗೆ ಭಾಷಣ ಮಾಡಿದರೆ ಸಾಲದು, ಅವುಗಳನ್ನು ಕಟ್ಟಿಹಾಕಿ ಬೆಳೆಸಬೇಕು.
>
> - ಸಂತೇಬೆನ್ನೂರು ಫೈಜ್ನಟ್ರಾಜ್

ಈ ಸಂದರ್ಭದಲ್ಲಿ ನವಿಲೇಹಾಳ್ ಗ್ರಾಪಂ. ಅಧ್ಯಕ್ಷೆ ಶ್ರೀಮತಿ ಶಬನಂ ಕೋಂ ಮೋಸಿಮಕಿಲ್, ಉಪಾಧ್ಯಕ್ಷೆ ಶ್ರೀಮತಿ ಈರಮಾಂಭ ಕೋಂ ಬಸವರಾಜಪ್ಪ ಸೇರಿದಂತೆ ಎಲ್ಲಾ 16 ಜನ ಗ್ರಾ.ಪಂ. ಸದಸ್ಯರನ್ನು ಹಾಗೂ ದೊಡ್ಡಘಟ್ಟ ಗ್ರಾಮದಿಂದ ಗ್ರಾ.ಪಂ. ಚುನಾವಣೆಗೆ ಸ್ಪರ್ಧಿಸಿ ಸೋತ ಅಭ್ಯರ್ಥಿಗಳನ್ನೂ ಮತ್ತು ಪಬ್ಲಿಕ್ ವಾರಿಯರ್ಸ್‌ಗಳಾದ ಆಶಾ, ಅಂಗನವಾಡಿ ಕಾರ್ಯಕರ್ತೆಯರನ್ನು ಸನ್ಮಾನಿಸಿ, ಗೌರವಿಸಿದರು.

ಅಲ್ಲದೆ, ಗ್ರಾಮದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಪ್ರೋತ್ಸಾಹಿಸಲಾಯಿತು. ಗ್ರಾಮದ ಮುಖಂಡ ವಿ. ಬಾಲಚಂದ್ರ ಅಧ್ಯಕ್ಷತೆ ವಹಿಸಿದ್ದರು.

ಗ್ರಾಮದ ಕೆ. ಭೀಮಪ್ಪ, ಗೌಡ್ರ ಶಾಂತಕುಮಾರ್, ಬೀರೂರು ಕೋಟೆ ರುದ್ರಯ್ಯ, ಎಸ್.ಸಿ. ಪ್ರಭುದೇವ್, ಡಿ.ಎಂ. ಕುಬೇರಪ್ಪ, ಡಿ.ಆರ್. ಶ್ರೀನಿವಾಸ್, ಬಿ. ಸನಾವುಲ್ಲಾ, ಚಂದ್ರಾಚಾರ್, ಡಿ.ಎನ್. ಜಯಪ್ಪ, ಆರ್. ಗಂಗಪ್ಪ, ಶಿವಮೂರ್ತಿ, ಪಕ್ಕೀರಪ್ಪ, ಸ್ವಾಮಿ ಮತ್ತಿತರರು ವೇದಿಕೆಯಲ್ಲಿದ್ದರು.

ಯುವ ಮುಖಂಡ ಸುನೀಲ್ ಸ್ವಾಗತಿಸಿದರು. ಶಿಕ್ಷಕ ತಿಪ್ಪೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಘು ದೊಡ್ಮನಿ ನಿರೂಪಿಸಿದರೆ, ಕೊನೆಯಲ್ಲಿ ಷಣ್ಮುಖಯ್ಯ ವಂದಿಸಿದರು. ಈ ಕಾರ್ಯಕ್ರಮಕ್ಕಾಗಿ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

## ತೇರು; ಹರಿದು ಬಂದ ಭಕ್ತ ಸಾಗರ

**(1ನೇ ಪುಟದಿಂದ)** ಆಗಿತ್ತು, ಗದ್ದುಗೆ ಟ್ರಸ್ಟ್ ಕಮಿಟಿಯವರು ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರದ ಸೂಚನೆಯಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಪೊಲೀಸ್ ಹಾಗೂ ಆರೋಗ್ಯ ಇಲಾಖೆಯವರ ಸಹಯೋಗದಲ್ಲಿ ಕೈಗೊಂಡಿದ್ದರು.

ಅಲ್ಲಲ್ಲಿ ಸ್ಯಾನಿಟೈಸರ್ ಬಾಟಲ್‌ಗಳನ್ನು ಇಡಲಾಗಿತ್ತು, ಸಾಮಾಜಿಕ ಅಂತರ ಕಾಯ್ದು ಕೊಳ್ಳುವಂತೆ ಮೈಕಿನಲ್ಲಿ ಪ್ರಕಟಣೆ ಮಾಡಲಾಗುತಿತ್ತು. ಹೊರಗಡೆಯಿಂದ ಬಂದಿದ್ದ ಭಕ್ತರು ಮಾಸ್ಕ್ ಧರಿಸಿದ್ದರು. ಸ್ವಚ್ಛತೆಗೆ ಒತ್ತು ನೀಡಲಾಗಿತ್ತು.

**ಬಿಡಾರ:** ದೇವಸ್ಥಾನದ ಎಲ್ಲಾ ಅತಿಥಿ ಗೃಹಗಳ ಕೊಠಡಿಗಳು ಭರ್ತಿಯಾಗಿದ್ದರಿಂದ ಭಕ್ತರು ತೋಟ ಮತ್ತು ತುಂಗಭದ್ರಾ ನದಿಯ ನಡುಗಡ್ಡೆಗಳಲ್ಲಿ ಬೀಡಾರ ಹಾಕಿ ತಂಗಿದ್ದರು.

ನದಿಯಲ್ಲಿ ಪುಣ್ಯಸ್ನಾನ ಮಾಡಿದ ಭಕ್ತರು ಮೆಟ್ಟಿಲನ್ನೇರಿ ಸರದಿ ಸಾಲಿನಲ್ಲಿ ನಿಂತು ಅಜ್ಜಯ್ಯನ ಗದ್ದುಗೆ ದರ್ಶನ ಪಡೆದರು.

ಕೆಲವರು ಅಜ್ಜಯ್ಯ ಮೈಮೇಲೆ ಬಂದಿದ್ದಾನೆಂಬಂತೆ ನಡೆದು ಕೊಂಡರು. ಜಾತ್ರೆಗೆ ಆಗಮಿಸಿದ್ದ ಎಲ್ಲಾ ಭಕ್ತರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ನೂರಾರು ಸ್ವಯಂ ಸೇವಕರು ಭಕ್ತರ ಸಹಾಯಕ್ಕಾಗಿ ಶ್ರಮಿಸಿದರು.

**ಟೆಸ್ಟಿಂಗ್:** ಆರೋಗ್ಯ ಇಲಾಖೆಯವರು 2 ಕೊರೊನಾ ಟೆಸ್ಟಿಂಗ್ ಮೊಬೈಲ್ ವ್ಯಾನ್‌ಗಳನ್ನು ಜಾತ್ರೆಗೆ ನಿಯೋಜಿಸಿದ್ದು, ಸ್ಕ್ರೀನ್ ಟೆಸ್ಟಿಂಗ್ ಮಾಡಿ, ಅನುಮಾನ ಬಂದವರಿಗೆ ಕೊರೊನಾ ಟೆಸ್ಟಿಂಗ್ ಮಾಡಿದರು. ಶನಿವಾರ, ಭಾನವಾರ ಸೇರಿ ಒಟ್ಟು 200 ಕ್ಕೂ ಹೆಚ್ಚು ಜನರಿಗೆ ಕೊರೊನಾ ಟೆಸ್ಟಿಂಗ್ ಮಾಡಿದ್ದು , ಒಂದೂ ಪಾಸಿಟಿವ್ ಪ್ರಕರಣ ಕಂಡು ಬಂದಿಲ್ಲ ಎಂದು ಹಿರಿಯ ಆರೋಗ್ಯ ಸಹಾಯಕ ಎಂ.ಉಮಣ್ಣ ತಿಳಿಸಿದ್ದಾರೆ.

**ಕುಸ್ತಿ:** ರಥೋತ್ಸವದ ಅಂಗವಾಗಿ ಸೋಮವಾರ, ಮಂಗಳವಾರ ಮತ್ತು ಬುಧವಾರ ದೇವಸ್ಥಾನದಲ್ಲಿ ಕಾಣಿಕೆ ಒಪ್ಪಿಸುವುದು, ಜವಳ ಇತ್ಯಾದಿ ಹರಕೆ ಸೇವೆಗಳು ನಡೆಯಲಿದ್ದು, ಮೂರು ದಿನವೂ ಶ್ರೀ ಕರಿಬಸವೇಶ್ವರ ಶಾಲೆ ಆವರಣದಲ್ಲಿ ಬಯಲು ಜಂಗೀ ಕುಸ್ತಿಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

## ಕೊಡದಗುಡ್ಡ ವೀರಭದ್ರೇಶ್ವರ ರಥೋತ್ಸವ : ಸರಳ ಆಚರಣೆಗೆ ನಿರ್ಧಾರ



ಜಗಳೂರು, ಮಾ.14- ತಾಲ್ಲೂಕಿನ ಕೊಡದಗುಡ್ಡದಲ್ಲಿ ಇದೇ 25 ರಿಂದ 31 ರವರೆಗೆ ನಡೆಯುವ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವವನ್ನು ಕೋವಿಡ್ ಹಿನ್ನೆಲೆಯಲ್ಲಿ ಸರಳವಾಗಿ ಆಚರಿಸಲು ಸಮಿತಿ ನಿರ್ಧರಿಸಿದ್ದು, ಸಾರ್ವಜನಿಕರಿಗೆ ಪ್ರವೇಶ ನಿಷೇಧಿಸಿದೆ.

ರಥೋತ್ಸವ ನಿಮಿತ್ತ ಕಳೆದ ಮಾ.1 ರಂದು ಶ್ರೀ ವೀರಭದ್ರಸ್ವಾಮಿ ಸಮಿತಿಯು ತಹಸೀಲ್ದಾರರು ಮತ್ತು ಪೊಲೀಸ್ ಉಪನಿರೀಕ್ಷಕರೊಂದಿಗೆ ಸಭೆ ನಡೆಸಿ ಕೊರೊನಾ ಹಿನ್ನೆಲೆಯಲ್ಲಿ ಪ್ರತಿವರ್ಷದಂತೆ ನಡೆಯುವ ರಥೋತ್ಸವ ಮತ್ತು ಪೂಜಾ ಕಾರ್ಯಗಳನ್ನು ಸರಳವಾಗಿ ಆಚರಿಸಲು ನಿರ್ಧರಿಸಿದ್ದು, ಪ್ರಸಾದ ವ್ಯವಸ್ಥೆ, ಹೋಟೆಲ್, ಅಂಗಡಿ ವ್ಯಾಪಾರ ನಡೆಯುವುದಿಲ್ಲ. ಎತ್ತಿನ ಜಾತ್ರೆ ಮತ್ತು ಜಾತ್ರೆಗೆ ಬಂದು ಉಳಿಯುವ (ಪೌಳಿ) ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ ಭಕ್ತಾದಿಗಳು ಸಹಕರಿಸುವಂತೆ ದೇವಸ್ಥಾನ ಸಮಿತಿ ತಿಳಿಸಿದ್ದಾರೆ.

## ನಾಳೆ ಕಡಪ ಜಿಲ್ಲೆಯ ರಾಯಚೋಟಿ ವೀರಭದ್ರಸ್ವಾಮಿ ರಥೋತ್ಸವ

ದಾವಣಗೆರೆ, ಮಾ.14- ಆಂಧ್ರಪ್ರದೇಶ ರಾಜ್ಯದ ಕಡಪ ಜಿಲ್ಲೆಯ ರಾಯಚೋಟಿಯಲ್ಲಿ ನಾಡಿದ್ದು ದಿನಾಂಕ 16 ರ ಮಂಗಳವಾರ ವೀರಭದ್ರೇಶ್ವರ ಸ್ವಾಮಿ ರಥೋತ್ಸವ ನಡೆಯಲಿದೆ. ನಾಳೆ ದಿನಾಂಕ 15 ರ ಸೋಮವಾರ ಬೆಳಿಗ್ಗೆ ಸೂರ್ಯಪ್ರಭ ಉತ್ಸವ, ಶ್ರೀ ವೀರಭದ್ರಸ್ವಾಮಿಗೆ ಹಾಗೂ ಶ್ರೀ ಭದ್ರಕಾಳಿ ಅಮ್ಮನವರಿಗೆ ಬಂಗಾರದ ಕಿರೀಟ ಧಾರಣೆ ಹಾಗೂ ಸಂಜೆ ನಂದಿ ವಾಹನೋತ್ಸವ, ಮಾಸಪೇಟ ಶ್ರೀ ರಾಮ ಭಕ್ತ ಮಂಡಳಿಯಿಂದ ಭಜನೆ ನಡೆಯಲಿದೆ.

ನಾಡಿದ್ದು ದಿನಾಂಕ 16ರ ಮಂಗಳವಾರ ಬೆಳಿಗ್ಗೆ 4 ಗಂಟೆಗೆ ಅಗ್ನಿಕುಂಡ ಪ್ರವೇಶ, ಬೆಳಿಗ್ಗೆ 11.45 ಕ್ಕೆ ವಜ್ರದ ತ್ರಿನೇತ್ರ ಧಾರಣೆ ಹಾಗೂ ಮಹಾನೈವೇದ್ಯ ನಡೆಯಲಿದ್ದು, ಅಂದು ಸಂಜೆ 4 ಕ್ಕೆ ಶ್ರೀ ಭದ್ರಕಾಳಿ ಸಮೇತ ಶ್ರೀ ವೀರಭದ್ರಸ್ವಾಮಿಯ ಉತ್ಸವ ಮೂರ್ತಿಗಳೊಂದಿಗೆ ರಥೋತ್ಸವ ಜರುಗುವುದು.

ದಿನಾಂಕ 17 ರ ಬುಧವಾರ ಬೆಳಿಗ್ಗೆ ಬಂಗಾರ ಕಿರೀಟ ಧಾರಣೆ, ಮಹಾಪೂರ್ಣಾಹುತಿ, ಕಂಕಣ ವಿಸರ್ಜನೆ, ವಸಂತೋತ್ಸವ, ಸಂಜೆ ಹಂಸ ವಾಹನೋತ್ಸವ ನಡೆಯುವುದು.

ರಥೋತ್ಸವದ ಅಂಗವಾಗಿ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಕೀರ್ತನೆಗಳು ನಡೆಯಲಿವೆ.

## ರಾಜ್ಯ ಬಾಲ ವಿಜ್ಞಾನಿಯಾಗಿ ದಾವಣಗೆರೆಯ ಯೋಗಪ್ರಿಯ ವೈ.ಎ



ದಾವಣಗೆರೆ, ಮಾ.14 - ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಯಾದಗಿರಿ ಜಿಲ್ಲೆಯ ಸೈದಾಪುರ ಪಟ್ಟಣದಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಯುವ ವಿಜ್ಞಾನಿಗಳ ಸಮಾವೇಶದಲ್ಲಿ ದಾವಣಗೆರೆ ಜಿಲ್ಲೆಯನ್ನು ಪ್ರತಿನಿಧಿಸಿದ್ದ ಆವರಗೊಳ್ಳದ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿ ಯೋಗಪ್ರಿಯ ವೈ.ಎ. ಪ್ರಥಮ ಸ್ಥಾನ ಪಡೆದು ರೂ 10000 ಸಾವಿರ ನಗದು ಬಹುಮಾನದೊಂದಿಗೆ ರಾಜ್ಯ ಬಾಲ ವಿಜ್ಞಾನಿಯಾಗಿ ಆಯ್ಕೆ ಗೊಂಡಿರುತ್ತಾನೆ.

ರಾಜ್ಯ ವಿಜ್ಞಾನ ಪರಿಷತ್ ಗೌರವಾಧ್ಯಕ್ಷರಾದ ಪ್ರೊ.ವೈ.ವೃಷಭೇಂದ್ರಪ್ಪ, ಕಾರ್ಯದರ್ಶಿ ಎಂ.ಗುರುಸಿದ್ದಸ್ವಾಮಿ, ಅಂಗಡಿ ಸಂಗಮೇಶ್, ದಾವಣಗೆರೆ ಜಿಲ್ಲಾ ಉಸ್ತುವಾರಿ ಇ.ಸಿ.ಸದಸ್ಯ ಹೆಚ್.ಎಸ್.ಟಿ.ಸ್ವಾಮಿ, ಹೆಚ್.ಚಂದ್ರಪ್ಪ, ವಿಜ್ಞಾನ ವಿಷಯ ಪರಿವೀಕ್ಷಕಿ ಆರ್.ಬಿ.ವಸಂತಕುಮಾರಿ ಅಭಿನಂದಿಸಿರುತ್ತಾರೆ

ಡಾ.ಸಿದ್ದಪ್ಪ ಕಕ್ಕಳಮೇಲಿ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ ದಾವಣಗೆರೆ ಇವರು ಜಿಲ್ಲಾ ಸಂಯೋಜಕರಾಗಿ ಕಾರ್ಯನಿರ್ವಹಿಸಿದ್ದರು.

## ಇಂದು-ನಾಳೆ ವಲಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ

ದಾವಣಗೆರೆ : ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ವಿವಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಇಂದು ಮತ್ತು ನಾಳೆ ಅಂತರ ಕಾಲೇಜು, ವಲಯ ಮತ್ತು ಅಂತರ್ ವಲಯ ಮಟ್ಟದ ಪುರುಷರ ಮತ್ತು ಮಹಿಳೆಯರ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಉದ್ಘಾಟನಾ ಸಮಾರಂಭವು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಇಂದು ಬೆಳಿಗ್ಗೆ 10.30 ಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಸಮಾರಂಭ ಉದ್ಘಾಟಿಸಲಿದ್ದು, ವಿವಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಕಾರ್ಯದರ್ಶಿ ಹೆಚ್.ತಿಪ್ಪೇಸ್ವಾಮಿ, ಎಸ್‌ಬಿಐ ಬ್ಯಾಂಕ್ ಶಾಖಾ ನಿರ್ದೇಶಕ ದಿನೇಶ್‌ಚಂದ್ರ ತ್ರಿಪಾಠಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಪ್ರಾಂಶುಪಾಲ ತೂ.ಕ. ಶಂಕರಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಜೆ 5 ಗಂಟೆಗೆ ನಡೆಯುವ ಸಮಾರೋಪವನ್ನು ಎಸಿಬಿಯ ಡಿಎಸ್‌ಬಿ, ರಾಷ್ಟ್ರಪ್ರಶಸ್ತಿ ಪುರಸ್ಕೃತ ಎಸ್.ಸುಧೀರ್ ಉದ್ಘಾಟಿಸುವರು. ಪ್ರಾಂಶುಪಾಲ ತೂ.ಕ. ಶಂಕರಯ್ಯ ಅಧ್ಯಕ್ಷತೆ ವಹಿಸಲಿದ್ದು, ಸಿಆರ್‌ಇಸಿ ಎಸ್‌ಐ ಪಿ.ವಿ. ವೆಂಕಟೇಶ್, ಸಂಘದ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಎಂ.ಎಸ್. ರಾಜಕುಮಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ನಾಳೆ ದಿನಾಂಕ 16 ರಂದು ಬೆಳಿಗ್ಗೆ 10.30 ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮವನ್ನು ಮೇಯರ್ ಎಸ್.ಟಿ. ವೀರೇಶ್ ನೆರವೇರಿಸುವರು. ದಾವಿವಿಯ ದೈಹಿಕ ಶಿಕ್ಷಣ ವಿಭಾಗದ ಮುಖ್ಯಾಧಿಕಾರಿ ಡಾ.ಕೆ. ವೆಂಕಟೇಶ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ಮಾ.16 ರಂದು ಸಂಜೆ 4 ಗಂಟೆಗೆ ಪಂದ್ಯಾವಳಿಯ ಸಮಾರೋಪ ಜರುಗಲಿದ್ದು, ಪ್ರಾಂಶುಪಾಲ ತೂ.ಕ. ಶಂಕರಯ್ಯ ಅಧ್ಯಕ್ಷತೆ ವಹಿಸುವರು. ಖೋ-ಖೋ ತರಬೇತುದಾರ, ಏಕಲವ್ಯ ಪ್ರಶಸ್ತಿ ವಿಜೇತ ಜೆ.ರಾಮಲಿಂಗಪ್ಪ ಸಮಾರೋಪ ಭಾಷಣ ಮಾಡಲಿದ್ದು, ದೈಹಿಕ ಶಿಕ್ಷಣ ನಿವೃತ್ತ ನಿರ್ದೇಶಕ ಎಂ.ಕೆ.ದಾನಪ್ಪ, ಸಂಘದ ಕಾರ್ಯದರ್ಶಿ ಹೆಚ್. ತಿಪ್ಪೇಸ್ವಾಮಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಐಕ್ಯೂಎಸಿ ಸಂಚಾಲಕ ಪ್ರೊ. ಟಿ. ವೀರೇಶ್ ಉಪಸ್ಥಿತರಿರುವರು.

## ಕ.ಸಾ.ಪ. ಚುನಾವಣೆ : ಹೋಬಳಿವಾರು ಮತದಾನ ಕೇಂದ್ರ ತೆರೆಯಲು ಮನವಿ



ಹರಪನಹಳ್ಳಿ, ಮಾ.14- ತಾಲ್ಲೂಕಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮತದಾನ ಕೇಂದ್ರಗಳನ್ನು ಹೋಬಳಿಗೊಂದು ತೆರೆಯಬೇಕೆಂದು ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ವತಿಯಿಂದ ತಹಶೀಲ್ದಾರ್ ಎಲ್.ಎಂ. ನಂದೀಶ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷರಾದ ಡಿ. ರಾಮನಮಲಿ ಮಾತನಾಡಿ, ಮುಂಬರುವ ಮೇ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಜಿಲ್ಲೆ ಮತ್ತು ರಾಜ್ಯ ಅಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಹರಪನಹಳ್ಳಿ ತಾಲ್ಲೂಕಿನಲ್ಲಿ ಹೆಚ್ಚು ಮತದಾರರಿದ್ದಾರೆ. ಅದರಲ್ಲೂ ಗ್ರಾಮಾಂತರ ಪ್ರದೇಶದಿಂದ ಹೆಚ್ಚು ಮತದಾರರಿರುವುದರಿಂದ ಅವರಿಗೆ ತಾಲ್ಲೂಕು ಕೇಂದ್ರಕ್ಕೆ ಬಂದು ಮತದಾನ ಮಾಡಲಿಕ್ಕೆ ತೊಂದರೆ ಆಗುತ್ತಿದೆ. ಆ ಕಾರಣಕ್ಕಾಗಿ ಅಧಿಕಾರಿಗಳು ಕಾಳಜಿ ವಹಿಸಿ ಹೋಬಳಿವಾರು ಮತದಾನ ಕೇಂದ್ರಗಳನ್ನು ಸ್ಥಾಪಿಸಬೇಕು ಎಂದರು.

ಈ ಸಂದರ್ಭದಲ್ಲಿ ಗೌರವ ಕಾರ್ಯದರ್ಶಿ ಸಿ.ಗಂಗಾಧರ, ಹೇಮಣ್ಣ ಮೋರಗೆರೆ, ಇಸ್ಮಾಯಿಲ್ ಎಲಿಗಾರ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

## ಪ್ರಚಾರದಿಂದ ಬಿಜೆಪಿಯ ಬಲವರ್ಧನೆ : ಸಂಸದ

**(1ನೇ ಪುಟದಿಂದ)** ಅಭಿವೃದ್ಧಿಯಾಗಿಲ್ಲ. ಕೆಲವಷ್ಟೇ ಕಾಮಗಾರಿಗಳು ನಡೆಯುತ್ತಿವೆ, ಇದು ಸಾಲದು. ಈ ಕ್ಷೇತ್ರ ಸುಂದರ ಕ್ಷೇತ್ರವಾಗಬೇಕಾಗಿತ್ತು. ಇಲ್ಲಿನ ನಿವಾಸಿಗಳಿಗೆ ವಸತಿ ಕಲ್ಪಿಸುವ, ಹಕ್ಕುಪತ್ರ ನೀಡುವ ಕೆಲಸಗಳಾಗಬೇಕಿದೆ. ಪ್ರಧಾನಿಯವರ ಜಲಸಿರಿ ಯೋಜನೆಯಡಿ ಪ್ರತಿ ಮನೆಗೆ 24 ತಾಸು ಶುದ್ಧ ಕುಡಿಯುವ ನೀರು ನೀಡಲಿದ್ದು, ಇನ್ನು ಒಂದೂವರೆ ವರ್ಷದೊಳಗೆ ಈ ಕ್ಷೇತ್ರದ ಜನತೆಗೆ ಅದರ ಸೌಲಭ್ಯ ದೊರಕಲಿದೆ ಎಂದರು.

ದಕ್ಷಿಣ ಕ್ಷೇತ್ರದಲ್ಲಿ ಇದುವರೆಗೆ ಬಿಜೆಪಿ ಗೆಲ್ಲಲು ಸಾಧ್ಯವಾಗಿಲ್ಲ. ಮುಸ್ಲಿಂ ಸಮುದಾಯವೇ ಹೆಚ್ಚಾಗಿದೆ ಎನ್ನುವುದು ಸೋಲಿಗೆ ಕಾರಣವಾಗಬಾರದು. ಎಲ್ಲರ ವಿಶ್ವಾಸವನ್ನೂ ಗಳಿಸಬೇಕು. ಅದಕ್ಕಾಗಿ ಕಾರ್ಯಕರ್ತರ ಪರಿಶ್ರಮ, ತ್ಯಾಗ ಮುಖ್ಯ. 2023ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಎಂಟೂ ಕ್ಷೇತ್ರಗಳಲ್ಲೂ ಬಿಜೆಪಿ ಶಾಸಕರಿರಬೇಕು ಎಂಬ ಆಸೆ ಇದೆ. ಅದನ್ನು ಕಾರ್ಯಕರ್ತರು ನೆರವೇರಿಸುತ್ತಾರೆಂಬ ಭರವಸೆ ಇದೆ ಎಂದು ಹೇಳಿದರು.

ಯುವ ಮೋರ್ಚಾ ಬಿಜೆಪಿಯ ಶಕ್ತಿ. ಅದರಿಂದಲೇ ಇಂದು ನರೇಂದ್ರ ಮೋದಿ ಪ್ರಧಾನಿಯಾಗಲು, ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಲು ಸಾಧ್ಯವಾಗಿದೆ. ದೇಶಾದ್ಯಂತ ಯುವಕರು ಮೋದಿಯವರ ಕೆಲಸಗಳನ್ನು ಶ್ಲಾಘಿಸಿ, ಪ್ರಚಾರ ಮಾಡಿ, ಮತ ಹಾಕಿಸಿದ್ದಾರೆ. ಪಕ್ಷವನ್ನು ಶಕ್ತಿಯುತವಾಗಿ ಬೆಳೆಸಿದ್ದಾರೆ ಎಂದರು.

ಮೇಯರ್ ಎಸ್.ಟಿ. ವೀರೇಶ್ ಮಾತನಾಡುತ್ತಾ, ಯಾವುದೇ ದೇಶದ ಶಕ್ತಿ ನಿರ್ಧಾರವಾಗುವುದು ಆ ದೇಶದ ಯುವಜನತೆಯ ಮೇಲೆ. ಭಾರತ ಇಂದು ಹೆಚ್ಚಿನ ಯುವಕರನ್ನು ಹೊಂದಿದ ದೇಶವಾಗಿದೆ. ಭಾರತವನ್ನು ವಿಶ್ವಗುರು ಮಾಡುವುದೇ ನಮ್ಮ ಗುರಿ. ಆ ಗುರಿಗೆ ಯುವಶಕ್ತಿ ಸಹಕರಿಸಬೇಕು ಎಂದರು.

ನರೇಂದ್ರ ಮೋದಿಯವರು ಪ್ರಧಾನಿಯಾದ ಬಳಿಕ ವಿಶ್ವವೇ ಭಾರತದತ್ತ ನೋಡುವಂತೆ ಮಾಡಿದ್ದಾರೆ. ನೂರಾರು ದೇಶಗಳು ಭಾರತವನ್ನು ಸಹಾಯಕ್ಕಾಗಿ ಯಾಚಿಸುವಂತಾಗಿದೆ. ಅಧಿಕಾರವೊಂದೇ ನಮ್ಮ ಗುರಿಯಾಗಿರಬಾರದು. ಸರ್ಕಾರದ ಯೋಜನೆಗಳನ್ನು ಜನತೆಗೆ ತಲುಪಿಸಬೇಕು. ಬಿಜೆಪಿ ಕಾರ್ಯಕರ್ತರಿಗೆ ದೇಶದಲ್ಲಿ ವಿಶೇಷ ಗೌರವವಿದ್ದು, ಅದನ್ನು ಮತ್ತಷ್ಟು ಹೆಚ್ಚಿಸಲು ಪ್ರಯತ್ನಿಸೋಣ ಎಂದರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಮಾತನಾಡುತ್ತಾ, ಮಹಾನಗರ ಪಾಲಿಕೆಯ 2 ವಾರ್ಡುಗಳಿಗೆ ಇದೇ 29ರಂದು ಮತದಾನ ನಡೆಯಲಿದ್ದು, 19ರಿಂದ ಪ್ರಚಾರ ಆರಂಭವಾಗಲಿದೆ. ಶೀಘ್ರದಲ್ಲಿಯೇ ಅಭ್ಯರ್ಥಿಗಳ ಘೋಷಣೆಯಾಗಲಿದೆ. ಪಾಲಿಕೆಯಲ್ಲಿ ಅಧಿಕಾರ ಹಿಡಿಯಲು 1 ಸ್ಥಾನದ ಕೊರತೆ ಇದ್ದು, ನಾವು ಚುನಾವಣೆಯಲ್ಲಿ ಗೆಲ್ಲಲೇಬೇಕಿದೆ. ಆದ್ದರಿಂದ ಕಾರ್ಯಕರ್ತರು ಪ್ರತಿ ಮನೆಗೂ ತೆರಳಿ ಮನವೊಲಿಸಬೇಕು ಎಂದರು.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಿ.ಎಸ್. ಜಗದೀಶ್, ಮಂಡಲ ಅಧ್ಯಕ್ಷ ಆನಂದರಾವ್ ಶಿಂಧೆ ಮಾತನಾಡಿದರು. ದಕ್ಷಿಣ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಾಲಿಕೆ ಸದಸ್ಯರಾದ ಶಿವಪ್ರಕಾಶ್, ರಾಕೇಶ್‌ರಾವ್ ಜಾಧವ್, ಎಲ್.ಡಿ. ಗೋಣೆಪ್ಪ, ಶಾಂತಕುಮಾರ್ ಸೋಗಿ, ಗಾಯತ್ರಿ ಬಾಯಿ, ಮಾಜಿ ಸದಸ್ಯ ದೇವರಮನೆ ಶಿವಕುಮಾರ್, ಮಂಜುನಾಥ ಚಳ್ಳಕೆರೆ, ಶ್ರೀನಿವಾಸ ದಾಸಕರಿಯಪ್ಪ ಇತರರು ಉಪಸ್ಥಿತರಿದ್ದರು. ಹೆಚ್.ಎಂ. ಗಣೇಶ್ ಸ್ವಾಗತಿಸಿದರು. ಸಹನಾ ಮಂಜುನಾಥ್ ಪ್ರಾರ್ಥಿಸಿದರು.

## ಕೆಲ ಗ್ರಾಮಗಳಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತ




ಕೂಡ್ಲಿಗಿ, ಮಾ.14- ಇಲ್ಲಿನ ಪೊಲೀಸ್ ಠಾಣಾ ವ್ಯಾಪ್ತಿಯ ಗಜಾಪುರ ಸೇರಿದಂತೆ ಹಲವು ಗ್ರಾಮಗಳಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತ ಇದೆ. ಪರಿಶೀಲಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ದಲಿತ ಮುಖಂಡರು ಒತ್ತಾಯಿಸಿದರು. ಠಾಣೆಯಲ್ಲಿ ಜರುಗಿದ ದಲಿತರ ಸಭೆಯಲ್ಲಿ ಯುವ ಮುಖಂಡರಾದ ಸಾಲುಮನಿ ರಾಘವೇಂದ್ರ, ಮಾಜಿ ಸೈನಿಕ ರಮೇಶ್ ಹಾಗೂ ಡಿ.ಹೆಚ್.ದುರುಗೇಶ್ ಸಭೆಯಲ್ಲಿ ದೂರಿದರು.

ಸಿಪಿಐ ವಸಂತ ಅಸೋದೆ ಮಾತನಾಡಿ, ಉನ್ನತಾಧಿಕಾರಿಗಳ ಗಮನಕ್ಕೆ ತರಲಾಗುವುದು ಹಾಗೂ ಸಂಬಂಧಿಸಿದ ಇಲಾಖಾಧಿಕಾರಿಗಳೊಂದಿಗೆ ಚರ್ಚಿಸಿ, ಅಗತ್ಯ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಶೀಘ್ರವೇ ಮುಂದಾಗುವುದಾಗಿ ಭರವಸೆ ನೀಡಿದರು.


ಡಿ.ಹೆಚ್.ದುರುಗೇಶ್, ಸಾಲುಮನಿ ರಾಘವೇಂದ್ರ ಮಾತನಾಡಿದರು. ಸಿಪಿಐ ವಸಂತ ಅಸೋದೆ, ಪಟ್ಟಣದ ಯುವ ದಲಿತ ಮುಖಂಡರು ಹಾಗೂ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

### ಚಂದ್ರಶೇಖರ ಇಂದೂರು ನಿಧನ



ದಾವಣಗೆರೆ ವಿನೋಬನಗರ 4ನೇ ಮೇನ್ ,3ನೇ ಕ್ರಾಸ್ ವಾಸಿ ನಿವೃತ್ತ ಪೋಸ್ಟ್ ಮಾಸ್ಟರ್ ಚಂದ್ರಶೇಖರ ಇಂದೂರು (74) ಅವರು ದಿ : 14-3-2021ರ ಭಾನುವಾರ ಸಂಜೆ 5 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿ: 15-3-21ರ ಸೋಮವಾರ ಮಧ್ಯಾಹ್ನ 1-30ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

### ಶ್ರೀಮತಿ ಛಾಯಾದೇವಿ ನಿಧನ



ದಾವಣಗೆರೆ ಇಂಡಸ್ಟ್ರೀಯಲ್ ಏರಿಯಾ ಎಸ್.ಎ. ರವೀಂದ್ರನಾಥ್ ನಗರದ ವಾಸಿ ಶ್ರೀಮತಿ ಛಾಯದೇವಿ (72) ಅವರು ದಿ: 14.03.2021 ರಂದು ಮಧ್ಯಾಹ್ನ 2 ಗಂಟೆಗೆ ನಿಧನರಾಗಿದ್ದಾರೆ. ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿ: 15.03.2021 ರಂದು ಸೋಮವಾರ ಬೆಳಿಗ್ಗೆ 10ಕ್ಕೆ ಎಸ್.ಎಸ್. ಹೈಟೆಕ್ ಆಸ್ಪತ್ರೆ ಹಿಂಭಾಗದ ರುದ್ರಭೂಮಿಯಲ್ಲಿ ನೆರವೇರಲಿದೆ.

## ತಿಂಗಳ ಅಂಗಳ ಬಳಗದಿಂದ ಭಾವಕವಿ ಎನ್ನೆಸ್ಸೆಲ್‌ಗೆ ಭಾವಪೂರ್ಣ ನಮನ



ದಾವಣಗೆರೆ, ಮಾ.14- ತಿಂಗಳ ಅಂಗಳ ಸಾಹಿತ್ಯ ಮತ್ತು ಸಾಂಸ್ಕೃತಿಕ ಬಳಗದ ವತಿಯಿಂದ ಕವಿ ಹೆಚ್.ಜೆ. ಪ್ರಭು ಗೊಲ್ಲರಹಳ್ಳಿ ಅವರ ಆತಿಥ್ಯದಲ್ಲಿ ನಗರದ ಸೋಮೇಶ್ವರ ವಿದ್ಯಾಲಯದ ಎದುರಿನ ಕಲ್ಪತರು ಕಾನ್ವೆಂಟ್ ಬಳಿಯ ಅವರ ನಿವಾಸದಲ್ಲಿ ಮಾರ್ಚ್ ಮಾಹೆಯ ಮಿಲನ ಆಯೋಜಿಸಲಾಗಿತ್ತು.

ಹಿರಿಯ ಕವಿ, ಡಾ. ಎನ್.ಎಸ್. ಲಕ್ಷ್ಮಿನಾರಾಯಣ ಭಟ್ಟರಿಗೆ ಶ್ರದ್ಧಾಂಜಲಿ ಅರ್ಪಿಸುವ ಮೂಲಕ ಕಾರ್ಯಕ್ರಮ ಆರಂಭಿಸಲಾಯಿತು.

ಲೇಖಕ ಗಂಗಾಧರ ಬಿ.ಎಲ್. ನಿಟ್ಟೂರ್, ಕವಿ ಪ್ರಭು ಗೊಲ್ಲರಹಳ್ಳಿಯವರ ಮುಂಬರಲಿರುವ ಕವನ ಸಂಕಲನದ ಹಸ್ತಪ್ರತಿಯ ಕವನಗಳ ಒಳನೋಟದ ಅವಲೋಕನ ಮಾಡಿದರು.

ಕವಿ ಸಂತೇಬೆನ್ನೂರು ಫೈಜ್ನಟ್ರಾಜ್ ಅವರು ಗಜಲ್ ಪ್ರಕಾರ, ಸಾಹಿತ್ಯ ಲೋಕದಲ್ಲಿ ಅದರ ಸ್ಥಾನ ಮಾನ ಹಾಗೂ ರಚನೆಯ ನಿಯ ಮಾವಳಿ ಕುರಿತು ವಿವರಿಸಿದರು. ಜೊತೆಗೆ ಲಕ್ಷ್ಮಿನಾರಾಯಣ ಭಟ್ಟರ 'ಬನ್ನಿ ಭಾವನೆಗಳೇ ಬನ್ನಿ' ಎಂಬ ಭಾವಗೀತೆ ಹಾಡಿದರು. ಹಿರಿಯ ಕವಿ ಡಾ. ಆನಂದ್ ಋಗ್ವೇದಿ ಕಾರ್ಯಕ್ರಮ ಕುರಿತು ಹಿತ ನುಡಿದರು.

ರಾಜೇಂದ್ರಪ್ರಸಾದ್ ನೀಲಗುಂದ, ಪಾಪುಗುರು, ಎನ್. ಎಸ್. ಸತೀಶ್, ತಾರೇಶ್ ಕೆ.ಪಿ ಅಣಬೇರು, ವೀರೇಶ್ ಬಿ. ಜಿ.ಎಂ, ಮಲ್ಲಮ್ಮ ನಾಗರಾಜ್, ಸಂಧ್ಯಾ ಸುರೇಶ್, ಸತ್ಯಭಾಮ ಮಂಜುನಾಥ್, ಅನ್ನಪೂರ್ಣ ಪಾಟೀಲ್ ಅವರು ಸ್ವರಚಿತ ಕವನ ವಾಚಿಸಿದರು.

ಶಿಕ್ಷಣ ಇಲಾಖೆಯ ಎ.ಜಿ. ಸೈಫುಲ್ಲಾ ಅವರಿಂದ ಗಜಲ್ ಗಾಯನ ಹಾಗೂ ಕು. ರಿಷಿ ಪ್ರಭು ಅವರಿಂದ ನೃತ್ಯ ಪ್ರಸ್ತುತಿ ನಡೆಯಿತು.

## ಟಿಕೆಟ್ ಸಿಗದೇ ತಲೆ ಬೋಳಿಸಿಕೊಂಡ ಮಹಿಳಾ ಧುರೀಣೆ

ತಿರುವನಂತಪುರಂ, ಮಾ. 14 – ತಾವು ಬಯಸಿದ ಕ್ಷೇತ್ರದಿಂದ ಟಿಕೆಟ್ ದೊರೆಯದ ಕಾರಣ ಅಸಮಾಧಾನಗೊಂಡ ಕೇರಳ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಲತಿಕಾ ಸುಭಾಷ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರಲ್ಲದೇ, ಕಾಂಗ್ರೆಸ್ ಕಚೇರಿಯ ಎದುರು ತಲೆ ಬೋಳಿಸಿಕೊಂಡಿದ್ದಾರೆ.

56 ವರ್ಷದ ಹಿರಿಯ ನಾಯಕಿ ಎತ್ತುಮನೂರು ಕ್ಷೇತ್ರದಿಂದ ಟಿಕೆಟ್ ಬಯಸಿದ್ದರು. ಆದರೆ, ನವದೆಹಲಿಯಲ್ಲಿ ಪ್ರಕಟಿಸಲಾದ ಪಟ್ಟಿಯಲ್ಲಿ ಅವರಿಗೆ ಕ್ಷೇತ್ರದಲ್ಲಿ ಟಿಕೆಟ್ ದೊರೆತಿರಲಿಲ್ಲ.

ಒಟ್ಟು 86 ಅಭ್ಯರ್ಥಿಗಳಲ್ಲಿ ಕೇವಲ 9 ಮಹಿಳೆಯರಿಗೆ ಟಿಕೆಟ್ ನೀಡಲಾಗಿದೆ ಎಂಬುದೂ ಅವರಿಗೆ ಬೇಸರ ತಂದಿತು.

ಪ್ರತಿಭಟನೆಗೆ ಮುಂದಾದ ಲತಿಕಾ, ಪಕ್ಷದ ಕಚೇರಿ ಎದುರೇ ತಲೆ ಬೋಳಿಸಿಕೊಂಡಿದ್ದಾರೆ. ಕೇರಳದಲ್ಲಿ ರಾಜಕೀಯ ಮುಖಂಡರೊಬ್ಬರು ಈ ರೀತಿಯ ಪ್ರತಿಭಟನೆಗೆ ಮುಂದಾಗಿರುವುದು ಇದೇ ಮೊದಲು ಎನ್ನಲಾಗುತ್ತಿದೆ.

## ಎಸ್‌ಪಿ ಹೆಸರಿನಲ್ಲಿ ನಕಲಿ ಖಾತೆ

**(1ನೇ ಪುಟದಿಂದ)** ತಿಳಿಸಿದಾಗ, ನಕಲಿ ಫೇಸ್‌ಬುಕ್ ಖಾತೆಯನ್ನು ಅಳಿಸಲು ನಾನು ತಕ್ಷಣ ಕ್ರಮಗಳನ್ನು ತೆಗೆದುಕೊಂಡಿದ್ದೇನೆ. ನನ್ನ ಎಲ್ಲಾ ಸ್ನೇಹಿತರು ಮತ್ತು ಸಂಪರ್ಕಗಳನ್ನು ನನ್ನ ಟ್ವಿಟ್ಟರ್ ಖಾತೆಯ ಮೂಲಕ ಎಚ್ಚರಿಸಿದ್ದೇನೆ.
ವಾಟ್ಸಾಪ್ ಗುಂಪುಗಳು ಮತ್ತು ಮಾಧ್ಯಮ ಜಾಗೃತಿ ಮಾಡಲಾಗುವುದು. ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಶೀಘ್ರವೇ ಸಾರ್ವಜನಿಕ ಜಾಗೃತಿ ಅಭಿಯಾನ ನಡೆಸಲಾಗುವುದು ಎಂದಿದ್ದಾರೆ.

## ಉಲ್ಬಣಿಸಿದ ಕೊರೊನಾ

**(1ನೇ ಪುಟದಿಂದ)** ಪತ್ತೆಯಾಗಿದ್ದು, ಇವರ ಪೈಕಿ 630 ಜನರು ಬೆಂಗಳೂರು ನಗರ ಜಿಲ್ಲೆಯವರು.

ಕಳೆದ ಸೋಮವಾರದ ನಂತರ ರಾಜ್ಯದಲ್ಲಿ 4,300 ಸೋಂಕಿತರು ಪತ್ತೆಯಾಗಿದ್ದಾರೆ. ಸಕ್ರಿಯ ಸೋಂಕಿತರ ಸಂಖ್ಯೆ ಕಳೆದ ತಿಂಗಳು 5 ಸಾವಿರದಷ್ಟಿದ್ದು, ಈಗ 8 ಸಾವಿರಕ್ಕೂ ಹೆಚ್ಚಾಗಿದೆ.

ಸೋಂಕು ತೀವ್ರವಾಗುತ್ತಿರುವ ಹಿನ್ನೆಲೆಯಲ್ಲಿ ಸಭೆ - ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಜನರ ಸಂಖ್ಯೆಯ ಮೇಲೆ ಶುಕ್ರವಾರ ನಿರ್ಬಂಧ ಹೇರಲಾಗಿದೆ.

## ಹರಪನಹಳ್ಳಿಯಲ್ಲಿ ಇಂದು ಎರಡನೇ ಬಾರಿಗೆ ಎಪಿಎಂಸಿ ಅವಿಶ್ವಾಸ ಸಭೆ

ಹರಪನಹಳ್ಳಿ : ಎಪಿಎಂಸಿ ಅಧ್ಯಕ್ಷ ಕಾಂಗ್ರೆಸ್‌ನ ಅಶೋಕ ಗೌಡ ಅವರ ವಿರುದ್ಧ ಅವರ ಪಕ್ಷದವರೇ ಈಚೆಗೆ ಮಂಡಿಸಿದ್ದ ಅವಿಶ್ವಾಸ ಗೊತ್ತುವಳಿಯನ್ನು ಕೋರ್ಟ್ ಅಸಿಂಧುಗೊಳಿಸಿದ ಹಿನ್ನೆಲೆಯಲ್ಲಿ ಎಪಿಎಂಸಿ ಕೇಂದ್ರ ನಿರ್ದೇಶಕರ ಸೂಚನೆ ಮೇರೆಗೆ ಇಂದು ಎರಡನೇ ಬಾರಿಗೆ ಅವಿಶ್ವಾಸ ನಿರ್ಣಯ ಸಭೆ ಕರೆಯಲಾಗಿದೆ.

ಅಶೋಕಗೌಡ ವಿರುದ್ದ ಅವಿಶ್ವಾಸ ಗೊತ್ತುವಳಿ ಮಂಡನೆಯಾಗಿ 10 ಜನ ನಿರ್ದೇಶಕರು ಗೊತ್ತುವಳಿ ಪರವಾಗಿ ಕೈ ಎತ್ತಿದಾಗ ಗೊತ್ತುವಳಿಗೆ ಒಪ್ಪಿಗೆ ಸಿಕ್ಕಿತು. ಆ ದಿನವೇ ಹೈಕೋರ್ಟ್ ಧಾರವಾಡ ಪೀಠ ಅವಿಶ್ವಾಸ ಗೊತ್ತುವಳಿ ಸಭೆಗೆ ತಹಶೀಲ್ದಾರ್ ನೀಡಿದ್ದ ನೋಟಿಸ್ ರದ್ದುಗೊಳಿಸಿ ಹೊಸದಾಗಿ ನಿಯಮಗಳ ಪ್ರಕಾರ ನೋಟಿಸ್ ನೀಡಲು ಸೂಚಿಸಿತ್ತು.

ಕೋರ್ಟ್ ಆದೇಶವನ್ನು ಕಾರ್ಯದರ್ಶಿಯವರು ಎಪಿಎಂಸಿ ಬೆಂಗಳೂರಿನ ಕೇಂದ್ರ ನಿರ್ದೇಶಕರಿಗೆ ಕಳಿಸಿಕೊಟ್ಟಿದ್ದು, ಅಲ್ಲಿಂದ ಎಪಿಎಂಸಿ ಕಾರ್ಯದರ್ಶಿಯವರೇ ಹೊಸದಾಗಿ ನೋಟಿಸ್ ನೀಡಿ ಅವಿಶ್ವಾಸ ಸಭೆಯನ್ನು ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಆಯೋಜಿಸಬೇಕು ಎಂದು ಸೂಚಿಸಿದ್ದರಿಂದ ಇಂದು ಮತ್ತೊಮ್ಮೆ ಅವಿಶ್ವಾಸ ಪರ್ಯಾಲೋಚನೆಗಾಗಿ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಸಭೆಯನ್ನು ಎಪಿಎಂಸಿ ಕಾರ್ಯದರ್ಶಿ ಎ.ಕೆ. ವೀರಣ್ಣ ಕರೆದಿದ್ದಾರೆ.

ಒಪ್ಪಂದದ ಪ್ರಕಾರ ಅಧ್ಯಕ್ಷ ಅಶೋಕಗೌಡ ರಾಜೀನಾಮೆ ನೀಡಿಲ್ಲ ಎನ್ನುವುದು ಅವಿಶ್ವಾಸ ಮಂಡಿಸಿದವರ ವಾದವಾಗಿದೆ. ಹಿಂದಿನ ಎಲ್ಲಾ ಅಧ್ಯಕ್ಷರಿಗೆ 10 ತಿಂಗಳ ಅವಕಾಶ ನೀಡಿ ನನಗೆ ಮಾತ್ರ 6 ತಿಂಗಳ ಅವಧಿಗೆ ರಾಜೀನಾಮೆ ಕೇಳುತ್ತಾರೆ ಎಂಬುದು ಅಧ್ಯಕ್ಷ ಅಶೋಕ ಗೌಡ ಅವರ ವಾದವಾಗಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಎಪಿಎಂಸಿ ಕಾರ್ಯದರ್ಶಿ ಎ.ಕೆ. ವೀರಣ್ಣ, ನ್ಯಾಯಾಲಯದ ಆದೇಶದ ಪ್ರತಿಯನ್ನು ನಮ್ಮ ಎಪಿಎಂಸಿ ಕೇಂದ್ರ ನಿರ್ದೇಶಕರಿಗೆ ಕಳಿಸಿ ಮಾರ್ಗದರ್ಶನ ಕೇಳಿದ್ದೆ. ನಿರ್ದೇಶಕರು ತಹಶೀಲ್ದಾರ್ ಬದಲಾಗಿ ನೀವು ನೋಟೀಸ್ ನೀಡಿ ಪುನಃ ಅವಿಶ್ವಾಸ ಸಭೆ ಕರೆಯಿರಿ ಎಂದು ಸೂಚಿಸಿದ್ದರಿಂದ ಮಾ.15 ರಂದು ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಅವಿಶ್ವಾಸ ಪರ್ಯಾಲೋಚನಾ ಸಭೆ ಕರೆದಿದ್ದೇನೆ ಎಂದಿದ್ದಾರೆ.

## ಜನಸೇವಾ ಟ್ರಸ್ಟ್‌ನಿಂದ ಶಾಲೆಗಳ ಅಭಿವೃದ್ಧಿ ಕಾರ್ಯಕ್ರಮ

ಕುಮಾರಪಟ್ಟಣಂ, ಮಾ.14- ಗ್ರಾಸಿಂ ಕಂಪನಿಯಿಂದ ಮೂಲಭೂತ ವಂಚಿತ ಶಾಲೆಗಳನ್ನು ಗುರ್ತಿಸಿ ಗ್ರಾಸಿಂ ಕಂಪನಿಯಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.


ಕವಲೆತ್ತಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಿದ ರಂಗಮಂದಿರವನ್ನು ಕಂಪೆನಿಯ ಹಿರಿಯ ಮುಖ್ಯಸ್ಥ ಅಜಯ್ ಕುಮಾರ್ ಗುಪ್ತಾಜಿ ಉದ್ಘಾಟಿಸಿ ಮಾತನಾಡಿ, ಮಕ್ಕಳ ಕಲಿಕೆಗಾಗಿ 5 ಗಣಕ ಯಂತ್ರಗಳನ್ನು ವಿತರಿಸಲಾಗಿದ್ದು, 1.3 ಲಕ್ಷ ವೆಚ್ಚದಲ್ಲಿ ರಂಗಮಂದಿರ ನಿರ್ಮಿಸಲಾಗಿದೆ. ಪ್ರತಿಭಾ ಪುರಸ್ಕಾರ, ಶೌಚಾಲಯಗಳ ನಿರ್ಮಾಣ, ಕಾಂಪೌಂಡ್ ಹಾಗೂ ಕೊಠಡಿಗಳ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ ಎಂದರು. ಮೆಡ್ಲೇರಿ ವಲಯ ಸಿಆಒ ಬಿ.ಕೆ. ಅಶೋಕ್, ಟ್ರಸ್ಟಿನ ವ್ಯವಸ್ಥಾಪಕ ದಿನೇಶ್ ನಾಯಕ್, ಉಪ ವ್ಯವಸ್ಥಾಪಕರಾದ ರೇಣುಕಾ ನಾಗನೂರ, ಎನ್. ಮಂಜುನಾಥ್, ಪಿಡಿಒ ಬಸವನಗೌಡ ಪಾಟೀಲ, ಗ್ರಾ. ಪಂ. ಅಧ್ಯಕ್ಷೆ ಸಾವಿತ್ರಮ್ಮ ಬಣಕಾರ್, ಎಸ್‌ಡಿಎಂಸಿ ಅಧ್ಯಕ್ಷೆ ಲಕ್ಷ್ಮೀದೇವಿ, ಶಾಲಾ ಮುಖ್ಯಶಿಕ್ಷಕಿ ರೇಣುಕಾ ಮಾಳದಕರ್ ಉಪಸ್ಥಿತರಿದ್ದರು.

## ಕೂಡ್ಲಿಗಿ : ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷರಾಗಿ ಜಿ. ಬಸವರಾಜ್ ಆಯ್ಕೆ



ಕೂಡ್ಲಿಗಿ, ಮಾ.14- ವಿಜಯನಗರ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷರಾಗಿ ಕೂಡ್ಲಿಗಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಜಿ. ಬಸವರಾಜ್ ಆಯ್ಕೆಯಾಗಿದ್ದಾರೆ. ಕಾರ್ಯಾಧ್ಯಕ್ಷರಾಗಿ ಹಡಗಲಿ ದ್ಯಾಮಜ್ಜ, ಪ್ರಧಾನ ಕಾರ್ಯದರ್ಶಿ ಅರ್ಜುನ್ ಮನ್ನಾಪುರ, ಕೋಶಾಧ್ಯಕ್ಷ ಹೊಸಪೇಟೆ ನಿರಂಜನ್, ಪ್ರಧಾನ ಸಂಘಟನಾ ಕಾರ್ಯದರ್ಶಿ ಕೊಟ್ಟೂರಿನ ಜಿ. ಚಿತ್ತರಂಜನ್, ಉಪಾಧ್ಯಕ್ಷ ಡಾ. ದಯಾನಂದ ಕಿನ್ನಾಳ್, ಕಾರ್ಯದರ್ಶಿ ಹಗರಿಬೊಮ್ಮನಹಳ್ಳಿಯ ಗೂಳೆಪ್ಪ, ಗೌರವಾಧ್ಯಕ್ಷ ಡಾ.ಅಬ್ದುಲ್ ಸಮದ್ ಹಾಗೂ ಕಾನೂನು ಸಲಹೆಗಾರರಾಗಿ ಹಗರಿಬೊಮ್ಮನಹಳ್ಳಿ ಚಂದ್ರನಾಯ್ಕ ಅವರನ್ನು ಆಯ್ಕೆ ಮಾಡಲಾಗಿದೆ.

## ಜಾನಪದ ಸಂಗೀತ ಕಾರ್ಯಕ್ರಮ



ದಾವಣಗೆರೆ, ಮಾ. 14- ಕನ್ನಡ ಸಾಹಿತ್ಯ ಪರಿಷತ್ ಹರಿಹರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಹರಿಹರ ತಾಲ್ಲೂಕಿನ ಗುರು ಭವನದಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ ದತ್ತಿ ಉಪನ್ಯಾಸ ಮತ್ತು ಜಿಲ್ಲಾ ಮಟ್ಟದ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಲಾವಿದರಾದ ಜಿಗಳಿ ರಂಗನಾಥ್ ಮತ್ತು ಸಂಗಡಿಗರು ಜಾನಪದ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

## ಮಾಸ್ಕ್ ಧರಿಸದಿದ್ದಲ್ಲಿ ದಂಡ : ಕೂಡ್ಲಿಗಿ ತಹಶೀಲ್ದಾರ್

ಕೂಡ್ಲಿಗಿ, ಮಾ.14- ರಾಜ್ಯಾದ್ಯಂತ ಕೊರೊನಾ ಎರಡನೇ ಅಲೆ ಹರಡುತ್ತಿರುವ ಹಿನ್ನೆಲೆಯಲ್ಲಿ ಎಲ್ಲರೂ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕಾಗಿದೆ. ಮಾಸ್ಕ್ ಧರಿಸದಿದ್ದರೆ 100 ರೂ. ದಂಡ ವಿಧಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಹಶೀಲ್ದಾರ್ ಎಸ್. ಮಹಾಬಲೇಶ್ವರ ತಿಳಿಸಿದರು. ತಾಲ್ಲೂಕು ಮಟ್ಟದ 'ಟಾಸ್ಕ್ ಫೋರ್ಸ್ ಸಮಿತಿ' ಸಭೆಯಲ್ಲಿ ಅವರು ಮಾತನಾಡಿದರು. ಎರಡನೇ ಬಾರಿ ಕೊರೊನಾ ಲಸಿಕೆ ನೀಡುವ ಕಾರ್ಯ ಪ್ರಗತಿಯಲ್ಲಿದ್ದು, ಮುಂಚೂಣಿ ವಿವಿಧ ಇಲಾಖೆಗಳ ಸಿಬ್ಬಂದಿ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಸೂಚಿಸಿದರು.

ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹ ಣಾಧಿಕಾರಿ ಜಿ.ಎಂ. ಬಸಣ್ಣ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಷಣ್ಮುಖ ನಾಯ್ಕ್, ಕೊರೊನಾ ನೋಡಲ್ ಅಧಿಕಾರಿ ಡಾ. ಕೊಟ್ರೇಶ್, ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಸಿ. ಫಕ್ರುದ್ದೀನ್ ಸಾಬ್, ಸಿಪಿಐ ವಸಂತ ಅಸೋದೆ, ಶಿಶು ಅಭಿವೃದ್ಧಿ ಅಧಿಕಾರಿ ನಾಗನಗೌಡ ಸೇರಿದಂತೆ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

## ಗೃಹರಕ್ಷಕರ ನೇಮಕ : ಇಂದು ಅಭ್ಯರ್ಥಿಗಳಿಗೆ ದೈಹಿಕ ಪರೀಕ್ಷೆ

ದಾವಣಗೆರೆ : ಜಿಲ್ಲಾ ಗೃಹ ರಕ್ಷಕದಳ ಮಂಜೂರಾತಿಗೆ ಸಂಖ್ಯಾಬಲವನ್ನು ಕಾಯ್ದುಕೊಳ್ಳಲು ಜಿಲ್ಲೆಯ ವಿವಿಧ ತಾಲ್ಲೂಕು ಮತ್ತು ಉಪ ಘಟಕಗಳಲ್ಲಿ ಖಾಲಿ ಇರುವ ಒಟ್ಟು 57 ಸ್ಥಾನಗಳಿಗೆ ನೂತನ ಗೃಹರಕ್ಷಕರ ನೇಮಕಾತಿಗೆ ವಿವಿಧ ಘಟಕಗಳಿಂದ ಈಗಾಗಲೇ ಅರ್ಜಿ ಸಲ್ಲಿಸಿ ಪುರಸ್ಕೃತಗೊಂಡಿರುವ 161 ಅಭ್ಯರ್ಥಿಗಳಿಗೆ ಇಂದು ಬೆಳಿಗ್ಗೆ 10.30 ಕ್ಕೆ ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಪಡೆ ಕವಾಯತು ಮೈದಾನದಲ್ಲಿ ದೈಹಿಕ ಪರೀಕ್ಷೆ ಏರ್ಪಡಿಸಲಾಗಿದೆ.

# ಮಹಿಳೆ ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ ಶೋಷಣೆ ಮಾತ್ರ ನಿಂತಿಲ್ಲ

**ದಾವಣಗೆರೆ ವಿವಿ ಪರೀಕ್ಷಾಂಗ ಕುಲಸಚಿವೆ ಡಾ. ಅನಿತಾ ವಿಷಾದ**

ದಾವಣಗೆರೆ, ಮಾ.14- ಮಹಿಳೆ ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ ಶೋಷಣೆ ಮಾತ್ರ ನಿಂತಿಲ್ಲ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾದ ಡಾ. ಹೆಚ್.ಎಸ್. ಅನಿತಾ ವಿಷಾದಿಸಿದರು.

ಎಸ್.ಎಸ್. ಬಡಾವಣೆಯ ಸುಶೀಲಮ್ಮ ಬಂಕಾಪುರ ಚನ್ನಬಸಪ್ಪ (ಎಸ್‌ಬಿಸಿ) ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವರದಕ್ಷಿಣೆ ಸೇರಿದಂತೆ, ಸಮಾಜದಲ್ಲಿ ಮಹಿಳೆಯರು ಒಂದಲ್ಲಾ ಒಂದು ಸಾಮಾಜಿಕ ಪಿಡುಗಿನಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ. ಆದರೂ ಕುಟುಂಬ, ಸಮಾಜಕ್ಕಾಗಿ ತನ್ನದೇ ಆದ ಕೊಡುಗೆ ನೀಡುವ ಮೂಲಕ ಅವಳು ಮಾತೃಸ್ವರೂಪಿ ಆಗಿರುತ್ತಾಳೆ ಎಂದು ತಿಳಿಸಿದರು.

ಮಗುವಿನಿಂದ ಹಿಡಿದು ಮಹಿಳೆ ಆಗುವವರೆಗೂ ವಿವಿಧ ಹಂತಗಳನ್ನು ತಲುಪುವ ಆಕೆ ತಾಯಿ, ಅಕ್ಕ, ತಂಗಿ, ಹೆಂಡತಿ, ಶಿಕ್ಷಕಿ ಹೀಗೆ ಅನೇಕ ಸ್ಥಾನಗಳನ್ನು ಪಡೆದಿದ್ದಾಳೆ. ಎಲ್ಲಿ ನಾರಿಯರು ಪೂಜಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂಬುದು ಸತ್ಯ. ಇದು ಭಾರತದಲ್ಲಿ ಆಗಬೇಕಾದರೆ ಹೆಣ್ಣು ತನ್ನದೇ ಸ್ಥಾನಮಾನಗಳನ್ನು ಪಡೆಯಬೇಕಿದೆ ಎಂದು ಆಶಿಸಿದರು.

ಸಂಸಾರದಲ್ಲಿ ಹೆಣ್ಣು ಮತ್ತು ಗಂಡು ಇಬ್ಬರು ಸಮಾನರಾಗಿದ್ದಾಗ ಕುಟುಂಬ ಆರೋಗ್ಯಪೂರ್ಣವಾಗಿರಲು ಸಾಧ್ಯ. ಇದನ್ನು ಅರ್ಥಮಾಡಿಕೊಳ್ಳುವ ಮನೋಭಾವನೆ ಬರಬೇಕಿದೆ. ಭಾರತೀಯರಾಗಿ ನಾವು ನಮ್ಮ ಸಂಸ್ಕೃತಿಯನ್ನು ಉಳಿಸಬೇಕೆಂದರು.

ದಾವಣಗೆರೆ ವಿವಿ ಹಣಕಾಸು ಅಧಿಕಾರಿ ಡಿ. ಪ್ರಿಯಾಂಕ ಮಾತನಾಡಿ, ಪ್ರತಿ ಯಶಸ್ವೀ ಪುರುಷನ ಹಿಂದೆ ಮಹಿಳೆ ಇರುವಂತೆ, ನನ್ನ ಯಶಸ್ಸಿಗೆ ನನ್ನ ತಂದೆ ಪ್ರೋತ್ಸಾಹಿಸಿದ್ದಾರೆ. ಹೆಣ್ಣುಮಕ್ಕಳ ಸಾಧನೆಗೆ ಪೋಷಕರು, ಸಹೋದರರು, ಸಮಾಜದ ಪ್ರೋತ್ಸಾಹ ಅವಶ್ಯ. ಯಾರನ್ನೂ ಸಹ ಕೀಳಾಗಿ ಕಾಣಬಾರದು. ಪ್ರತಿ ಯೊಬ್ಬರಲ್ಲೂ ಪ್ರತಿಭೆ, ಸಾಧನೆಯ ಸಾಮರ್ಥ್ಯ ಇರಲಿದ್ದು, ಅದನ್ನು ಗುರುತಿಸಬೇಕೆಂದರು.

ಶಿಕ್ಷಕರು ವಿದ್ಯಾರ್ಥಿಗಳಿಗೆ ಎರಡನೇ ಪೋಷಕರಿದ್ದಂತೆ. ಅವರಿಗೂ ಸಹ ತನ್ನ ವಿದ್ಯಾರ್ಥಿಗಳು ಉನ್ನತ ಸ್ಥಾನ ಪಡೆಯಲಿ ಎಂದು ಮಾರ್ಗದರ್ಶನ ಮಾಡುತ್ತಾರೆ. ಅದನ್ನು ನಾವುಗಳು ಗಮನದಲ್ಲಿಟ್ಟುಕೊಂಡು ಶೈಕ್ಷಣಿಕ ಪ್ರಗತಿ ಸಾಧಿಸಬೇಕಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಷಣ್ಮುಖಪ್ಪ ಮಾತನಾಡಿ, ಕಿತ್ತೂರು ರಾಣಿ ಚೆನ್ನಮ್ಮ, ಇಂದಿರಾ ಗಾಂಧಿ ಮೊದಲಾದ ಸಾಧಕಿಯರು ಎಲ್ಲರಿಗೂ ಆದರ್ಶವಾಗಬೇಕು. ಚೆನ್ನಾಗಿ ಓದುವುದರ ಜೊತೆಗೆ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿದರು.

ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಾ. ಭಾಗ್ಯಶ್ರೀ ಹುಬ್ಬೀಕರ್ ಸ್ವಾಗತಿಸಿದರು. ಕೆ.ಬಿ. ಚಿನ್ಮಯ್ ಪ್ರಾರ್ಥಿಸಿದರು. ಸೌಮ್ಯ ವಂದಿಸಿದರು.

## ಡಿಸಿಎಂ ಟೌನ್‌ಶಿಪ್‌ನಲ್ಲಿ ಮಹಾಶಿವರಾತ್ರಿ ಆಚರಣೆ



ದಾವಣಗೆರೆ, ಮಾ.14- ನಗರದ ಡಿ.ಸಿ.ಎಂ ಟೌನ್‌ಷಿಪ್‌ನ ನಾಗರಿಕರ ಹಿತರಕ್ಷಣಾ ಸಂಘದಿಂದ ರಾಜನಹಳ್ಳಿ ಹನುಮಂತಪ್ಪ ಉದ್ಯಾನವನದಲ್ಲಿ 16ನೇ ವರ್ಷದ ಮಹಾಶಿವರಾತ್ರಿ ಜಾಗರಣೆ ಹಾಗೂ ಭಕ್ತಿ ಸಿಂಚನ ಕಾರ್ಯಕ್ರಮ ನಡೆಯಿತು.

ಮಹಾನಗರ ಪಾಲಿಕೆಯ ಮಹಾಪೌರ ಎಸ್. ಟಿ. ವೀರೇಶ್ ಉದ್ಘಾಟಿಸಿ ಮಾತನಾಡಿದ ಅವರು, ಮೂಲಭೂತ ಸೌಕರ್ಯಗಳಾದ ಶುದ್ಧ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ಗುಣಮಟ್ಟದ ರಸ್ತೆ ನಿರ್ಮಾಣ, ಉದ್ಯಾನವನಗಳ ಅಭಿವೃದ್ಧಿ ಹಾಗೂ ಗ್ರಂಥಾಲಯ ಸ್ಥಾಪಿಸುವುದಕ್ಕೆ ಆದ್ಯತೆ ಕೊಡಲಾಗುವುದು ಎಂದು ತಿಳಿಸಿದರು.

ನನಗೆ ಸನ್ಮಾನ ಬೇಡ. ಜನರಿಗೆ ಉಪಯೋಗವಾಗುವ ಕೆಲಸಕ್ಕೆ ಆದ್ಯತೆ ನೀಡಿ, ಕಾರ್ಯಗತಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದು ತಿಳಿಸಿದರು.

ಅತಿಥಿಗಳಾದ ಡಿವೈಎಸ್‌ಪಿ ಪಿ.ಬಿ. ಪ್ರಕಾಶ್ ಅವರು, ಮನುಷ್ಯನಿಗೆ ಅಸಾಧ್ಯವಾದುದು ಯಾವುದೂ ಇಲ್ಲ, ಛಲ ಬೇಕು. ಛಲ ಸಾಧಿಸಲು ಇಂದೇ ಸಂಕಲ್ಪ ಮಾಡಿ ಎಂದು ತಿಳಿಸಿ, ಸಮಯದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿ, ಗೌರವಿಸಿದರು.

ಪ್ರಾಂಶುಪಾಲ ಕೆ.ಹೆಚ್. ಮಂಜುನಾಥ ರೆಡ್ಡಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಉಪನ್ಯಾಸಕ ವಾಮದೇವಪ್ಪ ಈಚಘಟ್ಟ ಸ್ವಾಗತಿಸಿದರು, ಖಜಾಂಚಿ ಎಸ್.ವಿ. ವಿಶ್ವನಾಥ್ ವಂದನಾರ್ಪಣೆ ಸಲ್ಲಿಸಿದರು.

ವಿಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಶ್ರೀಮತಿ ಸುಮಾ ಮಲ್ಲಿಕಾರ್ಜುನಯ್ಯ, ಕಾರ್ಯದರ್ಶಿ ಸಾಂಬೋಜಿರಾವ್, ಸುರೇಂದ್ರ ಮೊಯ್ಲಿ, ಕೆ. ನಾಗರಾಜ್, ತಿರುಮಲೈ ಉಪಸ್ಥಿತರಿದ್ದರು.

ಕು. ಕೆ.ಬಿ. ಚಿನ್ಮಯಿ ಪ್ರಾರ್ಥಿಸಿದರು. ಕಾರ್ಯಕ್ರಮದಲ್ಲಿ ಭಕ್ತಿ ಸಿಂಚನ, ಲಂಬಾಣಿ ನೃತ್ಯ ನಡೆಯಿತು. ಕಾರ್ಯಕ್ರಮವನ್ನು ಶಿಕ್ಷಕ ಕೆ.ಸಿ. ಬಸವರಾಜ್ ನಿರೂಪಿಸಿದರು.

## ಕುಮಾರಪಟ್ಟಣದಲ್ಲಿ ವಿಶ್ವ ಜಲ ದಿನ : ನೀರು ಪೂರೈಸುವ ಸಿಬ್ಬಂದಿಗೆ ಸನ್ಮಾನ



ಕುಮಾರಪಟ್ಟಣ, ಮಾ. 14- ಇಲ್ಲಿನ ಕೋಡಿಯಾಲ ಗ್ರಾಮದಲ್ಲಿ ನೀರಿನ ಪೂರೈಕೆ ಕಾರ್ಯ ನಿರ್ವಹಿಸುತ್ತಿರುವ ನಾಗರಾಜ ಆರ್. ಗೋಣೆಪ್ಪನವರ್, ಕಾಳಿಂಗಪ್ಪ ಮಲ್ಲಪ್ಪ ಅಂಗರಗಟ್ಟಿ, ಪ್ರಕಾಶ ಜಿ. ಗುತ್ತೂರು, ಮಹಾಂತೇಶ ದುರುಗಪ್ಪ ಕೋಡಿಯಾಲ ಅವರನ್ನು ವಿಶ್ವ ಜಲ ದಿನದ ಅಂಗವಾಗಿ ಕುಮಾರಪಟ್ಟಣ ಠಾಣೆಯ ಉಪನಿರೀಕ್ಷಕ ಕೆ.ಟಿ ಅಣ್ಣಯ್ಯ ಠಾಣೆಯ ಆವರಣದಲ್ಲಿ ಸನ್ಮಾನಿಸಿದರು. ಕೋಡಿಯಾಲ ಪಂಚಾಯತ್ ಅಧ್ಯಕ್ಷ ಚೇತನ ಪೂಜಾರ್ ಪ್ರಶಸ್ತಿ ಪತ್ರ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಧನ್ಯೋಸ್ಮಿ ಭರತ ಭೂಮಿ ಸಂಘಟನೆಯ ಚರಣ್ ಅಂಗಡಿ, ಕೋಡಿಯಾಲ ಪಂಚಾಯತ್ ಅಧ್ಯಕ್ಷ ಚೇತನ ಪೂಜಾರ, ಡಾ॥ ಜಿ ಜೆ ಮೆಹೆಂದಳೆ. ಮಿಥುನ್ ಕಟವಟೆ, ಗುರುಪ್ರಸಾದ್ ಅನ್ವೇರಿ, ಹರೀಶ ಆರ್ ಆರ್, ಮಧು ಬಿ.ಸಿ., ವಿಜಯ ಕೆ. ಬಾತಿ, ಎಂ.ಯು. ವಿಜಯ, ಚನ್ನಬಸಯ್ಯ, ಪೊಲೀಸ್ ಸಿಬ್ಬಂದಿ, ಪ್ರಕಾಶ ಅರಳಿಕಟ್ಟಿ, ಕಿರಣ ಬೆಳಗಾಂವ್, ಸಿದ್ದು ಗುಡ್ಡೇಕಾರ್, ಮಹಾದೇವ, ಉಮೇಶ, ವೀಣಾ ಮೇಣಕೂರ ಉಪಸ್ಥಿತರಿದ್ದರು.

## ಚಿಂತನ ಚಾನಲ್ ವಾರ್ಷಿಕೋತ್ಸವ



ಹರಿಹರ, ಮಾ.14- ನಗರದ ಕೋಟೆ ಪ್ರದೇಶದಲ್ಲಿರುವ ಚಿಂತನ ಪ್ರತಿಷ್ಠಾನದ ಕಚೇರಿ ಮುಂಭಾಗ ಚಿಂತನ ಯೂಟ್ಯೂಬ್ ಚಾನಲ್‌ನ ಎರಡನೇ ವಾರ್ಷಿಕೋತ್ಸವ ಆಚರಿಸಲಾಯಿತು.

ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ ಮಾತನಾಡಿದರು. ಚಿಂತನ ಪತ್ರಿಷ್ಠಾನದ ಅಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಶಂಕರ ಸಂಗೀತ ಪಾಠಶಾಲೆಯ ಪ್ರಾಚಾರ್ಯೆ ಮಾಧುರಿ ಶೇಷಗಿರಿ, ವೀಣಾ ದೀಕ್ಷಿತ್, ಎನ್.ಬಿ. ಲೀಲಾ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಷಣ್ಮುಖ ದೇವರ ನಾಮಗಳನ್ನು ಹಾಡಿದರು. ಶ್ರೀ ಶಂಕರ ಸಂಗೀತ ಪಾಠಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಚಿಂತನ ಪ್ರತಿಷ್ಠಾನದ ಕಾರ್ಯದರ್ಶಿ ಡಿ. ಫ್ರಾನ್ಸಿಸ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

## ಕೂಡ್ಲಿಗಿ : ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಸನ್ಮಾನ ಕಾರ್ಯಕ್ರಮ



ಕೂಡ್ಲಿಗಿ, ಮಾ.14- ಮಹಾಶಿವರಾತ್ರಿ ಪ್ರಯುಕ್ತ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಅನ್ನ ಸಂತರ್ಪಣೆ ಹಾಗೂ ಭಜನಾ ಕಾರ್ಯಕ್ರಮ ಸೇರಿದಂತೆ ಇನ್ನಿತರೆ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಇದೇ ವೇಳೆ ಸಮಾಜ ಸೇವೆ ಸಲ್ಲಿಸುತ್ತಿರುವ ಪಟ್ಟಣದ ಯುವ ಮಿತ್ರರನ್ನು ಸನ್ಮಾನಿಸಿ, ಗೌರವಿಸಲಾಯಿತು.




## ಪಾಲಿಕೆಯ ಮಹಾಪೌರ ಎಸ್.ಟಿ. ವೀರೇಶ್‌ರಿಂದ ನರ್ಸರಿ ವೀಕ್ಷಣೆ



ದಾವಣಗೆರೆ, ಮಾ.14- ಪಾಲಿಕೆ ಮತ್ತು ಅರಣ್ಯ ಇಲಾಖೆಯಿಂದ ಸಂಯೋಜಿತಗೊಂಡಿರುವ ಮರ, ಗಿಡ ನೆಡುವ ಕಾರ್ಯಕ್ರಮಕ್ಕೆ ನರ್ಸರಿಯಲ್ಲಿ ಬೆಳೆಸುತ್ತಿರುವ ಸಸಿಗಳ ವೀಕ್ಷಣೆ ಮಾಡಲಾಯಿತು. ಈ ಸಮಯದಲ್ಲಿ ಮಹಾನಗರಪಾಲಿಕೆಯ ಮಹಾಪೌರ ಎಸ್.ಟಿ. ವೀರೇಶ್ ಮತ್ತು ಮಾಜಿ ಮಹಾಪೌರರು ಹಾಗೂ ಹಾಲಿ ನಗರ ಯೋಜನೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಉಮಾ ಪ್ರಕಾಶ್ ಹಾಗೂ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರಾದ ರೇಣುಕಾ ಶ್ರೀನಿವಾಸ್, ಉಪ ಮಹಾಪೌರರಾದ ಸೌಮ್ಯ ನರೇಂದ್ರಕುಮಾರ್, ಪಾಲಿಕೆ ಸದಸ್ಯರಾದ ಗಾಯತ್ರಿ ಬಾಯಿ ಉಪಸ್ಥಿತರಿದ್ದರು.

## ಮಕ್ಕಳ ಲೋಕದಲ್ಲಿ ಹುಟ್ಟುಹಬ್ಬ, ಅನ್ನ ಸಂತರ್ಪಣೆ

ದಾವಣಗೆರೆ, ಮಾ.14- ಶ್ರೀ ಸಿದ್ಧಗಂಗಾ ಮಕ್ಕಳ ಲೋಕದಲ್ಲಿ ಡಾ. ಎ.ಕೆ. ಪೃಥ್ವಿ ಅವರ ಹುಟ್ಟುಹಬ್ಬದಲ್ಲಿ ಬಡ ಹಾಗೂ ಕಾರ್ಮಿಕ ಮಕ್ಕಳಿಗೆ ಅನ್ನದಾನ ನಡೆಯಿತು. ಪೃಥ್ವಿ ಶಿವಮೊಗ್ಗದಲ್ಲಿ ವೈದ್ಯಕೀಯ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದು, ಬಾಪೂಜಿ ಕಾಲೇಜು ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಐಗೂರು ತಿಪ್ಪೇಸ್ವಾಮಿ, ಗೀತಾ ಕುಮಾರಿಯವರ ಪುತ್ರ.

ದಾನಿಗಳಾದ ಐಗೂರು ತಿಪ್ಪೇಸ್ವಾಮಿ ಹಾಗೂ ಕವಯತ್ರಿ ಗೀತಾ ಕುಮಾರಿ ಅವರಿಗೆ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಕ್ಕಳಿಗೆ ಕನ್ನಡ ಬರವಣಿಗೆ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಪಾಠ ಓದುವ ಸ್ಪರ್ಧೆ ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿ ಗಳಾಗಿ ವರದಿಗಾರ ಕೊಟ್ರೇಶ್ ಆಗಮಿಸಿದ್ದರು.

ಸಂಸ್ಥೆ ಪ್ರಾಚಾರ್ಯರು, ಜಾನಪದ ಅಕಾಡೆಮಿ ಸದಸ್ಯರು, ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಂಗೀತ ಗುರುಗಳಾದ ಸಿ.ಕೆ. ರುದ್ರಾಕ್ಷಿಬಾಯಿ, ರುಕ್ಮಾಬಾಯಿ, ಮಕ್ಕಳಿಗೆ ವಚನ ಭಕ್ತಿಗೀತೆ, ಭಾವಗೀತೆ ಹೇಳಿಕೊಟ್ಟರು. ಮಕ್ಕಳ ಲೋಕಕ್ಕೆ ಸಹಾಯ ಮಾಡುತ್ತಿರುವ ಸರ್ವರಿಗೂ ಸಾಹಿತಿ ಕೆ.ಎನ್. ಸ್ವಾಮಿ ಕೃತಜ್ಞತೆ ಸಲ್ಲಿಸಿದರು.ಸಭೆಯ ಅಧ್ಯಕ್ಷತೆಯನ್ನು ಪುಟ್ಟಾನಾಯ್ಕ ವಹಿಸಿದ್ದರು.

## ಅನಿಲ್‌ಕುಮಾರ್‌ಗೆ ಪಿಹೆಚ್‌ಡಿ

ದಾವಣಗೆರೆ, ಮಾ.14- ಪ್ರಾಧ್ಯಾಪಕ ವಿ.ಆರ್. ಅನಿಲ್ ಕುಮಾರ್ ಅವರು ಪ್ರೊ. ಡಾ. ಎಸ್. ರಮೇಶ್ ಅವರ ಮಾರ್ಗದರ್ಶನದಲ್ಲಿ ಬೆಂಗಳೂರಿನ ವಾಣಿಜ್ಯ ಬ್ಯಾಂಕುಗಳ ಸಗಟು ವ್ಯವಹಾರ ಒಂದು ಸಮಗ್ರ ಅಧ್ಯಯನ ಕುರಿತು ಸಲ್ಲಿಸಿದ ಸಂಶೋಧನಾ ಪ್ರಬಂಧಕ್ಕೆ ಕೊಯಮತ್ತೂರು ಭಾರ ತೀಯರ್ ವಿಶ್ವವಿದ್ಯಾನಿಲಯ ಪಿಹೆಚ್‌ಡಿ ಪದವಿ ನೀಡಿದೆ.

## ಶಾಸಕ ಯತ್ನಾಳ್ ಹೇಳಿಕೆಗೆ ಬಣಜಿಗ ಸಮಾಜದ ಸ್ಪಷ್ಟನೆ

ದಾವಣಗೆರೆ, ಮಾ.14- ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ತಮ್ಮ ಸಮಾಜಕ್ಕೆ ಮೀಸಲಾತಿ ಕೇಳುವ ಬರದಲ್ಲಿ ಬಣಜಿಗ ಸಮಾಜದ ಬಗ್ಗೆ ವ್ಯಂಗ್ಯ ಮತ್ತು ದ್ವೇಷ ಕಾರುತ್ತಿದ್ದಾರೆ ಎಂದು ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕ ಆರೋಪಿಸಿದೆ.

ಬಸವನಗೌಡ ಯತ್ನಾಳ್ ಅವರಿಗೆ ನಮ್ಮ ಬಣಜಿಗ ಸಮಾಜದ ಕುರಿತು ತಪ್ಪು ತಿಳುವಳಿಕೆ ಇರುವಂತೆ ಕಾಣುತ್ತದೆ. ಯಾವುದೇ ಸಮಾಜ ಪಡೆಯುವ ಸರ್ಕಾರಿ ಸವಲತ್ತುಗಳಿಗೆ ಮತ್ತು ಮೀಸಲಾತಿಗೆ ನಮ್ಮ ಸಮಾಜ ಎಂದಿಗೂ ವಿರೋಧಿಸಿಲ್ಲ. ಅದರಂತೆ ಪಂಚಮಸಾಲಿ ಸಮಾಜ 2ಎ ಪಡೆಯಲು ನಡೆಸುತ್ತಿರುವ ಹೋರಾಟಕ್ಕೂ ಸಹ ನಮ್ಮ ಬೆಂಬಲವಿದೆ ಎಂದು ಜಿಲ್ಲಾಧ್ಯಕ್ಷ ಹೆಚ್.ಆರ್. ಸಿದ್ದಲಿಂಗೇಶ್ ಪತ್ರಿಕಾ ಹೇಳಿಕೆಯಲ್ಲಿ ಸ್ಪಷ್ಟನೆ ನೀಡಿದ್ದಾರೆ.

ಆದರೆ, ಯತ್ನಾಳ್ ಅವರು ವಿನಾಕಾರಣ ನಮ್ಮ ಸಮಾಜದ ಕುರಿತು ದ್ವೇಷ ಕಾರುತ್ತಿದ್ದಾರೆ. ತಮ್ಮ ಸಮಾಜಕ್ಕೆ ಮೀಸಲಾತಿ ತಂದುಕೊಡುವ ಬರದಲ್ಲಿ ಬಣಜಿಗರಿಗೆ ವ್ಯಂಗ್ಯ ಮಾಡುತ್ತಿರುವುದನ್ನು ನಾವು ಒಪ್ಪಿಕೊಳ್ಳುವುದಿಲ್ಲ. ನಮ್ಮ ಸಮುದಾಯ ಪಂಚಮಸಾಲಿ ಸಮಾಜಕ್ಕೆ ಮಾಡಿರುವ ಅನ್ಯಾಯವಾದರೂ ಏನು? ಎಂದು ಪ್ರಶ್ನಿಸಿದ್ದಾರೆ.

ಬಣಜಿಗರಿಗೆ ಹಿಂದುಳಿದ ವರ್ಗದಲ್ಲಿ ಸ್ಥಾನ ಸಿಕ್ಕಿರುವುದು ಮಾಜಿ ಸಿಎಂ ಜಗದೀಶ್ ಶೆಟ್ಟರ್ ಅವಧಿಯಲ್ಲಲ್ಲ. ಹಿಂದುಳಿದ ಆಯೋಗದ ಅಧ್ಯಕ್ಷರಾಗಿದ್ದ ಲಕ್ಷ್ಮಣ್ ಜಿ. ಹಾವನೂರು ಅವರು 1976ರಲ್ಲಿ ನಮಗೆ ಹಿಂದುಳಿದ ವರ್ಗದಲ್ಲಿ ಸ್ಥಾನ ಕಲ್ಪಿಸಿಕೊಟ್ಟರು. ಆದರೆ, ನಮಗೆ ಮೀಸಲಾತಿ ಪ್ರಮಾಣ ಪತ್ರ ಸಿಗದ ಹಿನ್ನೆಲೆಯಲ್ಲಿ ಮನವಿ ಸಲ್ಲಿಸಿದ ಕಾರಣ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಅವರು ಪ್ರಮಾಣ ಪತ್ರ ನೀಡುವಂತೆ ಆದೇಶಿಸಿದ್ದರು ಎಂದು ಸ್ಪಷ್ಟಪಡಿಸಿದ್ದಾರೆ.

ನಮ್ಮ ಬಣಜಿಗ ಸಮಾಜಕ್ಕೆ ಶಿಕ್ಷಣದಲ್ಲಿ ಮಾತ್ರ ಮೀಸಲಾತಿ ದೊರಕಿದ್ದು, ಯತ್ನಾಳ್ ಅವರ ಹೇಳಿಕೆಯಿಂದ ನಮ್ಮ ಸಮುದಾಯದ ಬಗ್ಗೆ ಅನುಮಾನದಿಂದ ನೋಡುವಂತಾಗಬಾರದು. ಲಿಂಗಾಯತ ಒಳಪಂಗಡಗಳು ಭ್ರಾತೃತ್ವ ಭಾವನೆಯಿಂದ ಇಲ್ಲಿಯವರೆಗೂ ನಡೆದುಕೊಂಡಿದ್ದು, ಅದಕ್ಕೆ ಯತ್ನಾಳ್ ಅವರ ಹೇಳಿಕೆ ಕಿಚ್ಚು ಹಚ್ಚಬಾರದು. ಮಾತುಗಳು ಇನ್ನೊಬ್ಬರ ಹೃದಯವನ್ನು ಅರಳಿಸಬೇಕೇ ಹೊರತು, ಕೆರಳಿಸುವಂತೆ ಇರಬಾರದು. ಅವರ ಘನತೆಗೆ ತಕ್ಕಂತೆ ಅವರು ಮಾತನಾಡಬೇಕಿದೆ ಎಂದು ಕೋರಿದ್ದಾರೆ.

## ಗಾಡಿ ಅಜ್ಜನವರ ಉತ್ಸವ-ರಕ್ತದಾನ ಶಿಬಿರ



ಹೂವಿನಹಡಗಲಿ, ಮಾ.14- ತಾಲ್ಲೂಕಿನ ಕೊಂಬಳಿ ಗ್ರಾಮದ ಸಮೀಪವಿರುವ ಚೌಕಿಮಠದಲ್ಲಿ ಗಾಡಿ ಅಜ್ಜನವರ ಉತ್ಸವ ಯಶಸ್ವಿಯಾಗಿ ಜರುಗಿತು. ಉತ್ಸವದ ಅಂಗವಾಗಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು.

## ವಾರ್ಡ್ 30, 31 ರಲ್ಲಿ ತೆರಿಗೆ ವಸೂಲಾತಿ ಆಂದೋಲನ

**ಹರಿಹರ**

ಹರಿಹರ, ಮಾ.14- ನಗರಸಭೆ ವ್ಯಾಪ್ತಿಯ ವಾರ್ಡ್ ನಂ. 30, 31 ರಲ್ಲಿ ನಗರಸಭೆ ವತಿಯಿಂದ ತೆರಿಗೆ ವಸೂಲಾತಿ ಆಂದೋಲನ ಹಾಗೂ ಸಾರ್ವಜನಿಕರಿಂದ ಕುಂದು - ಕೊರತೆ ಸ್ವೀಕಾರ ಕಾರ್ಯಕ್ರಮವನ್ನು ಶಾಸಕ ಎಸ್. ರಾಮಪ್ಪ ಅಧ್ಯಕ್ಷತೆಯಲ್ಲಿ ವಿದ್ಯಾನಗರದ ಐರಣಿ ಮಠದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಶಾಸಕ ರಾಮಪ್ಪ ಮಾತನಾಡಿ, ನಗರಸಭೆ ಒಂದು ಉತ್ತಮ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸಾರ್ವಜನಿ ಕರು ಸ್ಥಳದಲ್ಲೇ ತೆರಿಗೆ ಪಾವತಿಯನ್ನು ಪಡೆದು ಸಕಾಲ ದಲ್ಲಿ ಪಾವತಿಸಿ ರಿಯಾಯ್ತಿ ಸೌಲಭ್ಯವನ್ನು ಪಡೆಯುವ ಜೊತೆಗೆ ನಗರದ ಅಭಿವೃದ್ಧಿಗೆ ಸಹಕರಿಸಬೇಕೆಂದರು.

ಇದೇ ವೇಳೆ ಸಾರ್ವಜನಿಕರ ಕುಂದುಕೊರತೆಗಳನ್ನು ಸ್ವೀಕರಿಸಲಾಯಿತು.

ಪೌರಾಯುಕ್ತ ಉದಯಕುಮಾರ್ ಬಿ. ತಳವಾರ, 30ನೇ ವಾರ್ಡಿನ ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ಸಹಾಯಕ ಕಾರ್ಯಪಾಲಕ ಅಭಿಯಂತರ ಎಸ್.ಎಸ್. ಬಿರಾದಾರ್, ಕಂದಾಯ ಅಧಿಕಾರಿ ಜೆ.ವಿ. ಮಂಜುನಾಥ್, ಕಂದಾಯ ನಿರೀಕ್ಷಕರಾದ ಪಿ. ವಸಂತ್ ಹಾಗೂ ಕಿರಣ್ ಕುಮಾರ್, ಕರ ವಸೂಲಿಗಾರರಾದ ಅಣ್ಣಪ್ಪ, ನಾಗರಾಜ, ಲೆಕ್ಕಾಧೀಕ್ಷಕ ನಾಗರಾಜ ಬಲ್ಲಾಳ ಹಾಗು ಇನ್ನಿತರೆ ಅಧಿಕಾರಿಗಳು ಹಾಜರಿದ್ದರು.

**IN THE COURT OF THE HON'BLE SENIOR CIVIL JUDGE & JMFC AT DAVANAGERE**

**O.S. No. 1/2020**

**PLAINTIFFS : 1. Smt. Nagaratnamma w/o Girish B.K.,**
Aged about 46 Years, occ: Engineer,
R/o # 001, RM Shetty Enclave,10th cross `A' Block S.S. Layout, Davanagere.

**2. Sri Girish B.K., S/o Krishnappa**
Aged about 50 years, Occ: Engineer
R/o # 001, RM Shetty Enclave,10th cross `A' Block S.S. Layout, Davanagere.

**3. sri. Dhanyakumar T., S/o Thimmappa**
Aged about 40 years, occ: agriculturist,
R/o # 1744/6 16th Cross Anjaneya Badavane, Davanagere.

**VERSES**

**DEFENDANT NO.3 : sri Ravikumar, s/o Panchaksharappa,**
aged about 46 years, Electrical work R/o KTJ Nagara, Davanagere.

**NOTICE UNDER ORDER-V RULE - 20 OF CPC**

whereas plaintiffs have filed the above case against you seeking the damages for loss of reputation, you defedant No 3 is hereby directed to appear in this court in person or by advocate on 5/04/2021 forenoon at 11.00 a.m. to defend yourself failing which the petition will be heard and determined ex-parte. Given under my hand and seal of this court on day of 12.03.2021

**K.G.K. Swamy,**
**S.G. Mahaveer**
Advocate for Petitioner
`Law solutions' # 417/4A, 4B, 1st Floor Benakesh Plaza opp : old janatavani office, Dixith Road, K.B. Extension, Davanagere

**By Order Of Court**
Chief Ministerial Officer
Prl Senior Civil Judge
Court, Davanagere.

**IN THE COURT OF THE HON'BLE SENIOR CIVIL JUDGE & JMFC AT DAVANAGERE**

**O.S. No. 2/2020**

**PLAINTIFFS : 1. Smt. Nagaratnamma w/o Girish B.K.,**
Aged about 46 Years, occ: Engineer,
R/o # 001, RM Shetty Enclave,10th cross `A' Block S.S. Layout, Davanagere.

**2. Sri Girish B.K., S/o Krishnappa**
Aged about 50 years, Occ: Engineer
R/o # 001, RM Shetty Enclave,10th cross `A' Block S.S. Layout, Davanagere.

**3. sri. Dhanyakumar T., S/o Thimmappa**
Aged about 40 years, occ: agriculturist,
R/o # 1744/6 16th Cross Anjaneya Badavane, Davanagere.

**VERSES**

**DEFENDANT NO.3 : sri Ravikumar, s/o Panchaksharappa,**
aged about 46 years, Electrical work R/o KTJ Nagara, Davanagere.

**NOTICE UNDER ORDER-V RULE - 20 OF CPC**

whereas plaintiffs have filed the above case against you seeking the damages for loss of reputation, you defendant No 3 is hereby directed to appear in this court in person or by advocate on 5/04/2021 forenoon at 11.00 a.m. to defend yourself failing which the petition will be heard and determined ex-parte. Given under my hand and seal of this court on day of 12.03.2021

**K.G.K. Swamy,**
**S.G. Mahaveer**
Advocate for Petitioner
`Law solutions' # 417/4A, 4B, 1st Floor Benakesh Plaza opp : old janatavani office, Dixith Road, K.B. Extension, Davanagere

**By Order Of Court**
Chief Ministerial Officer
Prl Senior Civil Judge
Court, Davanagere.

# ಅಪರಾಧಿಕ ಪ್ರಕರಣಗಳ ಸುಳ್ಳು ದೂರಿಗೆ ಕಠಿಣ ಕ್ರಮ

## ಸುಪ್ರೀಂನಲ್ಲಿ ಅರ್ಜಿ

ನವದೆಹಲಿ, ಮಾ. 14 – ಅಪರಾಧಿಕ ಪ್ರಕರಣಗಳ ಸುಳ್ಳು ದೂರುಗಳನ್ನು ದಾಖಲಿಸುವವರ ವಿರುದ್ಧ ಕಠಿಣ ಕ್ರಮ ತೆಗೆದು ಕೊಳ್ಳುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಬಿಜೆಪಿ ಮುಖಂಡರೊಬ್ಬರು ಅರ್ಜಿ ದಾಖಲಿಸಿದ್ದಾರೆ. ನಕಲಿ ದೂರಿಗೆ ಬಲಿ ಪಶುಗಳಾದವರಿಗೆ ಪರಿಹಾರ ನೀಡ ಬೇಕು ಎಂದೂ ಅವರು ಕೇಳಿದ್ದಾರೆ.

ಜಮೀನು ವಿವಾದದ ಹಿನ್ನೆಲೆ ಯಲ್ಲಿ ವಿಷ್ಣು ತಿವಾರಿ ಎಂಬುವವರನ್ನು ಅತ್ಯಾಚಾರ ಹಾಗೂ ಜಾತಿ ನಿಂದನೆಯ ಸುಳ್ಳು ಪ್ರಕರಣದಲ್ಲಿ ಸಿಲುಕಿಸಿ 20 ವರ್ಷ ಜೈಲಿಗೆ ಕಳಿಸಲಾಗಿತ್ತು. ಅಲಹಾ ಬಾದ್ ಹೈಕೋರ್ಟ್ ಇತ್ತೀಚೆಗೆ ಅವರನ್ನು ಬಿಡುಗಡೆ ಮಾಡಿತ್ತು. ಸಂಚಲನಾತ್ಮಕ ಪ್ರಕರಣ ಬೆಳಕಿಗೆ ಬಂದ ನಂತರ ಬಿಜೆಪಿ ಮುಖಂಡ ಕಪಿಲ್ ಮಿಶ್ರಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ.

ಸೆಪ್ಟೆಂಬರ್ 16, 2000ರಂದು ತಿವಾರಿ ಬಂಧಿಸಲಾಗಿತ್ತು. 20 ವರ್ಷಗಳನ್ನು ಅವರು ಜೈಲಿನಲ್ಲಿ ಕಳೆದಿದ್ದರು. ತಿವಾರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಮಿಶ್ರಾ ಅವರು ವಕೀಲ ಅಶ್ವನಿ ಕುಮಾರ್ ದುಬೆ ಮೂಲಕ ಅರ್ಜಿ ದಾಖಲಿಸಿದ್ದಾರೆ.

ನಕಲಿ ದೂರುಗಳ ವಿರುದ್ಧ ಕ್ರಮಕ್ಕೆ ವ್ಯವಸ್ಥೆ ರೂಪಿಸಬೇಕು ಹಾಗೂ ಈ ರೀತಿಯ ದೂರು ನೀಡಿದವರನ್ನು ದೋಷಾರೋಪಕ್ಕೆ ಗುರಿ ಮಾಡಬೇಕು. ಅವರಿಂದ ಸಂತ್ರಸ್ತರಿಗೆ ಪರಿಹಾರ ಕೊಡಿಸಬೇಕು ಎಂದು ಕೋರಲಾಗಿದೆ.

ಕೇಂದ್ರ ಗೃಹ ಸಚಿವಾಲಯ, ಉತ್ತರ ಪ್ರದೇಶ ಸರ್ಕಾರ ಹಾಗೂ ಕಾನೂನು ಆಯೋಗಗಳನ್ನು ಅರ್ಜಿದಾರರು ಪ್ರತಿವಾದಿಗಳಾಗಿ ಮಾಡಿದ್ದಾರೆ. ವಿಶೇಷ ಕಾಯ್ದೆಗಳಡಿ ಪ್ರಕರಣ ಎದುರಿಸುತ್ತಿರುವವರ ತ್ವರಿತ ವಿಚಾರಣೆ ನಡೆಸಬೇಕು ಎಂದೂ ಕೋರಲಾಗಿದೆ.

ಸುಳ್ಳು ಹಾಗೂ ದುರುದ್ದೇಶದ ದೂರುಗಳಿಗಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದ ದೌರ್ಜನ್ಯ ತಡೆ ಕಾಯ್ದೆಯನ್ನು ಬಳಸಿಕೊಳ್ಳಲಾಗುತ್ತಿದೆ. ಇಂತಹ ಕೃತ್ಯ ಎಸಗಿದವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಅರ್ಜಿದಾರರು ಹೇಳುತ್ತಿದ್ದಾರೆ.

ಸುಳ್ಳು ದೂರುಗಳಿಂದಾಗಿ ಪೊಲೀಸರು ಹಾಗೂ ಪ್ರಾಸಿಕ್ಯೂಷನ್ ದುರ್ವರ್ತನೆಗೆ ಒಳಗಾಗುವ ಅಮಾ ಯಕರು ಆತ್ಮಹತ್ಯೆ ಮಾಡಿ ಕೊಳ್ಳುತ್ತಿದ್ದಾರೆ. ವಿಚಾರಣೆ ವರ್ಷಗಳ ಕಾಲ ವಿಳಂಬವಾಗುವುದರಿಂದ ಅವರು ಹಾಗೂ ಕುಟುಂಬದವರು ಹತಾಶೆಗೆ ಸಿಲುಕುತ್ತಿದ್ದಾರೆ ಎಂದು ಅರ್ಜಿದಾರರು ತಿಳಿಸಿದ್ದಾರೆ.

# 26 ರಿಂದ 28 ರವರೆಗೆ ನಗರದಲ್ಲಿ 'ಮೆಗಾ ಸ್ಕೂಲ್ ಅಡ್ಮಿಷನ್ ಎಕ್ಸ್‌ಪೋ'

ದಾವಣಗೆರೆ, ಮಾ.14- ಒಂದೇ ಸೂರಿನಲ್ಲಿ ನಗರದ ಎಲ್ಲಾ ಖಾಸಗಿ ಶಾಲೆಗಳ ದಾಖಲಾತಿ ಮತ್ತು ಸಂಬಂಧಿಸಿದ ಸೂಕ್ತ ಮಾಹಿತಿ ನೀಡುವ 'ಮೆಗಾ ಸ್ಕೂಲ್ ಅಡ್ಮಿಷನ್ ಎಕ್ಸ್‌ಪೋ' ಕಾರ್ಯಕ್ರಮ ಇದೇ ದಿನಾಂಕ 26, 27, 28 ರಂದು 3 ದಿನಗಳ ಕಾಲ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಕ್ವಿನ್ ಸ್ಟೋನ್-ಹೈಟ್ಸ್ ಪ್ರೊಗ್ರೆಸ್ಸಿವ್ ಲರ್ನಿಂಗ್ ಅಕಾಡೆಮಿಯ ಆಯಿಷಾ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಗರದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ಉತ್ತಮ ಶಿಕ್ಷಣ ನೀಡುತ್ತಿವೆ. ಆದರೆ ಮಕ್ಕಳ ಭವಿಷ್ಯ ಹಾಗೂ ಉದ್ಯೋಗ ಮತ್ತಿತರೇ ಅವಕಾಶಗಳ ಬಗ್ಗೆ ತಿಳಿಸುತ್ತಿಲ್ಲ. ಆದ್ದರಿಂದ ಅಕಾಡೆಮಿ 1 ರಿಂದ 10ನೇ ತರಗತಿ ಮಕ್ಕಳ ಮತ್ತು ಪೋಷಕರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದೆ ಎಂದರು.

3 ದಿನಗಳ ಈ ಶೈಕ್ಷಣಿಕ ಮೇಳದಲ್ಲಿ 30 ಖಾಸಗಿ ಶಾಲೆಗಳು ಭಾಗವಹಿಸಲಿವೆ. ಪ್ರವೇಶಾತಿ, ಶುಲ್ಕದ ಮಾಹಿತಿಗಳನ್ನು ಸ್ಥಳದಲ್ಲೇ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಈ ರೀತಿ ಮೇಳ ಬೆಂಗಳೂರಿನಲ್ಲಿ ನಡೆದಿದ್ದು, ಉತ್ತಮ ಫಲಿತಾಂಶ ಕೂಡ ಬಂದಿದೆ. ಇದೀಗ ದಾವಣಗೆರೆಯಲ್ಲಿ ಪ್ರಥಮ ಬಾರಿಗೆ ಮೇಳ ನಡೆಯುತ್ತಿದ್ದು, ವಿದ್ಯಾರ್ಥಿಗಳು ಮತ್ತು ಪೋಷಕರು ಮೇಳದ ಸದುಪಯೋಗ ಪಡೆಯುವಂತೆ ಕೋರಿದರು.

ಪತ್ರಿಕಾಗೋಷ್ಠಿಯಲ್ಲಿ ಅಕಾಡೆಮಿಯ ಸಂಯೋಜಕ ಗಜೇಂದ್ರ, ವಿಧಿ, ಸೋನಾಲಿ ಉಪಸ್ಥಿತರಿದ್ದರು.



ದಾವಣಗೆರೆ, ಮಾ. 14- ಚಿರಂತನ ಸಂಸ್ಥೆ ವತಿಯಿಂದ ನಗರದ ಶಿವಯೋಗಿ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ ಕರ್ನಾಟಕ ಮಹಿಳಾ ಶ್ರೇಷ್ಠ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಉದ್ಘಾಟಿಸಿದರು. ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಇನ್ನಿತರರಿದ್ದರು.

# ಸ್ವ ಪ್ರತಿಷ್ಠೆ ಬಿಟ್ಟು ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಮುಖ್ಯವಾಹಿನಿಗೆ ಬನ್ನಿ



## ಹರಪನಹಳ್ಳಿ ನ್ಯಾ. ಉಂಡಿ ಮಂಜುಳಾ ಶಿವಪ್ಪ

ಹರಪನಹಳ್ಳಿ, ಮಾ.14- ಸ್ವ ಪ್ರತಿಷ್ಠೆ ಬಿಟ್ಟು ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಮುಖ್ಯವಾಹಿನಿಗೆ ಬನ್ನಿ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಉಂಡಿ ಮಂಜುಳಾ ಶಿವಪ್ಪ ಹೇಳಿದರು.

ಪಟ್ಟಣದ ಮೆಟ್ರಿಕ್ ಪೂರ್ವ ಸರ್ಕಾರಿ ಬಾಲಕಿಯರ ವಸತಿ ನಿಲಯದ ಆವರಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ. ವಕೀಲರ ಸಂಘ, ಸಮಾಜ ಕಲ್ಯಾಣ ಇಲಾಖೆ, ಅಲೆಮಾರಿ ಬುಡಕಟ್ಟು ಮಹಾಸಭಾ, ಎಸ್.ಸಿ. ಎಸ್.ಟಿ. ಸಮುದಾಯಗಳ ಮಹಾ ಒಕ್ಕೂಟ (ರಿ.) ಇವರ ಸಂಯುಕ್ತಾಶ್ರಯದಲ್ಲಿ 75 ನೇ ಸ್ವಾತಂತ್ರ್ಯೋತ್ಸವ ಪ್ರಯುಕ್ತ ಭಾರತ ಅಮೃತ ಮಹೋತ್ಸವ 2021ರ ಅಂಗವಾಗಿ ಬುಡಕಟ್ಟು ಜನಾಂಗದವರಿಗಾಗಿ ಹಮ್ಮಿಕೊಂಡಿದ್ದ ಕಾನೂನು ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮನುಷ್ಯ ಹುಟ್ಟುವಾಗ ಜಾತಿ ಹೆಸರು ಹೇಳಿಕೊಂಡು ಹುಟ್ಟಿರುವುದಿಲ್ಲ. ಆದರೆ, ಮನುಷ್ಯ ಬೆಳೆಯುತ್ತಾ ಅವರ ಕಾಯಕದ ಮೇಲೆ ಜಾತಿ ಹೆಸರು ಬೆಳೆಯುತ್ತಾ ಬಂದಿತು. ತಾಲ್ಲೂಕಿನಲ್ಲಿ ಬುಡ್ಗ ಜಂಗಮ.

ಹಂದಿ ಜೋಗಿ, ಚೆನ್ನ ದಾಸರ, ಶಿಂದೋಳ, ಕಿಳ್ಳಿಕ್ಯಾತ, ಸಿಳ್ಳಿ ಕ್ಯಾತ, ಡೊಂಬರು ಸೇರಿದಂತೆ ಅನೇಕ ಅಲೆಮಾರಿ ಬುಡಕಟ್ಟು ಸಮುದಾಯಗಳು ಜೀವಿಸುತ್ತಿದ್ದು, ಅವರಲ್ಲಿ ಸ್ವಂತ ನೆಲೆ ಇಲ್ಲದವರಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ವಂತ ಸೂರು, ವ್ಯವಸಾಯ ಮಾಡಲು ಭೂಮಿಯನ್ನು ಸರ್ಕಾರವೇ ಖರೀದಿ ಮಾಡಿಕೊಡುತ್ತದೆ.

ನಿಮ್ಮ ದಿನನಿತ್ಯದ ಸಮಸ್ಯೆಗಳಿದ್ದರೆ ನೇರವಾಗಿ ತಾಲ್ಲೂಕು ಕಾನೂನು ಸೇವಾ ಸಮಿತಿಗೆ ಅರ್ಜಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಿ ಎಂದು ಸಲಹೆ ನೀಡಿದರು.


ಅಪರ ಸರ್ಕಾರಿ ವಕೀಲ ಕಣವಿಹಳ್ಳಿ ಮಂಜುನಾಥ್ ಮಾತನಾಡಿ, ಶೋಷಿತ ಸಮುದಾಯಗಳು ಮುಖ್ಯವಾಹಿನಿಗೆ ಬರಲು ಅಂಬೇಡ್ಕರ್ ಪಟ್ಟ ಶ್ರಮ ಅವಿರತವಾಗಿದ್ದು, ಬರೀ ಬಲ್ಲಿದರಿಗೆ ಸೀಮಿತವಾಗಿದ್ದ ಶಿಕ್ಷಣ ಇಂದು ಎಲ್ಲ ಜನಾಂಗದವರಿಗೂ ಸಿಗುವಂತಹ ವ್ಯವಸ್ಥೆ ಇದ್ದು, ಶೋಷಿತರು ಕೂಡ ಶಿಕ್ಷಣ ಕಲಿತು ಮುಖ್ಯವಾಹಿನಿಗೆ ಬರಬೇಕು ಎಂದರು.

ಜಿಲ್ಲಾ ಅಲೆಮಾರಿ ಬುಡಕಟ್ಟು ಸಮುದಾಯಗಳ ಅಧ್ಯಕ್ಷ ಸಣ್ಣ ಅಜ್ಜಯ್ಯ ಮಾತನಾಡಿದರು.

ಗೊಂದಲಿಗ ಸಮಾಜದ ಗೋಪಾಲ. ಅಣ್ಣಪ್ಪ, ಮೇದಾರ ಕೃಷ್ಣಪ್ಪ ಸೇರಿದಂತೆ ಇತರರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ವಕೀಲರುಗಳಾದ ಕೆ. ಉಚ್ಚೆಂಗೆಪ್ಪ, ಮೃತ್ಯುಂಜಯ ಎಂ., ನಾಗರಾಜ ನಾಯ್ಕ. ನಿಲಯ ಪಾಲಕರಾದ ಯಾಸ್ಮಿನ್‌ಬಾನು, ಯಲ್ಲಮ್ಮ ಸೇರಿದಂತೆ ಇತರರು ಇದ್ದರು.

# ಜಿಲ್ಲಾಡಳಿತದಿಂದ ಮನುಶ್ರೀಗೆ 'ಅಸಾಧಾರಣ ಪ್ರತಿಭೆ' ಪ್ರಶಸ್ತಿ ಪ್ರದಾನ



ದಾವಣಗೆರೆ, ಮಾ.14- ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಾಡಿದ ಸಾಧನೆ ಗುರುತಿಸಿ, ನಗರದ ತರಳಬಾಳು ಸಿಬಿಎಸ್‌ಇ ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿ ಕು. ಜಿ.ಜೆ.ಮನುಶ್ರೀ ಗೆ ಜಿಲ್ಲಾಡಳಿತ ಅಸಾಧಾರಣ ಪ್ರತಿಭೆ ಪ್ರಶಸ್ತಿ ನೀಡಿ ಗೌರವಿಸಿದೆ. ಜಿಲ್ಲಾಡಳಿತದ ತುಂಗಭದ್ರಾ ಸಭಾಂಗಣದಲ್ಲಿ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಡಿಸಿ ಮಹಾಂತೇಶ್ ಬೀಳಗಿ ಸನ್ಮಾನಿಸಿದರು. ನಗರದ ಎಚ್‌ಕೆಆರ್ ಸರ್ಕಲ್‌ನಲ್ಲಿರುವ ಸ್ವಾಮಿ ಮೆಡಿಕಲ್ಸ್‌ನ ಜಯರುದ್ರಸ್ವಾಮಿ ಹಾಗೂ ಸೌಮ್ಯ ದಂಪತಿ ಮಗಳು. ಪ್ರಸ್ತುತ ದಾವಣಗೆರೆಯ ನಾಟ್ಯಭಾರತಿ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಕಲಾಕೇಂದ್ರದ ವಿದುಷಿ ರಜನಿ ರಘುನಾಥ ಕುಲಕರ್ಣಿ,ಶ್ರೀಕಾಂತ್ ಕುಲಕರ್ಣಿ ಹಾಗೂ ಶ್ರೀ ನಿಧಿ ಕುಲಕರ್ಣಿ ಇವರ ಬಳಿ ಅಭ್ಯಾಸ ಮಾಡುತ್ತಿದ್ದಾರೆ.

## ರಾಜ್ಯ, ಅಂತರರಾಷ್ಟ್ರೀಯ ವಾರ್ತೆ

# ಶ್ರೀಶೈಲದಲ್ಲಿ ಅಡ್ಡಪಲ್ಲಕ್ಕಿ ಮಹೋತ್ಸವ



ಶ್ರೀಶೈಲ, ಮಾ. 14 - ಜಗದ್ಗುರು ಸೂರ್ಯ ಸಿಂಹಾಸನಾಧೀಶ್ವರ ಶ್ರೀ 1008 ಡಾ. ಚೆನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾ ಭಗವತ್ಪಾದಂಗಳವರ ಅಡ್ಡಪಲ್ಲಕ್ಕಿ ಮಹೋತ್ಸವವು ಶ್ರೀ ಶೈಲ ಪುಣ್ಯಕ್ಷೇತ್ರದಲ್ಲಿ ಜರುಗಿತು.

ಅಡ್ಡಪಲ್ಲಕ್ಕಿ ಉತ್ಸವವು ಪ್ರತಿ ವರ್ಷದ ಪದ್ಧತಿಯಂತೆ ಶಿವರಾತ್ರಿ ಪ್ರಯುಕ್ತ ಶ್ರೀ ಬಯಲು ವೀರಭದ್ರಸ್ವಾಮಿ ದೇವಸ್ಥಾನದಿಂದ ಪ್ರಾರಂಭಗೊಂಡು ರಾಜಬೀದಿಯ ಮುಖಾಂತರ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದವರೆಗೆ ನಡೆಯಿತು.

ಈ ಸಂದರ್ಭದಲ್ಲಿ ದೇವಸ್ಥಾನದ ಕಾರ್ಯ ನಿರ್ವಹಣಾಧಿಕಾರಿಗಳು, ಉಭಯ ದೇವಸ್ಥಾನದ ಪ್ರಧಾನ ಅರ್ಚಕರು ಪೂರ್ಣ ಕುಂಭದೊಂದಿಗೆ ಅಡ್ಡಪಲ್ಲಕ್ಕಿ ಸ್ವಾಗತಿಸಿದರು. ಈ ಸಮಯದಲ್ಲಿ ಇಷ್ಟಲಿಂಗ ಪೂಜೆ ನೆರವೇರಿಸಲಾಯಿತು.

ಎಂ.ಎಸ್. ಬಸವರಾಜ ಸ್ವಾಮಿ, ಮಂಜುನಾಥ ಸ್ವಾಮಿ, ಅಮರೇಗೌಡ, ಎಂ. ಬನ್ನಯ್ಯ ಸ್ವಾಮಿ, ಎಸ್. ಮಲ್ಲಪ್ಪ, ಮುತ್ತಯ್ಯ ಸ್ವಾಮಿ, ವಿಶ್ವನಾಥ ಸ್ವಾಮಿ, ಸಿದ್ದು, ಎಂ.ಎಸ್. ನಾಗರಾಜ ಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

# ಅಂಟಿಲಿಯಾ ಬೆದರಿಕೆ : ಎನ್.ಐ.ಎ. ತನಿಖೆಗೆ ರಾವತ್ ಆಕ್ಷೇಪ

ಮುಂಬೈ, ಮಾ. 14 – ಉದ್ಯಮಿ ಮುಕೇಶ್ ಅಂಬಾನಿ ನಿವಾಸ ಅಂಟಿಲಿಯಾ ಬಳಿ ಸ್ಫೋಟಕ ಇದ್ದ ವಾಹನ ಪತ್ತೆಯಾದ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ ಎನ್.ಐ.ಎ. ವಹಿಸಿಕೊಂಡಿದ್ದಕ್ಕೆ ಆಕ್ಷೇಪಿಸಿರುವ ಶಿವಸೇನೆ ನಾಯಕ ಸಂಜಯ್ ರಾವತ್, ಇದು ಮುಂಬೈ ಪೊಲೀಸರ ನೈತಿಕ ಸ್ಥೈರ್ಯ ಕುಂದಿಸಿದಂತೆ ಹಾಗೂ ಮಹಾರಾಷ್ಟ್ರದಲ್ಲಿ ಅಸ್ಥಿರತೆ ಉಂಟು ಮಾಡಿದಂತೆ ಎಂದಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಎನ್.ಐ.ಎ. ಬಂಧನಕ್ಕೆ ಒಳಗಾಗಿರುವ ಪೊಲೀಸ್ ಅಧಿಕಾರಿ ಸಚಿನ್ ವಾಝೆ ಪ್ರಾಮಾಣಿಕ, ಯಶಸ್ವೀ ಹಾಗೂ ಉತ್ತಮ ತನಿಖಾಧಿಕಾರಿ ಎಂದಿದ್ದಾರೆ.

ಈ ಪ್ರಕರಣದಲ್ಲಿ ರಾಜ್ಯ ಸರ್ಕಾರದ ಪ್ರತಿಷ್ಠೆ ಪಣಕ್ಕಿದೆ ಎಂದು ರಾಜ್ಯಸಭಾ ಸದಸ್ಯರೂ ಆಗಿರುವ ರಾವತ್ ಹೇಳಿದ್ದಾರೆ. ಫೆಬ್ರವರಿ 25ರಂದು ಅಂಬಾನಿ ನಿವಾಸದ ಬಳಿ ಜಿಲೆಟಿನ್ ಕಡ್ಡಿಗಳಿದ್ದ ಸ್ಫೋಟಕ ಪತ್ತೆಯಾಗಿತ್ತು. ಈ ವಾಹನದ ಮಾಲೀಕ ಎನ್ನಲಾದ ಮನ್‌ಸುಖ್ ಹಿರನ್ ಅವರ ಸಾವಿನ ಹಿಂದೆ ವಾಜೆ ಕೈವಾಡ ಇದೆ ಎಂದು ಶಂಕಿಸಲಾಗಿದೆ.

ಮುಂಬೈ ಪೊಲೀಸರು ಪ್ರಕರಣಗಳ ತನಿಖೆ ನಡೆಸಲು ಸಮರ್ಥರಿದ್ದಾರೆ. ಇದರಲ್ಲಿ ಕೇಂದ್ರ ಸಂಸ್ಥೆಗಳು ಭಾಗಿಯಾಗುವ ಅಗತ್ಯವಿಲ್ಲ. ಮುಂಬೈ ಪೊಲೀಸರ ಮೇಲೆ ಒತ್ತಡ ಹೇರಬಾರದು ಎಂದು ರಾವತ್ ಹೇಳಿದ್ದಾರೆ.

# ಸಾರ್ವಜನಿಕ ಸಮಾರಂಭಕ್ಕೆ ಗಾಲಿ ಕುರ್ಚಿಯಲ್ಲಿ ಮಮತಾ

ಕೊಲ್ಕೊತಾ, ಮಾ. 14 – ನಾಲ್ಕು ದಿನಗಳ ಹಿಂದೆ ನಂದಿಗ್ರಾಮದಲ್ಲಿ ಗಾಯಗೊಂಡಿದ್ದ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಕೊಲ್ಕೊತಾದಲ್ಲಿ ಮೊದಲ ಸಾರ್ವಜನಿಕ ಸಮಾರಂಭದಲ್ಲಿ ಗಾಲಿ ಕುರ್ಚಿಯಲ್ಲಿ ಪಾಲ್ಗೊಂಡಿದ್ದಾರೆ.

ರೋಡ್ ಶೋನಲ್ಲಿ ಪಾಲ್ಗೊಂಡಿದ್ದ ಮಮತಾ ಬ್ಯಾನರ್ಜಿ, ಐದು ಕಿ.ಮೀ. ದೂರ ಕ್ರಮಿಸಿದರು. 2007ರಲ್ಲಿ ಜಮೀನು ವಶ ವಿರೋಧಿ ಹೋರಾಟದಲ್ಲಿ 14 ಗ್ರಾಮಸ್ಥರು ಮೃತಪಟ್ಟಿದ್ದರ ಸ್ಮರಣೆಗಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

# ಜಾಲತಾಣದ ಉದ್ಯೋಗಿಗಳಿಗೆ ಜೈಲಿನ ಬೆದರಿಕೆ ಹಾಕಿಲ್ಲ : ಕೇಂದ್ರ

ನವದೆಹಲಿ, ಮಾ. 14 – ಟ್ವಿಟ್ಟರ್ ರೀತಿಯ ಯಾವುದೇ ಸಾಮಾಜಿಕ ಜಾಲತಾಣದ ಉದ್ಯೋಗಿಗಳಿಗೆ ಜೈಲು ಶಿಕ್ಷೆಯ ಬೆದರಿಕೆ ಹಾಕಿಲ್ಲ ಎಂದು ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯ ತಿಳಿಸಿದೆ.

ಫೇಸ್‌ಬುಕ್, ವಾಟ್ಸಾಪ್ ಹಾಗೂ ಟ್ವಿಟ್ಟರ್ ಉದ್ಯೋಗಿಗಳಿಗೆ ಜೈಲು ಶಿಕ್ಷೆಯ ಬೆದರಿಕೆ ಹಾಕಲಾಗಿತ್ತು ಎಂಬ ವರದಿಗಳನ್ನು ತಳ್ಳಿ ಹಾಕಿರುವ ಸಚಿವಾಲಯ, ಈ ವೇದಿಕೆಗಳು ಇತರೆ ಭಾರತೀಯ ಸಂಸ್ಥೆಗಳ ರೀತಿಯಲ್ಲೇ ಭಾರತದ ಕಾಯ್ದೆಗಳನ್ನು ಪಾಲಿಸಬೇಕಿದೆ ಎಂದು ತಿಳಿಸಿದೆ.

ಈ ವಿಷಯವನ್ನು ಸಂಸತ್ತಿನ ವೇದಿಕೆಯಲ್ಲೇ ತಿಳಿಸಲಾಗಿದೆ ಸಾಮಾಜಿಕ ಮಾಧ್ಯಮದ ಬಳಕೆದಾರರು ಸರ್ಕಾರವನ್ನು, ಪ್ರಧಾನ ಮಂತ್ರಿ ಹಾಗೂ ಯಾವುದೇ ಮಂತ್ರಿಯನ್ನು ಟೀಕಿಸಬಹುದು.

ಆದರೆ, ಹಿಂಸೆಗೆ ಪ್ರಚೋದನೆ, ಕೋಮು ವಿಭಜನೆ ಉಂಟು ಮಾಡುವುದು ಹಾಗೂ ಉಗ್ರವಾದಕ್ಕೆ ಪ್ರಚೋದನೆ ನೀಡುವುದನ್ನು ಒಪ್ಪಲಾಗದು ಎಂದು ಸಚಿವಾಲಯ ಹೇಳಿದೆ.

# ಬಾವಲಿಯಿಂದ ಬಂದಾಗಲೇ ಹರಡುವ ಗುಣ ಹೊಂದಿದ್ದ ಕೊರೊನಾ ವೈರಸ್

ಲಂಡನ್, ಮಾ. 14 – ಕೊರೊನಾ ವೈರಸ್ ಬಾವಲಿಗಳಿಂದ ಮನುಷ್ಯರಿಗೆ ಬರುವಾಗ ಅತಿ ಕಡಿಮೆ ಬದಲಾವಣೆಯಾಗಿದೆ. ಮನುಷ್ಯರಿಗೆ ಹರಡುವ ವೈರಸ್ ಗುಣ, ಅದು ಬಾವಲಿಯಲ್ಲಿದ್ದಾಗಲೇ ಬಂದಿತ್ತು ಎಂದು ಇತ್ತೀಚೆಗೆ ನಡೆಸಿದ ಅಧ್ಯಯನವೊಂದು ತಿಳಿಸಿದೆ.

ಪಿ.ಎಲ್.ಒ.ಎಸ್. ಬಯಾಲಜಿ ನಿಯತಕಾಲಿಕದಲ್ಲಿ ಅಧ್ಯಯನದ ವರದಿ ಪ್ರಕಟವಾಗಿದೆ. ಕೊರೊನಾ ವೈರಸ್‌ನ ಜಿನೋಮ್‌ಗಳನ್ನು 11 ತಿಂಗಳ ಕಾಲ ಅಧ್ಯಯನ ನಡೆಸಿದ ನಂತರ ಈ ವರದಿ ರೂಪಿಸಲಾಗಿದೆ.

ಕೊರೊನಾ ವೈರಸ್ ಸೋಂಕು ಹರಡುತ್ತಿರುವಂತೆಯೇ ಅದು ಬದಲಾಗುತ್ತಿದೆ. ಆದರೆ, ಅದು ಬಾವಲಿಯಿಂದ ಮನುಷ್ಯರಿಗೆ ಬಂದ ಸಮಯದಲ್ಲೇ, ಹರಡಲು ಸಾಧ್ಯವಾಗುವ ರೀತಿ ಇತ್ತು. ಸಾಮಾನ್ಯವಾಗಿ ವೈರಸ್‌ಗಳು ಬೇರೆ ತಳಿಯಿಂದ ಬಂದ ಮೇಲೆ ಹರಡುವಂತಾಗಲು ಸ್ವಲ್ಪ ಸಮಯ ಬೇಕಾಗುತ್ತದೆ.

ಸಾಕಷ್ಟು ವೈರಸ್‌ಗಳು ಈ ಹಂತವನ್ನೇ ದಾಟುವುದಿಲ್ಲ ಎಂದು ವರದಿ ರೂಪಿಸಿರುವ ಸ್ಕಾಟ್‌ಲ್ಯಾಂಡ್‌ನಲ್ಲಿರುವ ಯೂನಿವರ್ಸಿಟಿ ಆಫ್ ಗ್ಲಾಸ್ಗೌನ ಆಸ್ಕರ್ ಮೆಕ್‌ಲೀನ್ ಹೇಳಿದ್ದಾರೆ.

ಕೊರೊನಾ ವೈರಸ್ ಈಗ ವೇಗವಾಗಿ ಬದಲಾಗುತ್ತಿದೆ. ಜನವರಿ 2020ರಲ್ಲಿ ಇದ್ದ ವೈರಸ್ ಆಧರಿಸಿ ಹಾಲಿ ಇರುವ ಲಸಿಕೆಗಳನ್ನು ರೂಪಿಸಲಾಗಿದೆ. ಹೀಗಾಗಿ ಈಗಿರುವ ಲಸಿಕೆಗಳು ಇನ್ನೂ ಸ್ವಲ್ಪ ಕಾಲ ಉಪಯುಕ್ತವಾಗಲಿವೆ. ನಂತರದಲ್ಲಿ ವೈರಸ್ ಲಸಿಕೆಯಿಂದ ನಿವಾರಣೆಯಾಗುವುದಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ, ರಶ್ಮಿ ಹಾಸ್ಟೆಲ್ ಸ್ಕೂಲ್ ಸುತ್ತ-ಮುತ್ತ
30x40 North, 30x50 East, 30x38 East, 43x35 East, 30x70 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟು ಮಾರಾಟಕ್ಕೆ (ಬಂಗ್ಲೆ)**
ಕರ್ನಾಟಕ ಗೃಹ ಮಂಡಳಿಯಲ್ಲಿ
64x82 ದಕ್ಷಿಣ, ಪಶ್ಚಿಮ ಕಾರ್ನರ್. 50x80 ದಕ್ಷಿಣ. 60x80 ಪೂರ್ವ. 40x60 ಅಕ್ಕಪಕ್ಕ ದಕ್ಷಿಣ. 50x80 ಪೂರ್ವ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
(ಶಿವ-ಪಾರ್ವತಿ ಲೇಔಟ್ ನಲ್ಲಿ 50x100)

**Easy Loan through online**
Above 16000 salary personal loan through online
Without IT Return Business Loan Through Online
Housing loan and Mortgage Loan available including revenue property
63614 28175

**ಬ್ಯಾಡಗಿ ಖಾರದ ಪುಡಿ ದೊರೆಯುತ್ತದೆ**
ನಮ್ಮಲ್ಲಿ ಉತ್ತಮ ಗುಣಮಟ್ಟದ ಹಾಗೂ ಶುದ್ಧವಾದ ಬ್ಯಾಡಗಿ ಖಾರದ ಪುಡಿ ಈ ಕೆಳಗಿನ ದರದಲ್ಲಿ ದೊರೆಯುತ್ತದೆ.
110 ರೂ. 1 ಕೆ.ಜಿ., 150 ರೂ. 1 ಕೆ.ಜಿ., 200 ರೂ. 1 ಕೆ.ಜಿ., 250 ರೂ. 1 ಕೆ.ಜಿ., 300 ರೂ. 1 ಕೆ.ಜಿ., 450 ರೂ. 1 ಕೆ.ಜಿ.
ಆನಂದ ಕಾಂಪ್ಲೆಕ್ಸ್, ನಂ. 12, ಅಶೋಕ ರಸ್ತೆ, ದಾವಣಗೆರೆ.
90085 36467

**ಬೇಕಾಗಿದ್ದಾರೆ**
ನಗರದ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು SSLC/PUC ಫೇಲಾದ ಯುವಕರು, ಬ್ಯಾಡ್ಜ್ ಹಾಗೂ ಲೈಸೆನ್ಸ್ ಹೊಂದಿರುವವರು ಡ್ರೈವರ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಖುದ್ದಾಗಿ ಸಂಪರ್ಕಿಸಿ
ಪ್ರತೀಕ್ ಎಂಟರ್ ಪ್ರೈಸಸ್
ನಾಗನೂರು- ಶಾಮನೂರು ರಸ್ತೆ, ಶಾಮನೂರು, ದಾವಣಗೆರೆ.

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ, ಡಾಲರ್ಸ್ ಕಾಲೋನಿಯಲ್ಲಿ
40x60 East, 30x57 West, 40ಅಡಿ ರೋಡಿಗಿದೆ, 30x40 West, 40x60 North, 30x45 North East Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರದಲ್ಲಿ, ವಿನಾಯಕ ಬಡಾವಣೆಯಲ್ಲಿ, ವಿವೇಕಾನಂದ ಬಡಾವಣೆಯಲ್ಲಿ
40x84 North, 60x40 North, 80x60 west, 30x50 North, 30x50 South, 30x38 30x38East ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮಳಿಗೆಗಳು ಬಾಡಿಗೆಗೆ ಇವೆ**
ವಿನೋಬನಗರ, 2ನೇ ಮುಖ್ಯರಸ್ತೆ, 1ನೇ 'ಎ' ಕ್ರಾಸ್‌ನಲ್ಲಿರುವ ಮೊದಲನೇ ಮಹಡಿಯಲ್ಲಿ ಆಫೀಸ್‌ಗಳಿಗಾಗಿ ಮಳಿಗೆಗಳು ಬಾಡಿಗೆಗೆ ಇವೆ. ಬೇಕಾದಲ್ಲಿ ಸಂಪರ್ಕಿಸಿ : ಮಾಗನೂರು ಬಸಪ್ಪನವರ ಸ್ಕೂಲ್ ಪಕ್ಕದಲ್ಲಿ
99451 99770

**ಸೈಟ್/ಮನೆ ಮಾರಾಟಕ್ಕೆ ಬಾಡಿಗೆಗೆ / ಲೀಸ್‌ಗೆ**
ಜಯನಗರದಲ್ಲಿ 20x30 Duplex, ಪೂರ್ವ ಬಾಗಿಲಿನ ದೂಡಾ ಅಪ್ರೂವ್ ಮನೆ ಮತ್ತು KHBನಲ್ಲಿ 30x40 ಪಶ್ಚಿಮ ಸೈಟ್ ಮಾರಾಟಕ್ಕೆ, ಜಯನಗರದಲ್ಲಿ 1BHK, 2BHK ಮತ್ತು 3 BHK ಮನೆ ಬಾಡಿಗೆಗೆ/ಲೀಸ್‌ಗೆ ಇವೆ.
80505 33389, 90354 85198

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 82173 52453

**ಮನೆ ಮಾರಾಟಕ್ಕೆ ಇದೆ**
30×50 ಸೈಟ್‌ನಲ್ಲಿ 2 ಬೆಡ್‌ರೂಂನ ಆಧುನಿಕ ವ್ಯವಸ್ಥೆಯುಳ್ಳ, ವಾಸ್ತು ಪ್ರಕಾರ ಕಟ್ಟಿರುವ, ಪಶ್ಚಿಮ ದಿಕ್ಕಿನ ಮನೆ, ಬಾಲಾಜಿ ಬಡಾವಣೆಯಲ್ಲಿ ಮಾರಾಟಕ್ಕೆ ಇದೆ. ವಿಚಾರಿಸಿ :
98448 82366

**ತಕ್ಷಣ ಬೇಕಾಗಿದ್ದಾರೆ**
IMPULSE ಕಂಪನಿಗೆ 10th, PUC, Diploma & Degree ಆದ ಯುವಕರು AGE (18-24) Earn (8000-16000) PM. 1photo Resume, Adhar xerox ನೊಂದಿಗೆ
81056 00262

**ಮಾರಾಟಕ್ಕಿವೆ**
ಕಿರಾಣಿ ಅಂಗಡಿ ಫರ್ನೀಚರ್ & ಹೋಟೆಲ್ ಟೇಬಲ್ ಮಾರಾಟಕ್ಕಿವೆ. ಸಂಪರ್ಕಿಸಿ
99802 88802

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಕೆಲಸಗಾರರು ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಮಹಿಳೆ-01, ಮೆಕ್ಯಾನಿಕ್ (ದ್ವಿ ಚಕ್ರ ವಾಹನಗಳ ಅನುಭವ) -01, ಹೆಲ್ಪರ್ -01, ಸೇಲ್ಸ್ ರೆಪ್ರೆಸೆಂಟೇಟಿವ್ -02
ಶ್ರೀ ಸುಬ್ರಮಣ್ಯ ಮೋಟಾರ್ಸ್
ಮಲೇಬೆನ್ನೂರು
90085 40552

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ANM, GNM ಹಾಗೂ ಆಯಾ ಬೇಕಾಗಿದ್ದಾರೆ. ತಮ್ಮ ಬಯೋಡಾಟಾದೊಂದಿಗೆ ಈ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಿರಿ
98450 35710
ಡಾ. ಎಂ.ಎಸ್. ಹಿರೇಮಠ್

**ಬೇಕಾಗಿದ್ದಾರೆ**
ಸೈಟ್‌ನಲ್ಲಿ ಕೆಲಸ ಮಾಡಲು ಪಿಯುಸಿ ಪಾಸಾದ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
ಸ್ವರೂಪ್ ಗೌಡ, ಸಿವಿಲ್ ಇಂಜಿನಿಯರ್
94480 56468

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87220 14318
95352 69849

**ಡಾ|| ಮಹೇಶ್ ರಾಜಶೇಖರಯ್ಯ**
Hematologist ಇವರು
ದಿ. 17-03-2021ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಟ್ಯಾಲಿ ERP 9.6, ಎಂ.ಎಸ್. ಆಫೀಸ್, ಎಕ್ಸೆಲ್ ಅಕೌಂಟ್ಸ್ ಬಗ್ಗೆ ಜ್ಞಾನವುಳ್ಳ ಕಂಪ್ಯೂಟರ್ ಆಪರೇಟರ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
89714 89847

**ಜಮೀನು ಮಾರಾಟಕ್ಕಿದೆ**
ದುಗ್ಗತ್ತಿ ಸ.ನಂ 25/1 ಮತ್ತು 2, 6 ಎ, 12 ಸೆಂ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
99641 45931

**ಮನೆ ಮಾರಾಟಕ್ಕಿದೆ**
ದಾವಣಗೆರೆಯ ಹಳೇಪೇಟೆಯಲ್ಲಿರುವ ಉತ್ತರಾಭಿಮುಖವಾಗಿರುವ ಟೀಕ್‌ವುಡ್ ಮನೆಯು #977/1 ರೂಫ್‌ಗೆ ಟಾಟಾ ಕಂಪನಿಯ ಶೀಟ್ ಇರುತ್ತದೆ. ಗ್ರೌಂಡ್ ಫ್ಲೋರ್ 16.75x86=1440.5 sq ft. & 1st floor 16.75x54=90.45 sqft. ಸಂಪರ್ಕಿಸಿರಿ : ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ.
93434 75963, 97401 63814

**ಬೇಕಾಗಿದ್ದಾರೆ**
ಮಹಿಳಾ ಆಯಾ ಹಾಗೂ ಜವಾನರು ಬೇಕಾಗಿದ್ದಾರೆ. ತಮ್ಮ ಒಂದು ಮಗುವಿಗೆ ಎಸ್ಸೆಸ್ಸೆಲ್ಸಿವರೆಗೆ ಉಚಿತ ವಿದ್ಯಾಭ್ಯಾಸ ಸೌಲಭ್ಯವಿದ್ದು, ಬೆಳಿಗ್ಗೆ 10.30 ರಿಂದ ಸಂಜೆ 4 ರೊಳಗೆ ಭೇಟಿಯಾಗಲು ತಿಳಿಸಲಾಗಿದೆ. ಎಸ್ಸೆಸ್ಸೆಲ್ಸಿ ಅನುತ್ತೀರ್ಣರಾದ ಹುಡುಗರಿಗೆ (20 ವರ್ಷದೊಳಗಿನ) ಅವಕಾಶ ನೀಡಲಾಗುವುದು.
ನಂದಗೋಕುಲ ಆಂಗ್ಲಮಾಧ್ಯಮ ಶಾಲೆ
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆ, ಹೊಸ ಆರ್.ಟಿ.ಓ. ಕಚೇರಿ ಹಿಂಭಾಗ, ದಾವಣಗೆರೆ.
9964017729, ಕಾರ್ಯದರ್ಶಿಗಳು

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
94803 43063

**ಸೈಟ್ ಮಾರಾಟಕ್ಕಿದೆ**
ಭೂಮಿಕ ನಗರ 30x70 ದಕ್ಷಿಣ ದಿಕ್ಕು, ಫೈನಲ್ ಅಪ್ರೂವಲ್
96636 66870
98443 04848

**ಸೈಟು ಮಾರಾಟಕ್ಕಿದೆ**
ಗ್ಲಾಸ್ ಹೌಸ್ ಪಕ್ಕದಲ್ಲಿ (ಬಲ ಭಾಗ) 30x40 ದಕ್ಷಿಣ, 30x50 ಉತ್ತರ, , ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ನೌಕರರಿಗೆ ಆದ್ಯತೆ. ಯೋಗ್ಯ ಬೆಲೆಗೆ ದೊರೆಯುತ್ತದೆ.
90198 88512, 99008 37087

**DULL IN MATHS**
Introducing Word Problem Maths
From 2nd std to 6th std
BRUIT ABACUS AND VEDIC MATHS
M : 96201 53806

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**For Rent**
1st, 2nd and 3rd floor, New Building, LIFT Installed, Good exposure to main road, beside Royal Enfield showroom, Hadadi Main Road, Davangere.
9448168525
8660214677

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ ಲೇಔಟ್, ಜಯನಗರ, ಹೈಟೆಕ್ ಬಡಾವಣೆ, ಸರಸ್ವತಿ ನಗರ, ವಿನಾಯಕ ಬಡಾವಣೆಗಳಲ್ಲಿ 30x40, 30x50, 40x60, 50x75 ಹಾಗೂ ಲೇಔಟ್ ಜಮೀನು ಕಮರ್ಷಿಯಲ್ ಸೈಟ್‌ಗಳು ಮತ್ತು ದಾವಣಗೆರೆ ಸುತ್ತ-ಮುತ್ತ ಹೊಲ, ಗದ್ದೆ, ತೋಟಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ.
97315 12365

**ಬೇಕಾಗಿದ್ದಾರೆ**
ಮಲ್ಟಿಪ್ಲೆಕ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಮೈಕ್ರೋನ್ಯೂಟ್ರಿಯಂಟ್ ಕಂಪನಿಯಲ್ಲಿ 5 ವರ್ಷ ಕೆಲಸ ಮಾಡಿರುವ ಅನುಭವ ಹೊಂದಿರಬೇಕು.
ಸ್ಥಳ : ಚಳ್ಳಕೆರೆ, ಚಿತ್ರದುರ್ಗ, ಹರಿಹರ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
99455 47626, 99457 13454, 86605 93957

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC, Technical & Non Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789, 87620 58369
94837 64859, 82173 02649

**WANTED DELIVERY BOYS**
ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ.
Age limit: 21 to 25 years
Qualification : SSLC
Preferably Davangere city candidates
Contact:
Jain Enterprises
Chowkipet Chigateri Galli, Near Karnataka Bank ATM, Davangere.
98445 55551
98445 09222

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ಸಂಪರ್ಕಿಸಿರಿ:
89715 04492
81056 99985
99004 67508

**ಬಾಡಿಗೆಗೆ**
15 ರೂಂಗಳು ವಿತ್ ಅಟ್ಯಾಚ್ಡ್ ಬಾತ್‌ರೂಂ ಮತ್ತು ಊಟದ ಹಾಲ್ ಬಾಡಿಗೆಗೆ ದೊರೆಯುತ್ತದೆ. ಪಿ.ಜಿ. ನಡೆಸುವವರಿಗೆ ಮೊದಲ ಆದ್ಯತೆ. ಸರಸ್ವತಿ ಬಡಾವಣೆ, ದಾವಣಗೆರೆ.
81055 42689

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**15 ದಿನಗಳಲ್ಲಿ ಪರಿಹಾರ**
ಬಿಪಿ, ಶುಗರ್, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್, ವೈನ್ಸ್, ಮೈಗ್ರೇನ್, ತೂಕ ಇಳಿಕೆ, ನರಗಳ ಸೆಳೆತ, ಮಂಡಿ, ಬೆನ್ನು, ಸೊಂಟ, ಕುತ್ತಿಗೆ ನೋವುಗಳು ಹಲವು ಸಮಸ್ಯೆಗಳಿಗೆ ಪರಿಹಾರ.
ಸಮಯ : ಬೆ: 9.00 ರಿಂದ 5:00 ರವರೆಗೆ
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಜಯದೇವ ಸರ್ಕಲ್, ದಾವಣಗೆರೆ.
86602 35013

# ಮೊಬೈಲ್ ಪ್ರಪಂಚದಲ್ಲಿ ದಾರಿ ತಪ್ಪುತ್ತಿರುವ ಮಕ್ಕಳು...



'ಅತಿಯಾದರೆ ಅಮೃತವೂ ವಿಷ'ವೆಂಬ ಹಿರಿಯರ ನಾಣ್ಣುಡಿಯಂತೆ ಮೊಬೈಲ್ ಮಕ್ಕಳು ಹಾಗೂ ಯುವ ಜನತೆಯ ಕೈಗೆ ಸಿಕ್ಕು ಜೀವನದ ದಿಕ್ಕು ಬದಲಾಗುತ್ತಿದೆ. ಇದರ ಸದ್ಬಳಕೆಗಿಂತ ದುರ್ಬಳಕೆಯೇ ಹೆಚ್ಚಾಗಿದೆ. ಮಕ್ಕಳು ಗಂಭೀರವಾಗಿ ತಂದೆ-ತಾಯಿಯರನ್ನು ಗಮನಿಸುತ್ತಿರುತ್ತಾರೆ. 'ಮನೆಯೇ ಮೊದಲ ಪಾಠಶಾಲೆ, ತಂದೆ- ತಾಯಿಯೇ ಮೊದಲ ಗುರುಗಳು' ಎಂಬ ನಾಣ್ಣುಡಿಯಂತೆ ನಾವು ಮೊದಲ ಮಾದರಿ ಜೀವನವನ್ನು ನಡೆಸತಕ್ಕದ್ದು. ಮಕ್ಕಳಿಗಾಗಿ ಆಸ್ತಿ ಮಾಡದೆ, ಮಕ್ಕಳನ್ನೇ ಆಸ್ತಿಯೆಂದು ಬೆಳೆಸುವುದು ಸೂಕ್ತ.

ಮೊಬೈಲ್ ಬಳಕೆ ಕಳೆದ ದಶಕದ ಆವಿಷ್ಕಾರವೆನಿಸಿದರೂ ಕೂಡ ಇದಕ್ಕೆ ಒಂದು ಶತಮಾನದ ಇತಿಹಾಸವಿದೆ. ದಿನನಿತ್ಯ ನಾವು ಮೊಬೈಲ್ ಬಳಸುವುದನ್ನು ನೋಡಿದರೆ, ಅದೊಂದು ದಿನನಿತ್ಯ ಜೀವನದ ಅವಿಭಾಜ್ಯ ಅಂಗವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಒಂದಲ್ಲೊಂದು ಕಾರಣಕ್ಕಾಗಿ ಮೊಬೈಲ್ ಬಳಸುತ್ತೇವೆ.

ಕಳೆದ ಶತಮಾನದ 1908ರಲ್ಲಿ ಅಮೇರಿಕಾದಲ್ಲಿ ಮೊಬೈಲ್ ಬಳಕೆಯ ಬಗ್ಗೆ ಉಲ್ಲೇಖವಿದೆ. ನಂತರ 1921ರಲ್ಲಿ ಬರ್ಲಿನ್‌ನಿಂದ ಹ್ಯಾಂಬರ್ಗ್‌ಗೆ ಹೋಗುತ್ತಿದ್ದ ರೈಲ್ವೆ ಮೊದಲನೇ ದರ್ಜೆಯ ಪ್ರಯಾಣಿಕರಿಗೆ ಲಭ್ಯ ಮಾಡಲಾಗಿತ್ತು. 1940ರಲ್ಲಿ ಚಿಕಾಗೋದಲ್ಲಿ, ಕಾರ್ ರೇಡಿಯೋ ಟೆಲಿಫೋನ್ ಸೇವೆಯನ್ನು ಬಳಸಲಾಯಿತು. 1956ರಲ್ಲಿ ಸ್ವೀಡನ್‌ನಲ್ಲಿ ಖಾಸಗಿ ವಾಹನಗಳಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರಿಗೆ ಲಭ್ಯ ಮಾಡಲಾಯಿತು. ಮೊಬೈಲ್ ಶಬ್ಧಾರ್ಥ ಹೇಳುವಂತೆ, ಈ ವಸ್ತುವನ್ನು ಒಂದು ಜಾಗದಿಂದ ಇನ್ನೊಂದೆಡೆಗೆ ತೆಗೆದುಕೊಂಡು ಹೋಗುವುದು ಎಂದರ್ಥ. ನಂತರ ಆದ ಬೆಳವಣಿಗೆಯಿಂದ, ಮೊಬೈಲ್ ಸೇವೆ ಎಷ್ಟರಮಟ್ಟಿಗೆ ಬೆಳೆಯಿತೆಂದರೆ, ಈ ದಿನಗಳಲ್ಲಿ ಅದಿಲ್ಲದೆ ಜೀವನ ಮಾಡುವುದು ಅಸಾಧ್ಯವಾಗಿದೆ.

ಮೊಬೈಲ್‌ನಲ್ಲಾದ ಬೆಳವಣಿಗೆಯನ್ನು ಲ್ಯಾಪ್‌ಟಾಪ್, ಟ್ಯಾಬ್ಲೆಟ್, ಸ್ಮಾರ್ಟ್‌ಫೋನ್ ರೂಪಗಳಲ್ಲಿ ಹಾಗೂ ವೈರ್‌ಲೆಸ್ ಫಿಡಿಲಿಟ್, ಬ್ಲೂ ಟೂತ್ ಇತ್ಯಾದಿ ವಿನ್ಯಾಸಗಳಲ್ಲಿ ನೋಡುತ್ತಿದ್ದೇವೆ.

**ಮೊಬೈಲ್ ಬಳಕೆಯಿಂದಾಗುವ ಅನುಕೂಲಗಳು :**

* ಅನುಭವಿ ಕೆಲಸಗಾರರಿಂದ ದಕ್ಷತೆಯಿಂದ ದುಪ್ಪಟ್ಟು ಕೆಲಸ ಮಾಡಿಸಬಹುದು.
* ಮಾಹಿತಿ ತಂತ್ರಜ್ಞಾನದಿಂದ ನಾಗರಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ನೀಡಬಹುದು.
* ಹಣಕಾಸು ವ್ಯವಹಾರಗಳನ್ನು ನಗದು ಹಣದ ಅವಶ್ಯಕತೆಯಿಲ್ಲದೆ ನಡೆಸಬಹುದು.
* ಮನೆಯಲ್ಲಿಯೇ ಕುಳಿತು, ಪ್ರಪಂಚದ ವಿವಿಧ ಭಾಗಗಳಲ್ಲಿನ ಕೆಲಸವನ್ನು ನಿರ್ವಹಿಸಬಹುದು.
* ಪ್ರಪಂಚದ ಮೂಲೆ ಮೂಲೆಗೂ ಸಂಪರ್ಕಿಸಿ ಕಛೇರಿಗೆ, ಸಂಸ್ಥೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳಬಹುದು ಹಾಗೂ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು.
* ಕೊರೊನಾ ಕಾರಣದಿಂದ ಕಳೆದ ಒಂದು ವರ್ಷದಿಂದ ಮೊಬೈಲ್ ಬಳಸಿ ಮನೆಯಿಂದಲೇ ನಮ್ಮ ಎಲ್ಲಾ ಕೆಲಸಗಳನ್ನು ಮಾಡಲಾಯಿತು.

**ಮೊಬೈಲ್ ಬಳಕೆಯಿಂದಾಗುವ ಅನಾನುಕೂಲಗಳು :**

* ಮೊಬೈಲ್ ಬಳಕೆಯಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸುವುದರ ಜೊತೆಗೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ.
* ಕೆಲಸ ಮಾಡತಕ್ಕ ಕಛೇರಿ ವಾತಾವರಣದಲ್ಲಿ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಬಳಕೆಯಿಂದ ಸಿಬ್ಬಂದಿಗಳ ಮನಸ್ಸಿನ ಮೇಲೆ ಒತ್ತಡವನ್ನು ಹೇರಿ, ಬೆನ್ನು ನೋವು, ತಲೆನೋವು ಹಾಗೂ ಮಾನಸಿಕ ಒತ್ತಡಗಳಿಗೆ ಒಳಗಾಗುತ್ತಿದ್ದಾರೆ.

ಒಟ್ಟಾರೆ ಮೊಬೈಲ್ ಬಳಕೆ ಜನಸಾಮಾನ್ಯರ ಕೈ ಸಿಲುಕಿದೆ, ವಿಪರ್ಯಾಸವೆಂದರೆ ಅದರ ಬಳಕೆ ಮಿತಿಮೀರಿ ಚಿಕ್ಕ ಮಕ್ಕಳ ಕೈಗೆ ಎಟುಕಿ ಮಕ್ಕಳು ದಾರಿ ತಪ್ಪುತ್ತಿರುವ ಪ್ರಸಂಗಗಳು ಹಾಗೂ ಪ್ರಕರಣಗಳು ಹೆಚ್ಚಾಗುತ್ತಿವೆ. ಮೊಬೈಲ್ ಮಕ್ಕಳ ಪಾಲಿಗೆ ಆಟದ ವಸ್ತುವಾಗಿದೆ.

**ಮೊಬೈಲ್ ಬಳಕೆಯಿಂದ ಮಕ್ಕಳ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳು:**

* ಮಕ್ಕಳ ದೈಹಿಕ, ಬೌದ್ಧಿಕ ಮತ್ತು ಮಾನಸಿಕ ಸ್ವಾಸ್ಥ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ.
* ಮಕ್ಕಳ ಕಣ್ಣಿನ ತೀಕ್ಷ್ಣತೆ ಕಡಿಮೆಯಾಗುತ್ತಿದ್ದು, ಮುಂದೊಂದು ದಿನ ಅಂಧತ್ವ ಉಂಟಾಗಬಹುದು.
* ಮಕ್ಕಳ ದೈಹಿಕ ಆಟೋಟಗಳು ಕಡಿಮೆಯಾಗಿ, ಮಕ್ಕಳು ಆಲಸಿಗಳಾಗುತ್ತಿದ್ದಾರಲ್ಲದೆ, ಚಿಕ್ಕ ವಯಸ್ಸಿನಲ್ಲಿಯೇ ಸ್ಥೂಲಕಾಯ ಹೊಂದುತ್ತಿದ್ದಾರೆ.
* ಓದುವ ಹವ್ಯಾಸ, ಸಂಭಾಷಣಾ ಚತುರತೆ ಕ್ಷೀಣಿಸುತ್ತಿದೆ.
* ಫಬ್‌ಜಿ, ಬ್ಲೂವೆಲ್‌ನಂತಹ ಮೊಬೈಲ್ ಗೇಮ್‌ಗಳು ಎಷ್ಟೋ ಪುಟಾಣಿ ಮಕ್ಕಳ ಮಾನಸಿಕ ಆರೋಗ್ಯ ಕೆಡಿಸಿವೆ.
* ಪುಟಾಣಿ ಮಕ್ಕಳ ಮನಸ್ಸು ಕುತೂಹಲದ ಆಗರವಿದ್ದಂತೆ, ಮೊಬೈಲ್ ಬಳಕೆಯಿಂದ ಮುಗ್ಧ ಮನಸ್ಸು ವಿಕಾರತೆಯೆಡೆಗೆ ಹೊರಳುತ್ತಿದೆ.
* ಯುವ ಜನತೆಯ ಅತಿಯಾದ ಐಷಾರಾಮಿ ಜೀವನದ ಕನಸಿನಿಂದ "ಸೈಬರ್ ಕ್ರೈಂ" ಎನ್ನುವಂತಹ ಹೊಸ ಅಪರಾಧ ವಿಭಾಗಗಳನ್ನೇ ತೆರೆಯಬೇಕಾಯಿತು.

**ಮಕ್ಕಳನ್ನು ಮೊಬೈಲ್‌ನಿಂದ ದೂರವಿಡಲು ಪೋಷಕರು ಪಾಲಿಸಬೇಕಾದ ನಿಯಮಗಳು:**

* ಮನೆಯಲ್ಲಿ ಆದಷ್ಟು ಮೊಬೈಲ್ ಬಳಕೆಯನ್ನು ಕಡಿಮೆ ಮಾಡಬೇಕು. ಅವಶ್ಯಕತೆ ಇದ್ದಾಗ ಮಾತ್ರ ಮತ್ತು ಕರೆಗಳಿದ್ದಾಗ ಮಾತ್ರ ಮೊಬೈಲ್ ಬಳಸಬೇಕು.
* ತಿಂಡಿ, ಊಟದ ಸಮಯದಲ್ಲಿ ಮೊಬೈಲ್‌ಗಳನ್ನು ದೂರವಿಡಬೇಕು. ಆತ್ಮೀಯತೆಯಿಂದ ಮಾತನಾಡುತ್ತಾ ಆಹಾರವನ್ನು ಸೇವಿಸಬೇಕು.
* ದಿನದಲ್ಲಿ ಕನಿಷ್ಟ ಒಂದು ಗಂಟೆ ಕಾಲ ಮನೆಗೆ ಹತ್ತಿರದ ಮೈದಾನಗಳಲ್ಲಿ ಅಥವಾ ಉದ್ಯಾನವನಗಳಲ್ಲಿ ಆಟವಾಡಿಸಬೇಕು.
* ಮನೆ ಆಹಾರ, ಹಣ್ಣುಗಳನ್ನು ತಿನ್ನುವುದು ಹಾಗೂ ಹಂಚಿ ತಿನ್ನುವ ಸಂಸ್ಕೃತಿಯನ್ನು ಬೆಳೆಸಬೇಕು. ಹೋಟೆಲ್ ಹಾಗೂ ಹೊರಗಡೆ ಆಹಾರ ತಿನ್ನುವುದನ್ನು ಕಡಿಮೆ ಮಾಡಬೇಕು.
* ವಾರಾಂತ್ಯ ಹಾಗೂ ರಜಾ ದಿನಗಳಲ್ಲಿ ಮಕ್ಕಳನ್ನು ಹತ್ತಿರದ ದೇವಸ್ಥಾನಗಳಿಗೆ, ತೀರ್ಥಕ್ಷೇತ್ರಗಳಿಗೆ ಹಾಗೂ ನಿಸರ್ಗಧಾಮಗಳಿಗೆ ಕರೆದುಕೊಂಡು ಹೋಗಬೇಕು.

ದಿನಚರಿ ಆರಂಭವಾಗುತ್ತಿದ್ದಂತೆ ಮನೆಯಲ್ಲಿ ಪೋಷಕರು ಕೈಯ್ಯಲ್ಲಿ ಮೊಬೈಲ್ ಹಿಡಿದು ಕೆಲಸ ಆರಂಭಿಸುತ್ತಾರೆ. ಪರಸ್ಪರ ಸಂಭಾಷಣೆಗಳು ವಿರಳವಾಗಿವೆ. ಮಕ್ಕಳಿಗೆ ತಿಂಡಿ ತಿನಿಸುವಾಗ, ಊಟ ಮಾಡಿಸುವಾಗ, ಮಲಗಿಸುವಾಗ ಮೊಬೈಲ್ ತೋರಿಸುತ್ತಲೇ ದಿನ ಕಳೆಯುತ್ತಾರೆ. ಮನೆಯಲ್ಲಿ ಎಲ್ಲರ ಬಳಿ ಅವರವರದ್ದೇ ಆದ ಮೊಬೈಲ್ ಇರುವುದರಿಂದ ಹಾಗೂ ಕೊರೊನಾ ಸಮಯದಲ್ಲಿ ಚಿಕ್ಕ ಮಕ್ಕಳಿಗೂ ಕೂಡ ಆನ್‌ಲೈನ್ ಕ್ಲಾಸ್ ಆರಂಭ ಮಾಡಿ, ಅದರ ಬಳಕೆ ವಿಪರೀತವಾಗಿದೆ. ಯಾವುದೇ ಮನೆಯನ್ನು ಉದಾಹರಣೆಯಾಗಿ ತೆಗೆದುಕೊಂಡರೂ ಮಕ್ಕಳನ್ನು ಯಾರೇ ಮಾತನಾಡಿಸಿದರೂ, ಅದಕ್ಕೆ ಸ್ಪಂದಿಸಿದೇ ಕೇವಲ ಮೊಬೈಲ್ ನೋಡುತ್ತಾ ಕುಳಿತಿರುತ್ತಾರೆ. ರಾತ್ರಿ ಮಲಗುವಾಗಲೂ ಕೂಡ, ತಡರಾತ್ರಿಯವರೆಗೂ ಎದ್ದಿದ್ದು, ಕಾಲಹರಣ ಮಾಡಿ ತಮ್ಮ ಆರೋಗ್ಯ ಕೆಡಿಸಿಕೊಂಡು ಮೊಬೈಲ್ ನೋಡುತ್ತಿರುತ್ತಾರೆ. ಇದರ ಅಡ್ಡ ಪರಿಣಾಮಗಳು ಈಗಲ್ಲ ಮುಂದಿನ ದಿನಗಳಲ್ಲಿ ಅವರ ಆರೋಗ್ಯದ ಮೇಲೆ ಹಾಗೂ ಅವರ ಮಕ್ಕಳ ಕಲಿಕೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.

'ಅತಿಯಾದರೆ ಅಮೃತವೂ ವಿಷ'ವೆಂಬ ಹಿರಿಯರ ನಾಣ್ಣುಡಿಯಂತೆ ಮೊಬೈಲ್ ಮಕ್ಕಳು ಹಾಗೂ ಯುವ ಜನತೆಯ ಕೈಗೆ ಸಿಕ್ಕು ಜೀವನದ ದಿಕ್ಕು ಬದಲಾಗುತ್ತಿದೆ. ಇದರ ಸದ್ಬಳಕೆಗಿಂತ ದುರ್ಬಳಕೆಯೇ ಹೆಚ್ಚಾಗಿದೆ. ಮಕ್ಕಳು ಗಂಭೀರವಾಗಿ ತಂದೆ-ತಾಯಿಯರನ್ನು ಗಮನಿಸುತ್ತಿರುತ್ತಾರೆ. "ಮನೆಯೇ ಮೊದಲ ಪಾಠಶಾಲೆ, ತಂದೆ-ತಾಯಿಯೇ ಮೊದಲ ಗುರುಗಳು" ಎಂಬ ನಾಣ್ಣುಡಿಯಂತೆ ನಾವು ಮೊದಲು ಮಾದರಿ ಜೀವನವನ್ನು ನಡೆಸತಕ್ಕದ್ದು. ಮಕ್ಕಳಿಗಾಗಿ ಆಸ್ತಿ ಮಾಡದೆ, ಮಕ್ಕಳನ್ನೇ ಆಸ್ತಿಯೆಂದು ಬೆಳೆಸುವುದು ಸೂಕ್ತ. ನಿಮ್ಮ ಮಕ್ಕಳ ಭವಿಷ್ಯ ನಿಮ್ಮ ಕೈಯ್ಯಲ್ಲಿಯೇ ಇದೆ ಎಂಬುದನ್ನು ಪೋಷಕರು ಮರೆಯಬಾರದು. ಚಾಣಕ್ಯ ಹೇಳುವಂತೆ "ಉತ್ತಮ ಪ್ರಜೆಗಳನ್ನು ಸಮಾಜಕ್ಕೆ ಪೋಷಕರು ನೀಡದಿದ್ದರೆ ರಾಕ್ಷಸತ್ವವನ್ನು ಬೆಳೆಸಿದಂತೆ" ಎಂದು, ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ದೇಶ ಸಮೃದ್ಧವಾಗಿ ಏಳಿಗೆಯಾಗಬೇಕಾದರೆ ಪ್ರತಿಯೊಬ್ಬ ಪೋಷಕರ ಜವಾಬ್ದಾರಿ ಇದೆಯೆಂಬುದನ್ನು ಮರೆಯಬಾರದು.

**- ಡಾ.ಜಿ.ಗುರುಪ್ರಸಾದ್**
ಮಕ್ಕಳ ತಜ್ಞರು ಹಾಗೂ ನವಜಾತ ಶಿಶು ತಜ್ಞರು
ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಹಾಗೂ
ಸಂಶೋಧನಾ ಕೇಂದ್ರ, ದಾವಣಗೆರೆ.

## ಹೊನ್ನಾಳಿ ವಾಲ್ಮೀಕಿ ಸಮಾಜದ ಅಧ್ಯಕ್ಷರಾಗಿ ಕುಳಗಟ್ಟೆ ರಂಗಪ್ಪ ಆಯ್ಕೆ



ಹೊನ್ನಾಳಿ, ಮಾ.14- ವಾಲ್ಮೀಕಿ ನಾಯಕ ಸಮಾಜದ ಹೊನ್ನಾಳಿ ತಾಲ್ಲೂಕು ಅಧ್ಯಕ್ಷರಾಗಿ ತಾಲ್ಲೂಕು ಪಂಚಾಯಿತಿ ಸದಸ್ಯರಾದ ಕುಳಗಟ್ಟೆ ಕೆ.ಎಲ್. ರಂಗನಾಥ್ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ವಾಲ್ಮೀಕಿ ಸಮುದಾಯ ಭವನ ನಿರ್ವಹಣಾ ಸಮಿತಿ ಅಧ್ಯಕ್ಷರಾಗಿ ಬೇಲಿಮಲ್ಲೂರು ಶಿವಾನಂದಪ್ಪ ಇವರನ್ನು ಆಯ್ಕೆ ಮಾಡಲಾಯಿತು.

ಪಟ್ಟಣದ ಸುಂಕದಕಟ್ಟೆ ರಸ್ತೆಯ ವಾಲ್ಮೀಕಿ ಸಮುದಾಯ ಭವನದಲ್ಲಿ ಕೋಣನತಲೆ ನಾಗಪ್ಪ ಇವರ ಅಧ್ಯಕ್ಷತೆಯಲ್ಲಿ ಸಮಾಜದ ನೂತನ ಪದಾಧಿಕಾರಿಗಳ ಆಯ್ಕೆ ಸಭೆ ಕರೆಯಲಾಗಿತ್ತು. ಸಮಾಜದ ಹಿರಿಯರಾದ ನಿಕಟ ಪೂರ್ವ ಅಧ್ಯಕ್ಷ ತಿಮ್ಮೇನಹಳ್ಳಿ ಚಂದಪ್ಪ, ಮಾರಿಕೊಪ್ಪ ತಿಮ್ಮಪ್ಪ, ಹೊನ್ನಾಳಿ ಹನುಮಂತ, ಚಂದ್ರಪ್ಪ, ಕುಳಗಟ್ಟೆ ಜಗ್ಗಣ್ಣ, ಗಂಡುಗಲಿ ಮಂಜಪ್ಪ ಇವರ ಸಮ್ಮುಖದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು.

ಸಮಾಜದ ಗೌರವ ಅಧ್ಯಕ್ಷರಾಗಿ ತಿಮ್ಮೇನಹಳ್ಳಿ ಚಂದಪ್ಪ, ಉಪಾಧ್ಯಕ್ಷರಾಗಿ ಕ್ಯಾಸಿನಕೆರೆ ಶೇಖರಪ್ಪ, ಸೊರಟೂರು ಬಸವರಾಜ್, ಕುಳಗಟ್ಟೆ ಹನುಮಂತ, ನೇರಲಗುಂಡಿ ಕುಬೇರಪ್ಪ ಆಯ್ಕೆಯಾದರು.

ಪ್ರಧಾನ ಕಾರ್ಯದರ್ಶಿಯಾಗಿ ಹಿರೇಬಾಸೂರು ಹನುಮಂತಪ್ಪ ಖಜಾಂಚಿ ಕೋಣನತಲೆ ರವಿಕುಮಾರ, ಸಂಘಟನಾ ಕಾ.ನೆಲಹೊನ್ನೆ ಪ್ರಕಾಶ್, ಹೊನ್ನಾಳಿ ಶಿವಕುಮಾರ್ ಸಹ.ಕಾ. ಹೊನ್ನಾಳಿ ರಾಜೇಂದ್ರ, ಕಮ್ಮಾರಗಟ್ಟೆ ಗಂಗಾಧರ್, ನಿರ್ದೇಶಕರುಗಳಾಗಿ ಹುಣಸಗಟ್ಟ ರಾಜಪ್ಪ, ತ್ಯಾಗದಕಟ್ಟೆ ಮಂಜಪ್ಪ, ಹರಗನಹಳ್ಳಿ ಹನುಮಂತ, ಬೇಲಿಮಲ್ಲೂರು ಅಣ್ಣಪ್ಪ, ಬಲಮುರಿ ಹಳದಪ್ಪ, ಹೊಳೆಹರಳಹಳ್ಳಿ ನಾಗರಾಜ್, ದಿಡಗೂರು ಧರ್ಮಪ್ಪ, ಗೋಣಿಗೆರೆ ರಾಮಗೌಡ ಇವರನ್ನು ಆಯ್ಕೆ ಮಾಡಲಾಯಿತು. ಸಮುದಾಯ ಭವನ ನಿರ್ವಹಣಾ ಸಮಿತಿ ಗೌರವ ಅಧ್ಯಕ್ಷರಾಗಿ ಎನ್.ನಾಗಪ್ಪ, ಕಾರ್ಯದರ್ಶಿ ಹನುಮಂತ್, ಖಜಾಂಚಿ ಚಂದ್ರಪ್ಪ, ಸದಸ್ಯರಾಗಿ ಕತ್ತಿಗೆ ಬಸವರಾಜ್, ಮಾರಿಕೊಪ್ಪ ತಿಮ್ಮಪ್ಪ, ಹೊನ್ನಾಳಿ ನಾರಾಯಣ, ಹಿರೇಗೋಣಿಗೆರೆ ಚಂದ್ರಗೌಡ, ಸಲಹೆಗಾರ ತಿಮ್ಮೇನಹಳ್ಳಿ ಚಂದಪ್ಪ ಇವರನ್ನು ನೇಮಕ ಮಾಡಲಾಯಿತು.

## ಕೊಂಡಜ್ಜಿಯಲ್ಲಿ ಪಶು ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಶಾಸಕ ರಾಮಪ್ಪ ಚಾಲನೆ



ಕೊಂಡಜ್ಜಿ, ಮಾ.14 - ಕೊಂಡಜ್ಜಿ ಗ್ರಾಮದಲ್ಲಿ ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಸುಮಾರು 37 ಲಕ್ಷ ರೂ ಅನುದಾನದಲ್ಲಿ ನೂತನ ಪಶು ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಶಾಸಕ ಎಸ್.ರಾಮಪ್ಪ ಭಾನುವಾರ ಗುದ್ದಲಿ ಪೂಜೆ ನೆರವೇರಿಸಿ, ಕಾಮಗಾರಿಗೆ ಚಾಲನೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಮೋಹನ್ ಕುಮಾರ್ ಕೊಂಡಜ್ಜಿ ಅವರ ಮನವಿ ಮೇರೆಗೆ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಆಯುಕ್ತ ಬಸವರಾಜೇಂದ್ರ ಅವರು ಈ ಅನುದಾನ ಬಿಡುಗಡೆ ಮಾಡಿದ್ದಾರೆ ಎಂದು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಈ ವೇಳೆ ತಿಳಿಸಿದರು.

ತಾ.ಪಂ ಮಾಜಿ ಸದಸ್ಯ ಬೆಳ್ಳೂಡಿ ಬಸವರಾಜ್, ಗ್ರಾ.ಪಂ ಅಧ್ಯಕ್ಷ ಗಂಗಾಧರ್, ಉಪಾಧ್ಯಕ್ಷೆ ಕರಿಬಸಮ್ಮ, ಸದಸ್ಯರಾದ ಶಿವಕುಮಾರ್, ರತ್ನಮ್ಮ ನಿಂಗಪ್ಪ, ದಂಡೆಪ್ಪ, ಮರಿಯಮ್ಮ, ಚೆಲ್ಲೇಶ್ ಹಾಗೂ ಗ್ರಾಮಸ್ಥರು ಹಾಜರಿದ್ದರು.




## 21 ರಿಂದ ಬೋಳಚಟ್ಟೆ ಚೌಡೇಶ್ವರಿ ದೇವಿ ಜಾತ್ರೆ

ದಾವಣಗೆರೆ, ಮಾ.14- ಚೌಡೇಶ್ವರಿ ನಗರದ ಬೋಳಚಟ್ಟೆ ಶ್ರೀ ಚೌಡೇಶ್ವರಿ ದೇವಿ, ಶ್ರೀ ಭೂತನಾಥೇಶ್ವರ ಸ್ವಾಮಿ ಕಾಲಭೈರವ ದೇವಸ್ಥಾನದಿಂದ ಶ್ರೀದೇವಿಯ ಎಡೆ ಜಾತ್ರಾ ಮಹೋತ್ಸವ ಇದೇ ದಿನಾಂಕ 21 ರಿಂದ 26 ರವರೆಗೆ ನಡೆಯಲಿದೆ.

ದಿನಾಂಕ 21 ರ ಭಾನುವಾರ ಶ್ರೀ ಚೌಡೇಶ್ವರಿ ದೇವಿಯ ಅಭಿಷೇಕ, ಪೂಜೆ ಮತ್ತು ರಾತ್ರಿ ಸಾರು ಹಾಕಲಾಗುವುದು. ದಿನಾಂಕ 22 ರ ಸೋಮವಾರ ಬೆಳಿಗ್ಗೆ ಶ್ರೀದೇವಿಗೆ ಮುತ್ತೈದೆಯರಿಂದ ಒಪ್ಪತ್ತು ಇರಲಾಗುವುದು. ಮಾ.23ರ ಮಂಗಳವಾರ ಪಂಚಾಮೃತಾಭಿಷೇಕ, ಶ್ರೀದೇವಿಯ ಉಡಿ ತುಂಬುವುದು, ಎಡೆ ಜಾತ್ರೆ, ಸಂಜೆ ಸರ್ವಾಲಂಕೃತ ಮಂಟಪದಲ್ಲಿ ವಿವಿಧ ವಾದ್ಯಗಳೊಂದಿಗೆ ನಗರದ ರಾಜ ಬೀದಿಗಳಲ್ಲಿ ಮೆರವಣಿಗೆ ಹೊರಡಲಿದೆ.

## ವಿದ್ಯಾರ್ಥಿಗಳಿಗೆ ಪರೀಕ್ಷಾ ಭಯ ಬೇಡ : ಉತ್ತರ ವಲಯ ಬಿಇಓ ಕೊಟ್ರೇಶ್



ದಾವಣಗೆರೆ, ಮಾ. 14- ಮಕ್ಕಳು ಬೌದ್ಧಿಕ ಶಕ್ತಿ, ಸಮಾಲೋಚನೆ, ಧೈರ್ಯ, ಸಮಯ ಪ್ರಜ್ಞೆ ಹೇಗೆ ರೂಪಿಸಿಕೊಳ್ಳಬಹುದೆಂಬ ವಿಷಯವಾಗಿ ಪರೀಕ್ಷೆಗೆ ಸಂಬಂಧಿಸಿದ ಸಿದ್ಧತೆಯ ಬಗ್ಗೆ ದಾವಣಗೆರೆ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಕೊಟ್ರೇಶ್ ಮಾಹಿತಿ ನೀಡಿದರು.

ಅವರು ಎಲೆಬೇತೂರು ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಪ್ರೌಢಶಾಲೆ ಮತ್ತು ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಎಸ್ಸೆಸ್ಸೆಲ್ಸಿ ತರಗತಿ ಎಲ್ಲಾ ವಿಷಯದ ಪಾಠಗಳ ಮೆಲುಕು ಹಾಕಿಸುತ್ತಾ, ವಿಷಯದ ಬೋಧನೆ ಮಾಡಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಗಳನ್ನು ತಿಳಿಸುವುದರೊಂದಿಗೆ ವಿದ್ಯಾರ್ಥಿಗಳಲ್ಲಿ ಭಯ ಮತ್ತು ಆತಂಕವು ಬೇಡವೆಂದು ತಿಳಿಸಿದರು. ಸುಮಾರು 2 ಗಂಟೆಗಳ ಕಾಲ ಸುದೀರ್ಘವಾಗಿ ಮಕ್ಕಳೊಂದಿಗೆ ವಿಷಯವನ್ನು ಚರ್ಚಿಸುತ್ತಾ ಸಮಾಲೋಚನೆ ನಡೆಸಿದರು .

ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಸ್.ಕೆ. ಹಲಗಣ್ಣನವರ, ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಬಿ.ಎಂ. ಶಶಿಕಲಾ ಹಾಗೂ ಶಾಲಾ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

## ಮಲೇಬೆನ್ನೂರು : ಇಂದು ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಇಲ್ಲಿನ ಪುರಸಭೆಯ ಅಧ್ಯಕ್ಷ ಸ್ಥಾನಕ್ಕೆ ಇಂದು ಚುನಾವಣೆ ನಡೆಯಲಿದ್ದು, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಜೆಡಿಎಸ್‌ನ ನಾಹೀದ ಅಂಜುಂ ಅವರ ರಾಜೀನಾಮೆಯಿಂದ ಅಧ್ಯಕ್ಷ ಸ್ಥಾನ ತೆರವಾಗಿದ್ದು, ಬಿಜೆಪಿ - ಜೆಡಿಎಸ್ ಒಪ್ಪಂದದ ಪ್ರಕಾರ ಬಿಜೆಪಿಯ ಶ್ರೀಮತಿ ಪಾನಿಪೂರಿ ರಂಗನಾಥ್ ಅವರು ಇಂದು ಅಧ್ಯಕ್ಷರಾಗಿ ಆಯ್ಕೆಯಾಗುವ ಸಾಧ್ಯತೆ ಹೆಚ್ಚಿದೆ.

**ಕಲಾಕುಂಚ : ಸಿದ್ಧವೀರಪ್ಪ ಬಡಾವಣೆ ಶಾಖೆ**

## ನೂತನ ಅಧ್ಯಕ್ಷರಾಗಿ ಲಲಿತಾ ಕಲ್ಲೇಶ್ ಅವಿರೋಧ ಆಯ್ಕೆ

ದಾವಣಗೆರೆ, ಮಾ. 14- ನಗರದಲ್ಲಿ ಕಳೆದ ಮೂರು ದಶಕಗಳಿಂದ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಕನ್ನಡ ನಾಡು-ನುಡಿಗಳನ್ನು ವೈಭವೀಕರಿಸುವ ನಿಟ್ಟಿನಲ್ಲಿ ರಾಜ್ಯ, ರಾಷ್ಟ್ರಮಟ್ಟದ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾ, ನಿರಂತರ ಕ್ರಿಯಾಶೀಲವಾದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ನಗರದ ವಿವಿಧ ಬಡಾವಣೆಗಳಲ್ಲಿ ಶಾಖೆಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಈಗಾಗಲೇ ಡಿ.ಸಿ.ಎಂ. ಟೌನ್‌ಶಿಪ್ ಶಾಖೆ, ಎಸ್.ಎಸ್.ಬಡಾವಣೆ ಶಾಖೆ ಉದ್ಘಾಟನೆಯಾಗಿದ್ದು, ನೂತನವಾಗಿ ಸಿದ್ದವೀರಪ್ಪ ಬಡಾವಣೆಯ ಮೂರನೇ ಶಾಖೆಯನ್ನು ಉದ್ಘಾಟಿಸಲು ಸೇರಿದ ಸಭೆಯಲ್ಲಿ ಈ ಶಾಖೆಯ ಅಧ್ಯಕ್ಷರಾಗಿ ಶ್ರೀಮತಿ ಲಲಿತಾ ಕಲ್ಲೇಶ್ ಅವರನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ಮೊದಲಿಗೆ ಲಲಿತಾ ಕಲ್ಲೇಶ್ ಸ್ವಾಗತಿಸಿದರು. ಕಾವ್ಯ ಕುಂಚದ ಸಕ್ರಿಯ ಸದಸ್ಯರಾದ ಪಿ. ವಿಶ್ವನಾಥ್, ಮಹದೇವ ಅಸಗೋಡು ತಮ್ಮ ತಮ್ಮ ಅನಿಸಿಕೆ ಹಂಚಿಕೊಂಡು ಕಾವ್ಯ ವಾಚನದೊಂದಿಗೆ ಎಲ್ಲರನ್ನೂ ರಂಜಿಸಿದರು.

ಕಲಾಕುಂಚ ಪ್ರಧಾನ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಿ.ಬಿ.ಲೋಕೇಶ್, ಯೋಗ ಸಾಧಕಿ, ಗಾಯಕಿ ರೇಣುಕಾ ರಾಮಣ್ಣ ಸಂಸ್ಥೆಯ ಮೂರು ದಶಕಗಳ ಸಾಧನೆ ವಿವರಿಸಿದರು. ನೂತನ ಸದಸ್ಯೆ ಸುಮಾ ಏಕಾಂತಪ್ಪ ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಹೊಸ ಸದಸ್ಯರ ಸೇರ್ಪಡೆ ಸೇರಿದಂತೆ ಇನ್ನುಳಿದ ವಿಚಾರ ಚರ್ಚೆ ನಂತರ ಪೂರ್ವಸಿದ್ಧತೆಯೊಂದಿಗೆ ನೂತನ ಶಾಖೆಯ ಉದ್ಘಾಟನಾ ದಿನಾಂಕವನ್ನು ನಿಗದಿ ಮಾಡಲು ತೀರ್ಮಾನ ಕೈಗೊಳ್ಳಲಾಯಿತು. ಕೊನೆಯಲ್ಲಿ ಕಲಾಕುಂಚ ಮಹಿಳಾ ವಿಭಾಗದ ಸಂಘಟನಾ ಕಾರ್ಯದರ್ಶಿ ಶ್ರೀಮತಿ ಕುಸುಮಾ ಲೋಕೇಶ್ ವಂದಿಸಿದರು.

## ಕೊನೆಯುಸಿರು ಇರುವವರೆಗೆ ನಾನು ರಾಣೇಬೆನ್ನೂರಿನಲ್ಲೇ ಇರುತ್ತೇನೆ : ಸಚಿವ ಶಂಕರ್



ರಾಣೇಬೆನ್ನೂರು, ಮಾ.14- ಆರ್.ಶಂಕರ್ ಇನ್ನೂ ರಾಣೇಬೆನ್ನೂರಿನಲ್ಲಿ ಇರುವುದಿಲ್ಲ. ಅವರು ಹರಿಹರ ಅಥವಾ ದಾವಣಗೆರೆಯಲ್ಲಿ ನೆಲೆಸುವ ಮೂಲಕ ತಮ್ಮ ರಾಜಕೀಯ ಆರಂಭಿಸಲಿದ್ದಾರೆ. ಅದೂ ಸಹ ನಗರದಲ್ಲಿನ ತಮ್ಮ ಮನೆಯನ್ನು ಮಾರಾಟ ಮಾಡಿದ್ದಾರೆ ಎಂದು ಕೆಲವರು ನನ್ನ ಮೇಲೆ ಇಲ್ಲ ಸಲ್ಲದ ಆರೋಪ ಮಾಡಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು ಎಂದು ತೋಟಗಾರಿಕೆ ಹಾಗೂ ರೇಷ್ಮೆ ಖಾತೆ ಸಚಿವ ಆರ್.ಶಂಕರ್ ಹೇಳಿದರು.

ನಗರದ ಶ್ರೀ ಗಂಗಾ ವಿವಿಧೋದ್ದೇಶ ಸಹಕಾರ ಸಂಘದ ಸಭಾಭವನದಲ್ಲಿ ರಾಣೇಬೆನ್ನೂರಿನ ವಿವಿಧ ಸಂಘ-ಸಂಸ್ಥೆಗಳಿಂದ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನನಗೆ ಆನೆಯ ಮೂರ್ತಿಯ ಉಡುಗೊರೆ ನೀಡಿ ನನ್ನ ವಿರುದ್ಧ ಮಾಡಿರುವ ಪಿತೂರಿ ಮಾತುಗಳಿಗೆ ನಗರದ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ತಕ್ಕ ಉತ್ತರ ನೀಡಿದ್ದೀರಿ ಎಂದರು.

ಆನೆ ದಾರಿಯಲ್ಲಿ ಸಾಗುವಾಗ ಶ್ವಾನಗಳು ಬೊಗಳುತ್ತಿರುತ್ತವೆ. ಆಗ ಬೊಗಳುತ್ತಿರುವ ನಾಯಿಗಳನ್ನು ಆನೆ ಎಂದೂ ಹಿಂದಿರುಗಿ ನೋಡದೇ ತನ್ನ ಗಂಭೀರವಾದ ಹೆಜ್ಜೆಗಳನ್ನು ಹಾಕುತ್ತಿರುತ್ತದೆ. ಹಾಗೇಯೇ ಈ ನಿಮ್ಮ ಶಂಕರನ ಹೆಜ್ಜೆಯಾಗಿದೆ. ತಾಲ್ಲೂಕಿನ ಜನರು ಯಾರ ಮಾತಿಗೂ ಕಿವಿಗೊಡಬೇಡಿ. ನನ್ನ ಕೊನೆಯುಸಿರು ಇರುವವರೆಗೆ ರಾಣೇಬೆನ್ನೂರ ಬಿಟ್ಟು ಹೋಗದೇ ನಿಮ್ಮ ಸೇವೆ ಮಾಡುತ್ತೇನೆ ಎಂದು ಶಂಕರ್ ಭರವಸೆ ನೀಡಿದರು.

ಶ್ರೀ ಚನ್ನೇಶ ಸಹಕಾರಿ ಸಂಘದ ಅಧ್ಯಕ್ಷ ಕೆ.ಶಿವಲಿಂಗಪ್ಪ, ತುಂಗಭದ್ರಾ ನೂಲಿನ ಗಿರಣಿ ಅಧ್ಯಕ್ಷ ಕರಬಸಪ್ಪ ಮಾಕನೂರ, ಶ್ರೀ ಗಂಗಾ ವಿವಿಧೋದ್ದೇಶಗಳ ಸಹಕಾರಿ ಸಂಘದ ಅಧ್ಯಕ್ಷ ರತ್ನಾಕರ ಕುಂದಾಪುರ, ಡಾ. ನಾಗರಾಜ ದೊಡ್ಮನಿ ಮಾತನಾಡಿದರು.

ಶಶಿಕಲಾ ಕುಂದಾಪುರ, ಧನಲಕ್ಷ್ಮಿ ಶಂಕರ್, ಸಾಧಿಕ್ ಪಾಟೀಲ, ಕೃಷ್ಣಮೂರ್ತಿ ಸುಣಗಾರ, ವೀರಣ್ಣ ಬಾರ್ಕಿ, ನಾಗರಾಜ್ ದೀಕ್ಷಿತ್, ಹೆಚ್.ಡಿ. ಬಡಕರಿಯಪ್ಪನವರ, ನಿತ್ಯಾನಂದ ಕುಂದಾಪುರ, ಲಕ್ಷ್ಮಣ ದಾಸರ, ಸಿದ್ದಪ್ಪ ಅಂಬಲಿ, ಹನುಮಂತಪ್ಪ ಕಬ್ಬಾರ, ರಾಜು ಅಡಿವೆಪ್ಪನವರ, ಜಗದೀಶ ಎಲಿಗಾರ, ವಾಸುದೇವ ಲದ್ವಾ, ಕೊಟ್ರೇಶಪ್ಪ ಎಮ್ಮಿ, ಅನ್ನಪೂರ್ಣ ಬಾರ್ಕಿ, ಆಂಜನೇಯ ಬಾಳಿಕಾಯಿ, ಶ್ರೀನಿವಾಸ ಗುಪ್ತಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಚನ್ನಗಿರಿ : ಡಿ.ಕೆ.ಶಿ., ಸಲೀಂ ಅಹ್ಮದ್ ಅವರಿಗೆ ಸ್ವಾಗತ






ಚನ್ನಗಿರಿ, ಮಾ. 14- ಈಚೆಗೆ ನಗರಕ್ಕೆ ಆಗಮಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಅವರಿಗೆ ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು ವಿ. ಶಿವಗಂಗಾ ಹಾಗೂ ರಾಜ್ಯ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಚಿನ್ ಮೀಗಾ ಹಸಿರು ಶಾಲು ಹಾಗೂ ಅಡಿಕೆ ಹೊಂಬಾಳೆ ನೀಡಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಕಿಸಾನ್ ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷ ಭರತ್ ಪಾಟೀಲ್, ಕಿಸಾನ್ ಕಾಂಗ್ರೆಸ್ ಯುವ ಮುಖಂಡ ಇಸ್ಮಾಯಿಲ್, ಸಂಜು ಪಾಟೀಲ್, ಆಕಾಶ್ ಪಾಂಡೋಮಟ್ಟಿ ಮತ್ತಿತರರಿದ್ದರು.

## ಸರ್ವಧರ್ಮ ವಧು-ವರರ ಮಾಹಿತಿ ಕೇಂದ್ರ

ಚಿತ್ರದುರ್ಗ, ಮಾ.14 - ನಗರದ ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠದಲ್ಲಿ ಸರ್ವಧರ್ಮ ವಧು-ವರರ ಮಾಹಿತಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ.

ಆಸಕ್ತರು ದೂ.ಸಂ. 97439 96859, 89511 40275 ಸಂಖ್ಯೆಗೆ ಸಂಪರ್ಕಿಸಬಹುದಾಗಿದ್ದು, ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಬೇಕೆಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

## ವಚನಗಳನ್ನು ಅರ್ಥೈಸುವುದು ಸುಲಭ ನಡೆದುಕೊಳ್ಳುವುದು ಕಷ್ಟ : ಸಾಣೇಹಳ್ಳಿ ಶ್ರೀ



ಸಾಣೇಹಳ್ಳಿ, ಮಾ.14- ವಚನಗಳನ್ನು ಹಾಡುವುದು, ಅರ್ಥೈಸುವುದು ಸುಲಭ. ಆದರೆ ಪಾಲಿಸುವುದು ಕಷ್ಟಸಾಧ್ಯ. ಬಸವಣ್ಣನವರು 'ನಿಮಗೆ ಕೇಡಿಲ್ಲದಂತೆ ಆನು ಹಾಡುವೆ' ಎಂದು ಹೇಳುವಂತೆ ದೇವರು ಮೆಚ್ಚುವಂತೆ ನಡೆದುಕೊಳ್ಳಬೇಕು. ವಚನಗಳ ಹಿಂದೆ ನಾವು ಹೋದರೆ, ಬದುಕಿನ ಎಲ್ಲ ಕರ್ಮಟಗಳನ್ನು ಕಳೆದುಕೊಂಡು ಹೊಸ ಮನುಷ್ಯರಾಗಲು ಸಾಧ್ಯವಾಗುತ್ತದೆ ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು ನುಡಿದರು.

ಇಲ್ಲಿನ ಎಸ್.ಎಸ್. ರಂಗಮಂದಿರದಲ್ಲಿ ಶ್ರೀ ತರಳಬಾಳು ಜಗದ್ಗುರು ಶಾಖಾ ಮಠದ ಆಶ್ರಯದಲ್ಲಿ ಆಯೋಜಿಸಿದ್ದ ಶಿವರಾತ್ರಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು. ಶಿವರಾತ್ರಿಯನ್ನು ಕೇವಲ ಒಂದು ದಿನ ಆಚರಿಸಿದರೆ ಸಾಲದು, ಶರಣರು ಹೇಳು ವಂತೆ ನಿತ್ಯವೂ ಶಿವರಾತ್ರಿಯಾಗಬೇಕು. ಅಂದರೆ ನಿತ್ಯವೂ ಒಳಿತನ್ನೇ ಯೋಚಿಸಬೇಕು, ಒಳಿತನ್ನೇ ಮಾಡಬೇಕು. ಅರಿವು-ಆಚಾರವುಳ್ಳವನೇ ಶರಣ. ಇಂಥ ಶರಣರು ನಾವಾಗಬೇಕು. ಶರಣರು ಒತ್ತು ಕೊಟ್ಟಿದ್ದು ಮೊದಲಿಗೆ ಕಾಯಕಕ್ಕೆ, ನಂತರ ದಾಸೋಹ ಮತ್ತು ಪೂಜೆಗೆ. ಈ ಮೂರನ್ನೂ ಮನುಷ್ಯ ಮೈಗೂಡಿಸಿಕೊಂಡರೆ ಶರಣರು ಕಂಡ ಕಲ್ಯಾಣ ರಾಜ್ಯವನ್ನು ನನಸು ಮಾಡಲು ಸಾಧ್ಯವಾಗುತ್ತದೆ ಎಂದರು.

ವಚನ ಸ್ಪರ್ಧೆಯಲ್ಲಿ ಭಾಗವಹಿಸಿ, ವಿಜೇತ ಅಧ್ಯಾಪಕರಾದ ಕೆ. ಭಾಗ್ಯಶ್ರೀ, ಎ.ಎಸ್. ಶಿಲ್ಪಾ, ಬಿ.ಎಸ್. ಪ್ರಭು, ಕೆ. ಅನಿಲ್ ಕುಮಾರ್, ಕೆ. ಎಂ. ವೀಣಾ, ಹೆಚ್. ಆರ್. ಕಾವ್ಯ, ದೀಪಾ ವಚನ ಹಾಡುವುದರ ಜೊತೆಗೆ 'ಶರಣರು ಕಂಡ ಶಿವರಾತ್ರಿ' ಕುರಿತಂತೆ ಮಾತನಾಡಿದರು.

ಸಾಮೂಹಿಕ ವಚನ ಗೀತೆಯನ್ನು ಡಿ.ಎಸ್. ಸುಪ್ರಭೆ ಮತ್ತು ಡಿ.ಜೆ. ಮುಕ್ತಾ ನಡೆಸಿಕೊಟ್ಟರು. ಶಿವಸಂಚಾರದ ಕೆ. ಜ್ಯೋತಿ, ಕೆ. ದಾಕ್ಷಾಯಣಿ ಮತ್ತು ಹೆಚ್.ಎಸ್. ನಾಗರಾಜ್ ಮತ್ತು ತಬಲಾ ಸಾಥಿ ಶರಣ್ ತಂಡದವರು ಸುಮಧುರವಾಗಿ ವಚನ ಗೀತೆಗಳನ್ನು ಹಾಡಿದರು. ಅಧ್ಯಾಪಕಿ ಭಾಗ್ಯಶ್ರೀ ನಿರೂಪಿಸಿದರು. ಅಧ್ಯಾಪಕ ಎ.

ಬೇಕಾಗಿದ್ದಾರೆ

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.

ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೋರೇಟ್ ತರಬೇತಿ ಇರುತ್ತದೆ.

ಸ್ಥಳ : ಎ.ಕೆ. ಫಾರ್ಮ, ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.

# ಕ್ರೀಡೆ ದೈಹಿಕ, ಮಾನಸಿಕ ಬೆಳವಣಿಗೆಗೆ ಸಹಕಾರಿ : ಶಾಸಕ ರಾಮಚಂದ್ರ



ಜಗಳೂರು, ಮಾ.14- ಯುವಜನತೆಗೆ ದಿನನಿತ್ಯದ ಬದುಕಿನಲ್ಲಿ ಕ್ರೀಡೆ ದೈಹಿಕ, ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಶಾಸಕ ಎಸ್.ವಿ.ರಾಮಚಂದ್ರ ಹೇಳಿದರು

ಅವರು ಪಟ್ಟಣದ ಕ್ರೀಡಾಂಗಣದಲ್ಲಿ ಸೇವಾ ಲಾಲ್ ಕ್ರಿಕೆಟರ್ಸ್‌ವತಿಯಿಂದ ಎಸ್.ವಿ.ಆರ್ ರಾಜ್ಯ ಮಟ್ಟದ ಕ್ರಿಕೆಟ್ ಟೂರ್ನಿಮೆಂಟ್‌ನ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಾನೂ ಸಹ ಕ್ರೀಡೆಯಿಂದ ರಾಜಕೀಯ ಕ್ಷೇತ್ರಕ್ಕೆ ಬಂದವನು. ನನ್ನ ಅಧಿಕಾರ ಅವಧಿಯಲ್ಲಿ ರಾಜ್ಯ, ರಾಷ್ಟ್ರಮಟ್ಟದ ಹೊನಲು ಬೆಳಕಿನ ಕಬಡ್ಡಿ ಹಾಗು ಪೈಕಾ ಕ್ರೀಡಾಕೂಟವನ್ನು ಆಯೋಜಿಸಿ, ಜಗಳೂರು ಕ್ಷೇತ್ರವನ್ನು ರಾಜ್ಯಕ್ಕೆ ಪರಿಚಯಿಸಿದ ತೃಪ್ತಿ ಇದೆ ಎಂದರು.

ಗ್ರಾಮೀಣ ಭಾಗದಲ್ಲಿ ಉತ್ತಮ ಪ್ರತಿಭೆಗಳು ಇವೆ. ಅವುಗಳನ್ನು ಬೆಳಕಿಗೆ ತರುವ ಹೊಣೆಗಾರಿಕೆ ನಮ್ಮ ಮೇಲಿದೆ. ಅಂತವರು ಮುಂದೆ ಬಂದರೆ, ಸದಾ ಪ್ರೋತ್ಸಾಹಿಸುತ್ತೇನೆ. ಯುವಕರು ಕ್ರೀಡೆಯ ಜೊತೆಗೆ ಸಮಾಜ ಸೇವೆಗೆ ಮುಂದೆ ಬರಬೇಕು. ಮುಂಬರುವ ದಿನಗಳಲ್ಲಿ ಕ್ರೀಡಾ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುತ್ತೇನೆ ಎಂದರು. ಸಮಾಜ ಸೇವಕ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ ಮಾತನಾಡಿ, ಜಾತಿ ಭೇದಗಳನ್ನು ತೊಡೆದು ಹಾಕಿ, ಸಮ ಸಮಾಜ ನಿರ್ಮಾಣ ಮಾಡುವಲ್ಲಿ ಕ್ರೀಡೆಯ ಪಾತ್ರ ಮುಖ್ಯವಾಗಿರುತ್ತದೆ. ಸೋಲು - ಗೆಲುವು ಎನ್ನದೇ ಕ್ರೀಡೆಯಲ್ಲಿ ಭಾಗವಹಿಸುವುದು ಮುಖ್ಯ ಎಂದರು.

ತಾಲ್ಲೂಕಿನಲ್ಲಿ ಪ್ರಸಕ್ತ ವರ್ಷದಲ್ಲಿ ಗ್ರಾಮೀಣ ಭಾಗಗಳಲ್ಲಿ ಕ್ರೀಡೆಗೆ ಒತ್ತು ಕೊಟ್ಟಿರುವುದು ಸಂತಸ ಮೂಡಿಸಿದೆ. ಆಧುನಿಕ ಮಾಧ್ಯಮಗಳಿಗೆ ಮಾರು ಹೋಗಿ ಮಾನಸಿಕ ಖಿನ್ನತೆಗೆ ಒಳಗಾಗುವ ಬದಲು ದೇಹಕ್ಕೆ ಕೆಲಸ ನೀಡುವ ಮೂಲಕ ದೈಹಿಕ ಶ್ರಮದೊಂದಿಗೆ ಸದೃಢ ದೇಹ ನಿಮ್ಮದಾಗಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಜಿ.ಪಂ ಸದಸ್ಯ ಎಸ್.ಕೆ.ಮಂಜಣ್ಣ, ಪ.ಪಂ ಅಧ್ಯಕ್ಷ ಆರ್.ತಿಪ್ಪೇಸ್ವಾಮಿ, ಸದಸ್ಯ ನವೀನ್ ಕುಮಾರ್, ಮುಖಂಡರಾದ ಬಿಸ್ತುವಳ್ಳಿ ಬಾಬು, ಬಿದರಿಕೆರೆ ರವಿ, ಓಬಣ್ಣ, ಕೊಟ್ರೇಶ್ ನಾಯ್ಕ, ಚಟ್ನಳ್ಳಿ ರಾಜಣ್ಣ ಸೇರಿದಂತೆ ಮತ್ತಿತರರಿದ್ದರು. ಪ್ರಥಮ ಬಹುಮಾನ ತೋರಣಗಟ್ಟೆ ತಂಡ, ದ್ವಿತಿಯ ಬಹುಮಾನ ಬೆಸ್ಕಾಂ ತಂಡ ಪಡೆದು ಕೊಂಡಿದೆ.

# ಮಹಿಳೆಗೆ ದ್ರೌಪದಿಯ ದುಸ್ಥಿತಿ ಎದುರಿಸುವ ಕಾಲ ಬಂದರೂ ಅಚ್ಚರಿ ಪಡಬೇಕಿಲ್ಲ : ಸುಮತಿ ಜಯಪ್ಪ

ದಾವಣಗೆರೆ, ಮಾ.14- ಪ್ರಸ್ತುತ ಮಹಿಳೆ ಮನೆಯ ಅಂಗಳದಿಂದ ಹಿಡಿದು ಮಂಗಳನ ಅಂಗಳದಲ್ಲಿ ಕಾಲಿಟ್ಟಿದ್ದರೂ ಭ್ರೂಣಾವಸ್ಥೆಯಿಂದ ಮಸಣಕ್ಕೆ ಹೋಗುವವರೆಗೂ ಅನೇಕ ಸವಾಲು ಗಳನ್ನು ಎದುರಿಸುತ್ತಿದ್ದಾಳೆ ಎಂದು ಉಪನ್ಯಾಸಕಿ ಸುಮತಿ ಜಯಪ್ಪ ಕಳವಳ ವ್ಯಕ್ತಪಡಿಸಿದರು.



ಅವರು, ಇಂದು ನಗರದ ರೋಟರಿ ಬಾಲ ಭವನದಲ್ಲಿ ಸೋಮವಂಶ ಶ್ರೀ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಮಹಿಳಾ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಉಪನ್ಯಾಸ ನೀಡಿದರು.

ನೀರೆಯರು ಮತ್ತು ನೀರು ಇಲ್ಲದ ಸಮಾಜವನ್ನು ಊಹಿಸಲು ಅಸಾಧ್ಯ. ಪೋಷಕರಲ್ಲಿ ಗಂಡೇ ಶ್ರೇಷ್ಠ, ಹೆಣ್ಣೆಂದರೆ ಹುಣ್ಣು ಎಂಬ ಭಾವನೆ ಇರುವುದರಿಂದ ಮತ್ತು ವರದಕ್ಷಿಣೆಯ ಪಿಡುಗಿನ ಕಾರಣಕ್ಕೆ ದೇಶದಲ್ಲಿ ಪ್ರತಿ ದಿನ 600ಕ್ಕೂ ಹೆಚ್ಚು ಹೆಣ್ಣು ಭ್ರೂಣ ಹತ್ಯೆಗಳು ನಡೆಯುತ್ತಿವೆ. ಆದ್ದರಿಂದ ಲಿಂಗಾನುಪಾತದಲ್ಲಿ ಗಂಡಸರ ಸಂಖ್ಯೆ ಹೆಚ್ಚಾಗಿದೆ. ಹೀಗೆ ಭ್ರೂಣ ಹತ್ಯೆ ಮುಂದುವರೆದರೆ ಮಹಿಳೆಯರಿಗೆ ಮುಂದೆ ಮತ್ತಷ್ಟು ಅಸುರಕ್ಷತೆ ಭಾವನೆ ಕಾಡಲಿದೆ. ಮಹಿಳೆಗೆ ದ್ರೌಪದಿಯ ದುಸ್ಥಿತಿ ಎದುರಿಸುವ ಕಾಲ ಬಂದರೂ ಅಚ್ಚರಿ ಪಡಬೇಕಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಮನೆಯನ್ನು ಸ್ವರ್ಗವನ್ನಾಗಿ ಸೃಷ್ಟಿಸುವ ಮತ್ತು ಮಕ್ಕಳಿಗೆ ಸಂಸ್ಕಾರ ನೀಡುವ ಜವಾಬ್ದಾರಿ ತಾಯಂದಿರ ಮೇಲಿದೆ. ಆದ್ದರಿಂದ ತಾಯಂದಿರು ಮಕ್ಕಳಲ್ಲಿ ಭೇದ ಮಾಡದೆ ಗಂಡು ಮತ್ತು ಹೆಣ್ಣನ್ನು ಸಮಾನವಾಗಿ ಬೆಳೆಸಬೇಕು ಎಂದು ಸಲಹೆ ನೀಡಿದರು.

ಮನೆಯನ್ನು ಸ್ವರ್ಗ ಅಥವಾ ನರಕವನ್ನಾಗಿಸುವುದು ಮನೆಯ ಮಹಿಳೆಯರ ನಡವಳಿಕೆ ಮೇಲೆ ನಿಂತಿದೆಯೇ ಹೊರತು, ಚಾಡಿ ಹೇಳುವ ಸ್ವಭಾವವೇ ಇಲ್ಲದ ಪುರುಷನ ಮೇಲಲ್ಲ. ಹೀಗಾಗಿ ಮಹಿಳೆಯರು ಕೆಟ್ಟ ಗುಣಗಳನ್ನು ಬಿಟ್ಟು ಪತಿ ಮತ್ತು ಅತ್ತೆಯೊಂದಿಗೆ ಒಳ್ಳೆಯ ಸಂಬಂಧ ಇಟ್ಟುಕೊಂಡು ನೆಮ್ಮದಿಯ ಜೀವನ ನಡೆಸಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಪಾಲಿಕೆ ಸದಸ್ಯೆ ಆಶಾ ಉಮೇಶ್, ಸೋಮವಂಶ ಶ್ರೀ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ಮಹಿಳಾ ಘಟಕದ ರಾಧಾ ಬಾಯಿ ಮೇಹರ್ವಾಡೆ, ಶುಭಾಂಜಲಿ ಆರ್ ಕಠಾರೆ, ಪದ್ಮ ಬಾಯಿ ಎಂ. ಭೂತೆ, ಚಂದಾ ಭೂತೆ ಸೇರಿದಂತೆ ಇತರರು ಇದ್ದರು.

## 17 ರಂದು 'ಜಾನಪದ ಸಂಭ್ರಮ'

ದಾವಣಗೆರೆ, ಮಾ.14- ವಿದ್ಯಾನಗರ ವಿನಾಯಕ ಬಡಾವಣೆ ಯಲ್ಲಿನ ವಿನೂತನ ಮಹಿಳಾ ಸಮಾಜದ ವತಿಯಿಂದ ಮಾ. 17 ರಂದು ಬುಧವಾರ ಮಧ್ಯಾಹ್ನ 3 ಕ್ಕೆ 'ಜಾನಪದ ಸಂಭ್ರಮ' ಕಾರ್ಯ ಕ್ರಮ ನಡೆಯಲಿದೆ. ಪಾಲಿಕೆ ಸದಸ್ಯೆ ವೀಣಾ ನಂಜಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ವಿನೂತನ ಮಹಿಳಾ ಸಮಾಜದ ಅಧ್ಯಕ್ಷೆ ರೇಖಾ ಓಂಕಾರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. 'ಮಹಿಳೆ ಮತ್ತು ಮನೋಸ್ವಾಸ್ಥ' ಕುರಿತು ಸ್ತ್ರೀರೋಗ ತಜ್ಞೆ ಡಾ. ಶಾಂತ ಭಟ್ ಮಾತನಾಡಲಿದ್ದಾರೆ.

# ಮಮತಾ ಮೇಲೆ ಹಲ್ಲೆ ನಡೆದಿಲ್ಲ : ಆಯೋಗ

## ಭದ್ರತಾ ಲೋಪದ ಹಿನ್ನೆಲೆಯಲ್ಲಿ ಇಬ್ಬರು ಅಧಿಕಾರಿಗಳ ಅಮಾನತ್ತು


ನವದೆಹಲಿ, ಮಾ. 14 – ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನಂದಿಗ್ರಾಮಕ್ಕೆ ಚುನಾವಣಾ ಪ್ರಚಾರಕ್ಕಾಗಿ ತೆರಳಿದಾಗ ಅವರ ಮೇಲೆ ಪೂರ್ವ ನಿಯೋಜಿತ ದಾಳಿ ನಡೆದಿಲ್ಲ. ಭದ್ರತಾ ಲೋಪದಿಂದಾಗಿ ಅವರು ಗಾಯಗೊಂಡಿದ್ದಾರೆ ಎಂದು ಇಬ್ಬರು ವಿಶೇಷ ಚುನಾವಣಾ ವೀಕ್ಷಕರು ಸಲ್ಲಿಸಿದ ವರದಿಯನ್ನು ಚುನಾವಣಾ ಆಯೋಗ ಅಂಗೀಕರಿಸಿದೆ.

ರಕ್ಷಣಾ ವ್ಯವಸ್ಥೆಯಲ್ಲಿ ಲೋಪವಾಗಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಚುನಾವಣಾ ಆಯೋಗ, ಮುಖ್ಯಮಂತ್ರಿ ಭದ್ರತಾ ಉಸ್ತುವಾರಿ ಹೊಂದಿದ್ದ ಐ.ಪಿ. ಎಸ್. ಅಧಿಕಾರಿ ವಿವೇಕ್ ಸಹಾಯ್ ಹಾಗೂ ಪೂರ್ವ ಮೇದಿನಿಪುರದ ಪೊಲೀಸ್ ವರಿಷ್ಠಾಧಿಕಾರಿ ಪ್ರವೀಣ್ ಪ್ರಕಾಶ್ ಅವರನ್ನು ಅಮಾನತ್ತುಗೊಳಿಸಿದೆ. ಪೂರ್ವ ಮೇದಿನಿಪುರದ ಜಿಲ್ಲಾಧಿಕಾರಿಯನ್ನೂ ವರ್ಗಾಯಿಸಲಾಗಿದೆ.

ಝಡ್ ಪ್ಲಸ್ ಭದ್ರತೆ ಪಡೆದವರ ರಕ್ಷಣೆಯ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾದ ವಿವೇಕ್ ಸಹಾಯ್ ವಿರುದ್ಧ ವಾರದಲ್ಲಿ ಆರೋಪ ಪಟ್ಟಿ ದಾಖಲಿಸಬೇಕು ಎಂದು ಚುನಾವಣಾ ಆಯೋಗದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ರಾಜ್ಯ ಮುಖ್ಯ ಕಾರ್ಯದರ್ಶಿಗಳು ಡಿ.ಜಿ.ಪಿ. ಜೊತೆ ಚರ್ಚೆ ನಡೆಸಿ ಸೂಕ್ತ ಭದ್ರತಾ ನಿರ್ದೇಶಕರನ್ನು ತಕ್ಷಣವೇ ನೇಮಿಸಬೇಕು ಎಂದು ಆಯೋಗ ಹೇಳಿದೆ. ಪೂರ್ವ ಮೇದಿನಿಪುರ ಜಿಲ್ಲಾಧಿಕಾರಿ ವಿಬು ಗೋಯಲ್ ಅವರನ್ನು ಚುನಾವಣಾ ಆಯೋಗ ವರ್ಗಾವಣೆ ಮಾಡಿದೆ. ಚುನಾ ವಣಾ ಕರ್ತವ್ಯ ರಹಿತ ಹುದ್ದೆಗೆ ಅವರನ್ನು ವರ್ಗಾಯಿಸ ಲಾಗಿದೆ. ಪೂರ್ವ ಮೇದಿನಿಪುರದ ಪೊಲೀಸ್ ವರಿಷ್ಠಾಧಿ ಕಾರಿ ಪ್ರವೀಣ್ ಪ್ರಕಾಶ್ ಅವರನ್ನು ಅಮಾನತ್ತುಗೊಳಿಸಲು ಹಾಗೂ ಭದ್ರತಾ ವೈಫಲ್ಯಕ್ಕಾಗಿ ಆರೋಪ ದಾಖಲಿಸಲು ಸೂಚನೆ ನೀಡಲಾಗಿದೆ. ವಿಶೇಷ ಚುನಾವಣಾ ವೀಕ್ಷಕರಾದ ಅಜಯ್ ನಾಯಕ್ ಹಾಗೂ ವಿವೇಕ್ ದುಬೆ ಮತ್ತು ರಾಜ್ಯ ಸರ್ಕಾರ ಸಲ್ಲಿಸಿದ ವರದಿ ಆಧರಿಸಿ ಆಯೋಗ ಈ ಕ್ರಮ ತೆಗೆದುಕೊಂಡಿದೆ.

## 18 ರಂದು ನೀಲಾನಹಳ್ಳಿ ಆಂಜನೇಯ ರಥೋತ್ಸವ




ದಾವಣಗೆರೆ, ಮಾ. 14 - ತಾಲ್ಲೂಕಿನ ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಇದೇ ದಿನಾಂಕ 18 ರ ಗುರುವಾರ ಬೆಳಿಗ್ಗೆ 8.30 ಕ್ಕೆ ಜರುಗಲಿದೆ ಹಾಗೂ ಸಂಜೆ ಕಾರಣಿಕ ನಡೆಯಲಿದೆ ಎಂದು ದೇವಸ್ಥಾನದ ಕನ್ವೀನರ್ ಡಾ. ಎನ್.ಎಂ. ಆಂಜನೇಯ ಗುರೂಜಿ ತಿಳಿಸಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಇದೇ ದಿನಾಂಕ 16ರ ಮಂಗಳವಾರ ರಾತ್ರಿ 9.10 ಕ್ಕೆ ಆಂಜನೇಯ ಸ್ವಾಮಿಗೆ ಕಂಕಣಧಾರಣೆ ನಡೆಯಲಿದೆ. 17ರ ಬುಧವಾರ ಸಂಜೆ ದೊಡ್ಡಬಾತಿಯ ಶ್ರೀ ಬೀರಲಿಂಗೇಶ್ವರ ದೇವರು ಆಗಮಿಸುವರು ಹಾಗೂ ರಾತ್ರಿ ಅರಿಶಿಣ ಎಣ್ಣೆ ಕಾರ್ಯ ನಡೆಯಲಿದೆ. ದಿನಾಂಕ 18 ರ ಗುರುವಾರ ಬೆಳಿಗ್ಗೆ 8.30ಕ್ಕೆ ರಥೋತ್ಸವ ಜರುಗಲಿದ್ದು, ನಂತರ 9.30 ರಿಂದ 1.30 ರವರೆಗೆ ಭಕ್ತಾದಿಗಳು ಹರಕೆ ತೀರಿಸುವ ಕಾರ್ಯಕ್ರಮ ನಡೆಯಲಿದೆ. ಸಂಜೆ 4.30 ಕ್ಕೆ ಬೇಟೆ ಆಡುವುದು, 5.30 ಕ್ಕೆ ಮುಳ್ಳು ಗದ್ದಿಗೆ, 6.30 ಕ್ಕೆ ಕಾರಣಿಕ ಮತ್ತು 7.30 ಕ್ಕೆ ಭೂತ ಸೇವೆ, ರಾತ್ರಿ 8.30 ಕ್ಕೆ ಓಕಳಿ ಕಾರ್ಯ, 9.30 ಕ್ಕೆ ಗಂಗಾ ಪೂಜೆಯೊಂದಿಗೆ ರಥೋತ್ಸವ ಪೂರ್ಣಗೊಳ್ಳಲಿದೆ.

# ಕಸಾಯಿ ಖಾನೆಗೆ ಸಾಗಾಟ : ಜಾನುವಾರುಗಳ ರಕ್ಷಣೆ





ದಾವಣಗೆರೆ, ಮಾ.14- ಜಾನುವಾರು ಸಂತೆಯಲ್ಲಿ ಖರೀದಿಸಿದ್ದ ಜಾನುವಾರು ಗಳನ್ನು ಕಸಾಯಿ ಖಾನೆಗೆ ಸಾಗಿಸುತ್ತಿದ್ದ ಹಿನ್ನೆಲೆಯಲ್ಲಿ ಬೆಂಗಳೂರು ಮೂಲದ ಪ್ರಾಣಿ ದಯಾ ಸಂಸ್ಥೆಯ ಮಾಹಿತಿ ಮೇರೆಗೆ ಇಂದು ದಾಳಿ ನಡೆಸಿದ ಪೊಲೀಸರು ಎರಡು ವಾಹನಗಳನ್ನು ವಶಕ್ಕೆ ಪಡೆದು 18 ಜಾನುವಾರುಗಳನ್ನು ರಕ್ಷಿಸಿದ್ದಾರೆ.

ನಗರದ ಹೊರ ವಲಯದ ಆವರಗೆರೆ ಬೈಪಾಸ್ ರಸ್ತೆ ಮಾರ್ಗವಾಗಿ ಎತ್ತು, ಗೋವು, ಕರುಗಳನ್ನು ವಾಹನಗಳಲ್ಲಿ ತುಂಬಿ ಕೊಂಡು ಕಸಾಯಿಖಾನೆಗೆ ಸಾಗಿಸುತ್ತಿರುವ ಬಗ್ಗೆ ಬೆಂಗಳೂರು ಮೂಲದ ಪ್ರಾಣಿ ದಯಾ ಸಂಘದವರ ಮಾಹಿತಿ ಆಧರಿಸಿ ದಾಳಿ ನಡೆಸಿ, ಜಾನುವಾರುಗಳನ್ನು ರಕ್ಷಿಸಿ, ಆವರಗೆರೆ ಗ್ರಾಮದ ಮಹಾವೀರ ಗೋಶಾಲೆಗೆ ಬಿಡಲಾಗಿದೆ.

ಹಾವೇರಿ ಜಿಲ್ಲೆಯ ರಾಣೇಬೆನ್ನೂರು ನಗರದಲ್ಲಿ ಭಾನುವಾರ ಎತ್ತಿನ ಸಂತೆ ನಡೆಯುತ್ತದೆ. ಅಲ್ಲಿ ಕರು, ಹಸು, ಎತ್ತುಗಳನ್ನು ಖರೀದಿಸಿ, ಮಿನಿ ಲಾರಿ, ಗೂಡ್ಸ್ ಜೀಪು, ಆಪೆ ವಾಹನಗಳಲ್ಲಿ ಸಾಗಿಸುತ್ತಿದ್ದು, ಅವುಗಳು ಕಸಾಯಿ ಖಾನೆ ಪಾಲಾಗುತ್ತಿವೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಬೆಂಗಳೂರಿನ ಪ್ರಾಣಿ ದಯಾ ಸಂಘದವರು ಬೆಳ್ಳಂ ಬೆಳಗ್ಗೆಯೇ ರಾಣೇಬೆನ್ನೂರಿನಲ್ಲಿ ದನದ ಸಂತೆಗೆ ಆಗಮಿಸಿದ್ದರು. ರಾಸುಗಳನ್ನು ಸಾಗಿಸುತ್ತಿದ್ದ ವಾಹನಗಳ ಬಗ್ಗೆ ಹರಿಹರ ಪೊಲೀಸರು, ದಾವಣಗೆರೆ ಪೊಲೀಸರಿಗೆ ಸಂಘದವರು ಮಾಹಿತಿ ನೀಡಿದ್ದಾರೆ. ರಾಷ್ಟ್ರೀಯ ಹೆದ್ದಾರಿ-4ರಲ್ಲಿ ಸಾಗಿದ ರಾಸುಗಳು ತುಂಬಿದ್ದ ಎರಡೂ ವಾಹನಗಳು ಆವರಗೆರೆ-ಬೈಪಾಸ್ ಕ್ರಾಸ್ ಬಳಿ ನಗರದೊಳಗೆ ಪ್ರವೇಶಿಸಿವೆ. ರಾಸುಗಳು ತುಂಬಿದ್ದ ವಾಹನಗಳಿಗಾಗಿ ಕಾದು ನಿಂತಿದ್ದ ಪೊಲೀಸರು ವಾಹನವನ್ನು ತಡೆದು, ರಾಸುಗಳ ಕುರಿತಂತೆ ದಾಖಲೆ ಕೇಳಿದ್ದಾರೆ. ವಾಹನದಲ್ಲಿದ್ದವರು ಸ್ಪಷ್ಟ ಉತ್ತರ ನೀಡಿಲ್ಲ.

ಆವರಗೆರೆ ಗ್ರಾಮದ ಮಹಾವೀರ ಗೋ ಶಾಲೆಯಲ್ಲಿ 18 ಜಾನುವಾರುಗಳಿಗೆ ರಕ್ಷಣೆ ನೀಡಲಾಗಿದೆ. ಆರ್‌ಎಂಸಿ ಯಾರ್ಡ್ ಪೊಲೀಸರು ವಾಹನಗಳನ್ನು ಜಪ್ತು ಮಾಡಿ, ಮುಂದಿನ ಕ್ರಮ ಕೈಗೊಂಡಿದ್ದಾರೆ. ಆವರಗೆರೆ ಗೋ ಶಾಲೆಗೆ ನಗರ ವೃತ್ತ ನಿರೀಕ್ಷಕ ಗಜೇಂದ್ರಪ್ಪ, ಅಧಿಕಾರಿ, ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

## ಅಂಟಿಲಿಯಾ ಬೆದರಿಕೆ : ಮಹಾರಾಷ್ಟ್ರದ ಪೊಲೀಸ್ ಅಧಿಕಾರಿ ಬಂಧನ

ಮುಂಬೈ, ಮಾ. 13 – ಉದ್ಯಮಿ ಮುಕೇಶ್ ಅಂಬಾನಿ ನಿವಾಸ ಅಂಟಿಲಿಯಾ ಬಳಿಯ ವಾಹನದಲ್ಲಿ ಸ್ಫೋಟಕಗಳು ಕಂಡುಬಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ಬಂಧಿಸಿದೆ. ಬಂಧನದ ನಂತರ ಸ್ಥಳೀಯ ನ್ಯಾಯಾಲಯದ ಎದುರು ಹಾಜರು ಪಡಿಸಲಾಗಿದ್ದು, ಮಾರ್ಚ್ 25ರವರೆಗೆ ವಾಜೆಯನ್ನು ಎನ್.ಐ.ಎ. ಕಸ್ಟಡಿಗೆ ವಹಿಸಲಾಗಿದೆ.

ಮುಂಬೈನ ಕುಂಬುಲಾ ಹಿಲ್‌ನಲ್ಲಿರುವ ಎನ್.ಐ.ಎ. ಕಚೇರಿಗೆ ವಾಜೆ ಅವರನ್ನು ಕರೆಸಿಕೊಂಡು 12 ಗಂಟೆಗಳ ಕಾಲ ವಿಚಾರಣೆ ನಡೆಸಿದ ನಂತರ ಬಂಧಿಸಲಾಗಿದೆ. ಫೆಬ್ರವರಿ 25ರಂದು ಅಂಬಾನಿ ನಿವಾಸದ ಬಳಿಯ ವಾಹನದಲ್ಲಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ಸ್ಫೋಟಕ ತುಂಬಿದ ವಾಹನವನ್ನು ಇರಿಸಿದ ಘಟನೆಯಲ್ಲಿ ವಾಜೆ ಪಾತ್ರ ಇರುವ ಹಿನ್ನೆಲೆಯಲ್ಲಿ ಬಂಧಿಸಿರುವುದಾಗಿ ಎನ್.ಐ.ಎ. ವಕ್ತಾರರು ಹೇಳಿದ್ದಾರೆ.

ಸ್ಫೋಟಕ ಇರಿಸಲಾದ ವಾಹನವನ್ನು ನನ್ನಿಂದ ಕದಿಯಲಾಗಿತ್ತು ಎಂದು ಪುಣೆಯ ಉದ್ಯಮಿ ಮನ್‌ಸುಖ್ ಹಿರನ್ ದೂರಿದ್ದರು. ನಂತರ ಹಿರನ್ ಥಾಣೆಯಲ್ಲಿ ಸಾವನ್ನಪ್ಪಿದ್ದರು. ಹಿರನ್ ಕಳೆದ ನವೆಂಬರ್‌ನಲ್ಲೇ ತನ್ನ ವಾಹನವನ್ನು ವಾಜೆಗೆ ಕೊಟ್ಟಿದ್ದರು, ಅದನ್ನು ಫೆಬ್ರವರಿ ಮೊದಲ ವಾರದಲ್ಲಿ ವಾಪಸ್ ಕೊಡಲಾಗಿತ್ತು ಎಂದು ಹಿರನ್ ಪತ್ನಿ ತಿಳಿಸಿದ್ದರು. ಮತ್ತೊಂದೆಡೆ, ಹಿರನ್ ಸಾವಿನ ಹಿಂದೆ ಪತ್ನಿಯ ಪಾತ್ರವಿದೆ ಎಂದು ವಾಜೆ ಆರೋಪಿಸಿದ್ದರು.

ಹಿರನ್ ವಶದಲ್ಲಿದ್ದ ವಾಹವನ್ನು ಬಳಸಿರಲಿಲ್ಲ ಎಂದು ವಾಜೆ ಅವರು ಮಹಾರಾಷ್ಟ್ರ ಪೊಲೀಸರ ಉಗ್ರವಾದ ವಿರೋಧಿ ದಳದ ಎದುರು ತಿಳಿಸಿದ್ದರು. ನಂತರ ಅವರು ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರಾದರೂ, ಅದನ್ನು ತಿರಸ್ಕರಿಸಲಾಗಿತ್ತು.

2003ರಲ್ಲಿ ಖ್ವಾಜಾ ಯೂನಸ್ ಕಸ್ಟಡಿಯಲ್ಲಿ ಹತ್ಯೆ ಮಾಡಿದ ಹಾಗೂ ಸಾಕ್ಷಿಗಳನ್ನು ನಾಶಪಡಿಸಿದ ಆರೋಪ ಸಹ ವಾಜೆ ಮೇಲಿದೆ.

## ರಜೆ ನಕಲಿ ಸುತ್ತೋಲೆ : ವಿರುದ್ಧ ಕ್ರಮ ಡಿಸಿಎಂ

ಹುಬ್ಬಳ್ಳಿ, ಮಾ. 14 - ಕೊರೊನಾ ವೈರಸ್ ಸೋಂಕು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ನಾಳೆ ಸೋಮವಾರದಿಂದ 15 ದಿನಗಳ ಕಾಲ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ ಎಂಬುದು ಕೇವಲ ಸುಳ್ಳು ಸುದ್ದಿ ಎಂದು ಉಪ ಮುಖ್ಯಮಂತ್ರಿ ಡಾ. ಸಿ. ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಸುಳ್ಳು ಸುದ್ದಿ ಹರಡುವ ನಕಲಿ ಸುತ್ತೋಲೆ ಸೃಷ್ಟಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ.

## ಶಾಸಕರ ಪ್ಲಾಂಟ್‌ನಲ್ಲಿದ್ದ ಗಂಧದ ಮರ ಕಳ್ಳತನ



ದಾವಣಗೆರೆ, ಮಾ.14- ಚನ್ನಗಿರಿ ಶಾಸಕರ ಮನೆ ಅಂಗಳದಲ್ಲಿನ ಪ್ಲಾಂಟ್ ನಲ್ಲೇ ಗಂಧದ ಮರಗಳನ್ನು ಖದೀಮರು ಕಳ್ಳತನ ಮಾಡಿರುವ ಘಟನೆ ನಡೆದಿದೆ.

ಚನ್ನಗಿರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಮನೆ ಅಂಗಳದ ಪ್ಲಾಂಟ್ ನಲ್ಲಿದ್ದ ಎಂಟು ಗಂಧದ ಮರಗಳನ್ನು ಕಳ್ಳರು ಕತ್ತರಿಸಿ ಕೊಂಡು ಪರಾರಿಯಾಗಿದ್ದು, ಇನ್ನು ಕೆಲವು ಮರಗಳಿಗೆ ಕಳ್ಳರು ಕೊಡಲಿ ಹಾಕಿರುವುದು ಬೆಳಕಿಗೆ ಬಂದಿದೆ. ಶಾಸಕರು ತಮ್ಮ ಮನೆ ಅಂಗಳದ ಪಕ್ಕದ 2 ಎಕರೆ ಪ್ರದೇಶದಲ್ಲಿ ಗಂಧ, ತೇಗದ ವನ ಬೆಳೆಸಿ ದ್ದು, ಕಳೆದ 10 ವರ್ಷಗಳಿಂದ ಪ್ಲಾಂಟ್ ಮಾಡಿ ದ್ದನ್ನು ಗಮನಿಸಿರುವ ಖದೀ ಮರು ಗಂಧದ ಮರಗಳಿಗೆ ಕೊಡಲಿ ಹಾಕುವ ಮೂಲಕ ಗಂಧ ವನ್ನು ಹೊತ್ತೊಯ್ದಿದ್ದಾರೆ. ಇನ್ನು ಶಾಸಕರ ಪ್ಲಾಂಟ್ ನಲ್ಲಿ ಇದು 4ನೇ ಬಾರಿ ಕಳ್ಳತನ ನಡೆದಿರುವುದು ಎಂದು ತಿಳಿದುಬಂದಿದೆ. ಘಟನಾ ಸ್ಥಳಕ್ಕೆ ಶ್ವಾನದಳ, ಚನ್ನಗಿರಿ ಪೊಲೀಸ್, ಅರಣ್ಯ ಇಲಾಖೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ತುಂಗಭದ್ರಾ ನದಿಯಲ್ಲಿ ತೆಪ್ಪದ ಮೂಲಕ ಮರಳು ಲೂಟಿ



ಹೂವಿನಹಡಗಲಿ, ಮಾ.14- ತಾಲ್ಲೂಕಿನ ಗುತ್ತಲ ಸೇತುವೆಯ ಬಳಿ ತುಂಗಭದ್ರಾ ನದಿಯಲ್ಲಿ ಅವ್ಯಾಹತವಾಗಿ ಮರಳು ಲೂಟಿ ಹಾಡುಹಗಲೇ ನಡೆಯುತ್ತಿದ್ದರೂ, ಅಧಿಕಾರಿಗಳು ಗಮನಹರಿಸುತ್ತಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

ತುಂಗಭದ್ರಾ ನದಿಯಿಂದ ಅಕ್ರಮವಾಗಿ ಮರಳು ಸಾಗಾಟ ನಡೆಯುತ್ತಿದೆ. ರಾತ್ರಿ ಕೂಡ ಮರಳನ್ನು ಸಾಗಿಸುತ್ತಿದ್ದ ಅಧಿಕಾರಿಗಳು ಮಾತ್ರ ಮೌನ ವಹಿಸಿದ್ದಾರೆ.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಅಕ್ರಮ ದಂಧೆಗೆ ಕಡಿವಾಣ ಹಾಕಬೇಕಾಗಿದೆ ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

ಹೃದಯಪೂರ್ವಕ ಅಭಿನಂದನೆಗಳು





ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಮೆಂಬರ್ ಆಗಿ ನೇಮಕವಾಗಿರುವ ಅಖಿಲ ಭಾರತ ವೀರಶೈವ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕದ ಕಾರ್ಯದರ್ಶಿಗಳೂ ಆದ

ಶ್ರೀ ರಮೇಶ್ ಬಿ.ಜೆ.

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

* ಡಿ.ಬಿ. ಪ್ರವೀಣ್ ಶಾಮನೂರು * ಫಣಿಯಾಪುರ ಲಿಂಗರಾಜ್ * ಕರೂರು ಹನುಮಂತಪ್ಪ * ಹಾಲೇಶ್ ಬಂಬೂಬಜಾರ್ * ಹೂವಿನಮಡು ಪ್ರವೀಣ್ * ನಾಗರಾಜ್ ಗೌಡಗೊಂಡನಹಳ್ಳಿ * ಸುರೇಶ್ ಗೋಶಾಲೆ * ಪರಶುರಾಮ್ ಗೋಶಾಲೆ * ಗುಮ್ಮನೂರು ಶ್ರೀನಿವಾಸ್ * ಶಶಿಕುಮಾರ್ ಶ್ರೀಕಂಠಪುರ * ಕುಮಾರ್ ಮ್ಯಾಸರಹಳ್ಳಿ * ಮೋಹನ್ ಮ್ಯಾಸರಹಳ್ಳಿ * ದೇವರಮನೆ ಪ್ರವೀಣ್


WANTED
FULL TIME ACCOUNT ASSISTANT
With Experience in Tally Accounting
Apply with Bio-Data immediately:
SHANTALA
Chamrajpet, Davanagere
96861 95328, 96861 95323

MAHARAJ SOAPS INDUSTRY PVT. LTD.,
WANTED ACCOUNTANT
QUALIFICATION : B.Com., M.Com
with Tally Knowledge
2 to 3 Years Experience
Send Your Profile to msipl.hr@live.com
For More Details Contact :
No. 768/500, Lokikere Main Road, Near Industrial Area, Davangere. Ph : 08192-262826 www.msiplgroup.com
M : 9902704996, 9945598998

ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :
ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001.
96861 95327

Mifse
AN ISO 9001:2015 CERTIFIED INSTITUTION
WALK-IN INTERVIEW
An ISO 9001-2015 Certified, India's leading Safety Institution requires candidates for following positions
Receptionist - 1 No.
Course Counselor - 2 Nos.
Center Head - 1 No.
Training Faculty - 2 Nos.
Subjects: Fire Safety, Industrial Safety, Construction Safety
Walk in: 17-03-2021 at 10:00 am
Email: info@mifse.com
Ph: 81232 20880 | 70222 89933
Address: MIFSE, 2nd Floor, BSC Avenue, Above SBI AVK College Road,Davangere - 577 002

ಜನ್ಮದಿನದ ಹಾರ್ದಿಕ ಶುಭಾಶಯಗಳು



ಇಂದು ಜನ್ಮದಿನದ ಸಂಭ್ರಮದಲ್ಲಿರುವ ತಾ.ಪಂ. ನಿವೃತ್ತ ಕಾರ್ಯನಿರ್ವಾಹಕ ಅಧಿಕಾರಿಗಳೂ, ನಮ್ಮೆಲ್ಲರ ಆತ್ಮೀಯರೂ ಆದ

ಶ್ರೀ ಎಲ್.ಎಸ್. ಪ್ರಭುದೇವ್

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

- ಎಲ್. ಸದಾನಂದ್
- ಹನುಮಂತಪ್ಪ ಹೆಚ್.
- ಮಹಾಂತೇಶ್ ಎನ್.
- ಸಂಕಪ್ಪ ಎಸ್.
- ರಾಜಪ್ಪ ಸಿ.ಎಸ್.
- ಎಸ್. ಮರುಳಸಿದ್ದೇಶ್ವರ

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte